೨೦೬

ವಿಯಟ್ನಾಂ ಅಂದು, ಇಂದು

ಕೆ. ಎಸ್. ಶಿವಣ್ಣ

ಪ್ರಚಾರಪುಸ್ತಕ ಮಾಲೆ—೨೦೬

ವಿಯಟ್ನಾಂ ಅಂದು, ಇಂದು

ಕೆ. ಎಸ್. ಶಿವಣ್ಣ, ಎಂ.ಎ.ಎ.ಎಂ. (ಯು.ಎಸ್.ಎ.)

ದೂರವಾಣಿ:
24226

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೪

ಮೊದಲನೆಯ ಮುದ್ರಣ : ೧೯೭೪

೫೦೦೦ ಪ್ರತಿಗಳು

ಹಕ್ಕುಗಳು ಲೇಖಕರವು

ಬೆಲೆ : ೨೫ ಪೈಸೆ

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ

ಮಾನಸಗಂಗೋತ್ರಿ, ಮೈಸೂರು_570012

ಮುದ್ರಕರು

ಮಿತ್ರ ಪ್ರಿಂಟರ್ಸ್

ವಿದ್ಯಾರಣ್ಯಪುರಂ, ಮೈಸೂರು-570008

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ, ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ, ವಿಶ್ವವಿದ್ಯಾನಿಲಯದ ವಿದ್ಯೆ, ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ, ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕ

ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನಗಳು ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನು ಉಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ. ಜನರಲ್ಲಿ ಜ್ಞಾನೋದಯವನ್ನುಂಟು ಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳಿವಳಿಕೆಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯಗಳನ್ನು ಕುರಿತು ಇನ್ನೂರಐದು ಪುಸ್ತಕಗಳು

ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷ ವಾಗಿದೆ.

ಶ್ರೀ ಕೆ. ಎಸ್. ಶಿವಣ್ಣರವರ 'ವಿಯಟ್ನಾಂ ಅಂದು, ಇಂದು' ಇದೀಗ ತಾನೆ ಈ ಮಾಲೆಯಲ್ಲಿ ಹೊರಬರುತ್ತಿದೆ. ಇದು ಹೆಚ್ಚು ಜನಪ್ರಿಯವಾಗಲೆಂದು ಆಶಿಸುತ್ತೇನೆ.

ಮೈಸೂರು

ದೇ. ಜವರೇಗೌಡ
ಕುಲಪತಿ

ಅರಿಕೆ

ಮಲ್ಲಾಡಿ ಹಳ್ಳಿಯಲ್ಲಿ ನಾನು ೧೨-೨-೧೯೭೨ ರಲ್ಲಿ ಕೊಟ್ಟ ಪ್ರಚಾರೋಪನ್ಯಾಸವೇ ಈ ಚಿಕ್ಕ ಹೊತ್ತಿಗೆಗೆ ಆಧಾರ. ಇದನ್ನು ಬರೆಯುವುದರಲ್ಲಿ ಆಂಗ್ಲ ಭಾಷೆಯಲ್ಲಿರುವ ಅನೇಕ ವಿದ್ವತ್ ಗ್ರಂಥ ಗಳನ್ನು ಬಳಸಿಕೊಂಡಿದ್ದೇನೆ. ಅವುಗಳ ಪಟ್ಟಿಯನ್ನು ಕಡೆಯಲ್ಲಿ ಕೊಡಲಾಗಿದೆ. ವಿಯಟ್ನಾಂ ದೇಶದ ಇತಿಹಾಸವನ್ನು ಅಭ್ಯಾಸ ಮಾಡಲು ಆಸಕ್ತಿಯನ್ನು ಕೆರಳಿಸಿದ ನನ್ನ ಗುರುಗಳಾದ ಹಾಗೂ ಮಾನಸಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕರಾದ ಡಾ. ಬಿ. ಷೇಕ್ ಆಲಿ ಯವರನ್ನು ಇಲ್ಲಿ ನೆನಸಿಕೊಳ್ಳಬೇಕು. ಅವರಿಗೂ ಮತ್ತು ಪ್ರಚಾರೋಪನ್ಯಾಸ ನೀಡಲು ಅವಕಾಶ ಮಾಡಿ ಕೊಟ್ಟ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಅಧಿಕಾರಿಗಳಿಗೂ ಮತ್ತು ಮಲ್ಲಾಡಿಹಳ್ಳಿ ಆಶ್ರಮದ ಗುರೂಜಿಯವರಿಗೂ ನನ್ನ ವಂದನೆಗಳು ಸಲ್ಲಬೇಕಾಗಿವೆ.

ಮೈಸೂರು

೧೦-೧೦-೧೯೭೨ **ಕೆ. ಎಸ್. ಶಿವಣ್ಣ**

ವಿಷಯಾನುಕ್ರಮಣಿಕೆ

ಪೀಠಿಕೆ

ವಿಯಟ್ನಾಂ, ಒಂದೇ ರೀತಿಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿನ್ನೆಲೆ ಮತ್ತು ಪರಂಪರೆಗಳನ್ನು ಹಿಂದಿನಿಂದಲೂ ಪಡೆದುಕೊಂಡು ಬಂದಿದ್ದು ೧೯೫೪ರಲ್ಲಿ ಉತ್ತರ ವಿಯಟ್ನಾಂ ಮತ್ತು ದಕ್ಷಿಣ ವಿಯಟ್ನಾಂಗಳೆಂದು ಒಡೆದು ಹೋಳಾಗಿ, ಇಂದು ವಿಶ್ವದ ಬಿಡಿಸಲಾರದ ರಾಜಕೀಯ ಕಗ್ಗಂಟಾಗಿದೆ. ವಿಶ್ವದ ಪ್ರಬಲ ರಾಷ್ಟ್ರಗಳಾದ ಅಮೆರಿಕ, ಚೀನಾ, ರಷ್ಯಗಳು ವಿಯಟ್ನಾಂನಲ್ಲಿ ತಮ್ಮ ತಮ್ಮ ಶಕ್ತಿ, ಪ್ರಭಾವಗಳನ್ನು ಪರೀಕ್ಷಿಸಿತ್ತಿರುವಂತಿದೆ.

ವಿಯಟ್ನಾಂಗೆ ಇದ್ದ ಇನ್ನೊಂದು ಹೆಸರು ಅನ್ನಾಂ ಎಂದು. ಅಲ್ಲಿಯ ಜನಾಂಗದವರನ್ನು ಅನ್ನಮಿಯರೆಂದು ಕರೆಯುತ್ತಾರೆ. ವಿಯಟ್ನಾಂ ಚೀನಿ ನಾಗರಿಕತೆಯ ಸರಹದ್ದಿನಲ್ಲೇ ಬೆಳೆದುಕೊಂಡು ಬಂದ ದೇಶ. ಚೀನಿ ಜನಾಂಗದ ವಲಸೆಯಿಂದಲೂ ಮತ್ತು ವಿವಿಧ ರೀತಿಯ ರಾಜಕೀಯ ನಿಯಂತ್ರಣಗಳಿಂದಲೂ, ವಿಯಟ್ನಾಂನಲ್ಲಿ ಚೀನಿ ಸಂಸ್ಕೃತಿಯ ಪ್ರಭಾವ ಹೆಚ್ಚಿತು. ಇಂದಿಗೂ ಈ ದೇಶದಲ್ಲಿ ಪ್ರಬಲವಾದ ಚೀನಿ ಜನಾಂಗದವರ ಗುಂಪೊಂದಿದೆ. ಈ ದೇಶ ಚೀನಾ ದೇಶದ ಪ್ರಸಿದ್ಧ ಜ್ಞಾನಿಗಳಾದ ಕನ್‌ಫ್ಯೂಷಿಯಸ್ (ಕ್ರಿ.ಪೂ. ೫೫೧–೪೭೯) ಮತ್ತು ಲಾವೋದ್ಸೆ (ಕ್ರಿ.ಪೂ. ೬೦೪) ಬೋಧಿಸಿದ ತತ್ವಗಳನ್ನು, ಅವರು ರಚಿಸಿದ ಸಂಘ ಸಂಸ್ಥೆಗಳನ್ನು ಮಾದರಿಯಾಗಿ ಪಡೆಯಿತು. ಚೀನಾದೊಡನೆ ಗಡಿ ಹೊಂದಿದ್ದ ಈ ದೇಶ, ಸಮುದ್ರದ ಮಾರ್ಗದಿಂದಲೂ ಚೀನಾಕ್ಕೆ ಹತ್ತಿರವಿದೆ. ಬೌದ್ಧಮತವು ವಿಯಟ್ನಾಂನಲ್ಲಿ ತನ್ನ ಪ್ರಭಾವವನ್ನು ಬೆಳೆಸಿ

ಕೊಂಡಿತು. ಫ್ರೆಂಚರ ಆಡಳಿತ ಕಾಲದಲ್ಲಿ ಕ್ಯಾಥೊಲಿಕ್ ಮತವೂ ಬೆಳೆಯಿತು.

ವಿಯಟ್ನಾಂನ ಜನ ಚೀನಿ ಬುಡಕಟ್ಟಿಗೆ ಸೇರಿದವರು. ಮೂಲತಃ ಈ ಜನಾಂಗ ಇಂದಿನ ಉತ್ತರ ವಿಯಟ್ನಾಂನ ಕೆಂಪುನದಿ ಪ್ರದೇಶದ ಟಾಂಗ್‌ಕಿಂಗ್ (Tongking) ನಲ್ಲಿ ವಾಸಿಸುತ್ತಿದ್ದರು, ಹಾಗೂ ಚೀನಿಯರ ಅಧೀನರಾಗಿದ್ದರು. ಕಾಲಕ್ರಮೇಣ ಈ ಜನಾಂಗ ದಕ್ಷಿಣ ವಿಯಟ್ನಾಂ ಕಡೆ ವಲಸೆ ಬಂದು ಮೇಕಾಂಗ್ (Mekong) ನದಿ ಮುಖಜ ಭೂಮಿಯಲ್ಲಿ ವಾಸಿಸುತಿದ್ದ ಚಾಂಪ್ಸ್ (Champs) ಎಂಬ ಜನಾಂಗದವರನ್ನು, ಕಾಂಬೋಡಿಯನ್ನರನ್ನು ಓಡಿಸಿ, ಆ ಪ್ರದೇಶವನೆಲ್ಲಾ ಆಕ್ರಮಿಸಿಕೊಂಡರು. ಅನೇಕ ಶತಮಾನಗಳವರೆಗೆ ಚೀನಾದೇಶದ ಅಧೀನವಾಗಿದ್ದ ವಿಯಟ್ನಾಂ ಹತ್ತೊಂಬತ್ತನೆಯ ಶತಮಾನದಲ್ಲಿ ಫ್ರೆಂಚರ ವಸಾಹತುನೀತಿಗೆ ಬಲಿಯಾಯಿತು.

ಉತ್ತರ ವಿಯಟ್ನಾಂನ ವಿಸ್ತೀರ್ಣ ೬೧,೨೯೩ ಚದುರಮೈಲಿಗಳು; ಜನಸಂಖ್ಯೆ ಸುಮಾರು ೧೫,೯೦೩,೦೦೦ (೧೯೬೦ರಲ್ಲಿ). ಹನಾಯ್ ದೇಶದ ರಾಜಧಾನಿ. ಹೈಫಾಂಗ್ ಮತ್ತೊಂದು ಮುಖ್ಯ ಪಟ್ಟಣ. ಕಮ್ಯುನಿಸ್ಟ್ ಸರಕಾರದ ಆಡಳಿತದಲ್ಲಿದೆ. ಈ ದೇಶವು ಉತ್ತರದಲ್ಲಿ ಕಮ್ಯೂನಿಷ್ಟ್ ಚೀನಾ, ಪೂರ್ವದಲ್ಲಿ ಟಾಂಕಿನ್ ಖಾರಿ ಮತ್ತು ದಕ್ಷಿಣ ಚೀನಾ ಸಮುದ್ರ, ದಕ್ಷಿಣದಲ್ಲಿ ದಕ್ಷಿಣ ವಿಯಟ್ನಾಂ, ಪಶ್ಚಿಮದಲ್ಲಿ ಲಾವೊದೇಶವನ್ನು ಮೇರೆಯಾಗಿ ಪಡೆದಿದೆ.

ಕೆಲವು ತಗ್ಗು ಪ್ರದೇಶಗಳನ್ನು ಬಿಟ್ಟರೆ ಉತ್ತರ ವಿಯಟ್ನಾಂ ಸಂಪೂರ್ಣ ಪ್ರಸ್ಥಭೂಮಿಯಿಂದ ಕೂಡಿದೆ. ಪೂರ್ವತೀರದಲ್ಲಿ ಬೆಟ್ಟ ಗುಡ್ಡಗಳಿರುವುದರಿಂದ ಸಂಚಾರಕ್ಕೆ ಅಡಚಣೆಯಾಗಿವೆ. ಇತ್ತೀಚೆಗೆ ಈ ಪ್ರದೇಶದ ಪೂರ್ವ ತೀರದಲ್ಲಿ ದಕ್ಷಿಣದಿಂದ ಉತ್ತರದ

ವರೆಗೂ ಒಂದು ರೈಲು ಮಾರ್ಗವನ್ನು ಹಾಕಿದ್ದಾರೆ. ಇಲ್ಲಿಯ ಮುಖ್ಯ ಬೆಳೆ ಬತ್ತ ಮತ್ತು ಟೀ. ರೇಷ್ಮೆ ಮತ್ತು ಮೀನಿನ ಕೈಗಾರಿಕೆ ಈ ಪ್ರದೇಶದಲ್ಲಿ ಬಹಳವಾಗಿ ಅಭಿವೃದ್ಧಿಯಾಗಿದೆ. ಈ ದೇಶದ ಉತ್ತರ ಭಾಗದಲ್ಲಿ ಬೆಟ್ಟಗಳ ಶ್ರೇಣಿಗಳಿವೆ. ಬೆಟ್ಟಗಳ ಮಧ್ಯದಲ್ಲಿರುವ ಕಣಿವೆಗಳಲ್ಲಿ ಹರಿಯುವ ಸಣ್ಣ ನದಿಗಳ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಾರೆ. ಇಲ್ಲಿಯ ಮುಖ್ಯವಾದ ನದಿ ಕೆಂಪು ನದಿ (Red River).

ಉತ್ತರ ವಿಯಟ್ನಾಂ ಬಹಳ ಖನಿಜ ಸಂಪತ್ತಿನಿಂದ ಕೂಡಿದ್ದರೂ ಅವುಗಳ ಉತ್ಪಾದನೆ ಬಹಳ ಕಡಿಮೆಯಾಗಿದೆ. ಕಲ್ಲಿದ್ದಲು, ತವರ, ಮ್ಯಾಂಗನೀಸ್, ಸತು, ವುಲ್‌ಫ್ರಾಮ್ದಿಂ, ಸೀಸ, ಬೆಳ್ಳಿ, ಆಂಟಿಮನಿ, ಕ್ರೋಮೈಟ್, ಕಬ್ಬಿಣ ಮೊದಲಾದ ಖನಿಜಗಳು ದೊರೆಯುತ್ತವೆ. ಅಕ್ಕಿಯಿಂದ ತಯಾರಿಸಿದ ಮದ್ಯ, ಸಕ್ಕರೆ, ಸಿಮೆಂಟ್, ಸಿಗರೇಟ್, ಸಾಬೂನು ಮತ್ತು ಬೆಂಕಿಪೆಟ್ಟಿಗೆ ತಯಾರಿಸುವ ಕೈಗಾರಿಕೆಗಳಿವೆ.

ಅಕ್ಕಿ, ರಬ್ಬರ್, ಜೋಳ, ಕಲ್ಲಿದ್ದಲು, ಮೀನು, ಟಿನ್, ಅದಿರು, ಸಿಮೆಂಟ್, ಸಕ್ಕರೆ, ಮೆಣಸು, ಬೀರ್, ಸಿಗರೇಟ್, ಕ್ರೋಮಿಯಂ, ಮ್ಯಾಂಗನೀಸ್, ಉಪ್ಪುಗಳನ್ನು ಉತ್ತರ ವಿಯಟ್ನಾಂ ಪರದೇಶಗಳಿಗೆ ರಫ್ತು ಮಾಡುತ್ತದೆ. ಪರದೇಶಗಳಿಂದ ಹತ್ತಿ, ಕಬ್ಬಿಣ, ಉಕ್ಕು, ಪೇಪರ್, ಯಂತ್ರೋಪಕರಣಗಳು, ವಾಹನಗಳು, ಆಲೂಗೆಡ್ಡೆ, ಉತ್ತಮ ಕಲ್ಲಿದ್ದಲು, ಗಾಜುಗಳನ್ನು ಆಮದು ಮಾಡಿಕೊಳ್ಳುತ್ತದೆ. ಇತ್ತೀಚೆಗೆ ರಾಯಭಾರಿ ಮಟ್ಟದ ರಾಜತಾಂತ್ರಿಕ ಸಂಬಂಧವನ್ನು ಬೆಳಸಿಕೊಂಡ ಭಾರತ, ಉತ್ತರ ವಿಯಟ್ನಾಂನಿಂದ ಅಕ್ಕಿಯನ್ನು ಆಮದು ಮಾಡಿಕೊಂಡು ಹತ್ತಿ ಮತ್ತು ಸೆಣಬನ್ನು ರಫ್ತು ಮಾಡುತ್ತದೆ.

ದಕ್ಷಿಣ ವಿಯಟ್ನಾಂನ ವಿಸ್ತೀರ್ಣ ೧೫,೯೪೪ ಚದುರಮೈಲಿಗಳು; ಜನಸಂಖ್ಯೆ ೧೩,೯೬೦,೦೦೦ (೧೯೬೪ರಲ್ಲಿ). ಸೈಗಾನ್ ಈ ದೇಶದ ರಾಜಧಾನಿ. ದಕ್ಷಿಣ ವಿಯಟ್ನಾಂ ಮೇಕಾಂಗ್ ನದಿಯ ಬಯಲಿ ನಲ್ಲಿರುವುದರಿಂದ ಬಹುಭಾಗ ಜೌಗು ಪ್ರದೇಶವಾಗಿದೆ. ಬತ್ತವು ಈ ಪ್ರದೇಶದ ಮುಖ್ಯ ಬೆಳೆಯಾಗಿದ್ದು, ಇಲ್ಲಿ ಜನಸಾಂದ್ರತೆ ಬಹಳ ವಾಗಿದೆ. ಬತ್ತವನ್ನು ಪರದೇಶಗಳಿಗೆ ರಫ್ತುಮಾಡಲಾಗುತ್ತದೆ.

ವಿಯಟ್ನಮಿಯರೆಂದು ಕರೆಯಲ್ಪಡುವ ಈ ಜನಾಂಗದವರು ಇಂಡೋಚೀನಾ ಪರ್ಯಾಯದ್ವೀಪದ ಎಲ್ಲಾ ಭಾಗಗಳಲ್ಲೂ ಹರಡಿ ಕೊಂಡಿದ್ದಾರೆ. ಈ ಜನಾಂಗದ ತೌರುಮನೆ ಎಂದರೆ ಕೆಂಪು ಮತ್ತು ಕಪ್ಪುನದಿಗಳು ಹರಿಯುತ್ತಿರುವ ಇಂದಿನ ಉತ್ತರ ವಿಯಟ್ನಾಂ ದೇಶದ ಟಾಂಗ್‌ಕಿಂಗ್ ಪ್ರಾಂತ್ಯ (Tongking). ಅಲ್ಲಿಂದ ಈ ಜನ ಶತಮಾನಗಳ ಕಾಲದಲ್ಲಿ ಅನ್ನಾಂನ ಕರಾವಳಿ ಪ್ರದೇಶ, ಇಂದಿನ ದಕ್ಷಿಣ ವಿಯಟ್ನಾಂ ಕೊಚಿನ್-ಚೀನಾದಲ್ಲಿರುವ ಮೇಕಾಂಗ್ ನದಿಯ ಮುಖಜ ಭೂಮಿ ಪ್ರದೇಶಗಳಿಗೆ ವಲಸೆ ಬಂದು ಅಲ್ಲೆಲ್ಲಾ ಹರಡಿಕೊಂಡು ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿ ಕೊಂಡರು. ಹದಿನೈದನೆ ಶತಮಾನದಲ್ಲಿ ಛಾಂ ಜನಾಂಗದವರನ್ನು ಸೋಲಿಸಿ ದಕ್ಷಿಣದ ಕಡೆಗೆ ಬಂದರು.

ವಿಯಟ್ನಾಮಿ ಜನಾಂಗದವರ ಮೂಲದ ಬಗ್ಗೆ ಪಂಡಿತರಲ್ಲಿ ಭಾಷಾ ತಜ್ಞರಲ್ಲಿ ವಾದವಿವಾದಗಳಿವೆ. ಈ ಜನಾಂಗದವರು ಟಾಂಗ್‌ಕಿಂಗ್ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದ ಮೂಲ ನಿವಾಸಿ ಗಳಿಗೂ, ಮತ್ತು ಒಂದು ಮಂಗೋಲಿಯನ್ನರ ಗುಂಪಿಗೂ ಉಂಟಾದ ವಿವಾಹ ಸಂಬಂಧಗಳಿಂದ ಉದ್ಭವವಾದ ಜನಾಂಗದವರೆಂದು ಒಂದು ಸಾಮಾನ್ಯ ಅಭಿಪ್ರಾಯವಿದೆ. ಈ ಮಂಗೋಲಿಯನ್ನರ ಬುಡಕಟ್ಟಿಗೆ ಸೇರಿದ ಜನರು ದಕ್ಷಿಣಚೀನಾದೇಶದ ಪ್ರಾಂತ್ಯಗಳಾದ ಚೇಕಿಯಾಂಗ್

(Chekiang) ಫುಕೇನ್ (Fukıen) ಕ್ವಾಂಗ್‌ಟುಂಗ್ (Kwangtung) ಮತ್ತು ಕ್ವಾಂಗ್‌ಸೀ (Kwangsi) ಗಳಿಂದ ಯಾಂಗ್ ಸಿಕಿಯಾಂಗ್ ನದಿಯ ಮೂಲಕ ಟಾಂಗ್‌ಕಿಂಗ್‌ಗೆ ಬಂದರೆಂದು ಮತ್ತೊಂದು ಅಭಿಪ್ರಾಯವಿದೆ.

ವಿಯಟ್ನಾಮಿಯರ ಭಾಷೆ ಅನೇಕ ಭಾಷೆಗಳ ಪ್ರಭಾವದಿಂದ ಬೆಳೆದುದಾಗಿದೆ. ಆಗ್ನೇಯ ಏಷ್ಯದ ಪ್ರಮುಖ ಜನಾಂಗವಾದ ಥಾಯ್ ಜನಾಂಗದವರ ಭಾಷೆಯ ಪ್ರಭಾವ ಇಲ್ಲಿ ಪ್ರಧಾನವಾಗಿ ಕಾಣಬರುತ್ತದೆ. ಇದಲ್ಲದೆ ಮಾನ್-ಕೆಮರ್ ಭಾಷೆಗಳ ಪ್ರಭಾವವೂ ವಿಯಟ್ನಾಮಿಯರ ನುಡಿಯಲ್ಲಿ ಎದ್ದು ಕಾಣುತ್ತದೆ. ಕೆಲವು ಭಾಷಾ ಪಂಡಿತರು ವಿಯಟ್ನಾಮಿಯರ ಭಾಷೆಯನ್ನು ಮಾನ್-ಖೆಮರ್ ಭಾಷಾಗುಂಪಿಗೆ ಸೇರಿಸುವುದು ಉಂಟು.

ಹೀಗೆ ವಿಯಟ್ನಾಂ ವಿವಿಧ ಸಂಸ್ಕೃತಿಗಳು, ಭಾಷೆಗಳು, ಸಂಧಿಸುವ ಹೆದ್ದಾರಿಯಾಗಿದ್ದು ಪರದೇಶಗಳಿಂದ ಮೂಲದಲ್ಲಿ ಸಂಸ್ಕೃತಿಯ ಅನೇಕ ಅಂಶಗಳನ್ನು ಪಡೆದು ಕೊಂಡಿದ್ದರೂ ತನ್ನದೇ ಆದ ನಾಗರಿಕತೆಯನ್ನು ಬೆಳೆಸಿಕೊಂಡು ಬಂದಿದೆ.

ವಿಯಟ್ನಾಮಿನ ಪ್ರಾಚೀನ ಇತಿಹಾಸ

(ಫ್ರೆಂಚರ ಆಡಳಿತ ಕಾಲದ ಪ್ರಾರಂಭದವರೆಗೆ)

ವಿಯಟ್ನಾಂನ ಇತಿಹಾಸ ಪ್ರಮುಖವಾಗಿ ಎರಡುಜನಾಂಗಗಳಾದ ಛಾಂ (Cham) ಮತ್ತು ವಿಯಟ್ನಾಮಿಯರ (ಅಥವಾ ಅನ್ನಾಮಿಯರ) ಚರಿತ್ರೆಯೇ ಆಗಿದೆ. ವಿಯಟ್ನಾಮಿಯರು ಚೀನೀ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರೆ, ಛಾಂ ಜನಾಂಗದವರು ಹಿಂದೂ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರು. ಮೊದಲು ಈ

ರಾಜ್ಯದ ಇತಿಹಾಸವನ್ನು ಸ್ಥೂಲವಾಗಿ ವಿವೇಚಿಸಿ, ಅನಂತರ ವಿಯಟ್ನಾಮಿಯರ ಇತಿಹಾಸವನ್ನು ನೋಡೋಣ.

ವಿಯಟ್ನಾಂನ ಪೂರ್ವ ಕರಾವಳಿ ಪ್ರದೇಶದಲ್ಲಿ ಚಂಪಾರಾಜ್ಯ ವಿತ್ತು. ಛಾಂ ಜನಾಂಗದವರು ಈ ಪ್ರದೇಶದಲ್ಲಿ ಕ್ರಿ.ಶ. ೩ನೇ ಶತಮಾನದಿಂದ ಕ್ರಿ.ಶ. ೧೫ನೇ ಶತಮಾನದವರೆಗೆ ಆಳಿದರು. ಈ ಜನ ಮಲೆ–ಪಾಲಿನೇಷಿಯಾ (Malay-Poleynasia) ಬುಡ ಕಟ್ಟಿಗೆ ಸೇರಿದವರು. ಸಮುದ್ರಯಾನದಲ್ಲಿ ಪಳಗಿದ ಈ ಜನರ ಮುಖ್ಯ ಕಸುಬು ವ್ಯಾಪಾರ, ವಾಣಿಜ್ಯವಾಗಿತ್ತು. ಫಲವತ್ತಾದ, ಸಾಕಷ್ಟು ವ್ಯವಸಾಯ ಯೋಗ್ಯವಾದ ಭೂಮಿ ಇಲ್ಲದ್ದರಿಂದ, ಈ ಜನರ ಜೀವನ ಸಮುದ್ರದ ಮುಖಾಂತರ ನಡೆಯುವ ವ್ಯಾಪಾರ, ಹಾಗೂ ಭೂಮಿಯಲ್ಲಿ ದೊರೆಯುವ ನೈಸರ್ಗಿಕ ಸಂಪತ್ತಿನ ಮೇಲೆ ಅವಲಂಬಿತವಾಗಿತ್ತು.

ಹಿಂದೂಗಳು ಎರಡನೇ ಶತಮಾನಕ್ಕೂ ಹಿಂದೆ ಇಲ್ಲಿಗೆ ವಲಸೆ ಬಂದು ನೆಲೆಸಿದರು. ಅವರಿಂದ ಹಿಂದೂ ಸಂಸ್ಕೃತಿಯು ಈ ದೇಶ ದಲ್ಲಿ ಹರಡಿತು. ಶ್ರೀಮಾರನೆಂಬುವನು ಚಂಪಾದೇಶದ ಮೊದಲ ರಾಜ. ಇವನು ಕ್ರಿ.ಶ. ೧೯೦ ರಲ್ಲಿ ಆಡಳಿತ ಪ್ರಾರಂಭಿಸಿದನು. ಅಮರಾವತಿ ಅಥವಾ ಉತ್ತರ ಚಂಪಾದಲ್ಲಿದ್ದ ಇಂದ್ರಪುರ ಇವನ ರಾಜಧಾನಿಯಾಗಿತ್ತು. ಇವನ ಉತ್ತರಾಧಿಕಾರಿಯ ಕಾಲವನ್ನು ನಿರೂಪಿಸಿದ ಸಂಸ್ಕೃತ ಶಾಸನವೊಂದು ದೊರೆತಿದೆ. ಇದಕ್ಕೆ ವೋಚಾನ್ (Vochan) ಶಾಸನವೆಂದು ಹೆಸರು. ಲಿಪಿಯಲ್ಲಿ ಹಾಗೂ ಶಾಸನ ರಚನೆಯಲ್ಲಿ ಇದಕ್ಕೂ ಭಾರತದ ಕಳಿಂಗ ದೇಶದ ರಾಜನಾದ ರುದ್ರದಾಮನ (ಕ್ರಿ.ಶ. ೧೫೦) ಗಿರ್‌ನಾರ್ ಶಾಸನಕ್ಕೂ ನಡುವೆ ಅನೇಕ ಹೋಲಿಕೆಗಳಿವೆ; ಈ ವೋಚಾನ್ ಶಾಸನದ ಕಾಲ ಕ್ರಿ.ಶ. ೩ನೇ ಶತಮಾನವಿರಬೇಕೆಂದು ವಿದ್ವಾಂಸರ

ಅಭಿಪ್ರಾಯ. ಇಂಡೋಚೀನಾ ಪರ್ಯಾಯ ದ್ವೀಪದಲ್ಲಿ ದೊರೆತಿರುವ ಶಾಸನಗಳಲ್ಲೆಲ್ಲಾ ಇದೇ ಪ್ರಾಚೀನವೆಂದಂತಾಯಿತು. ಏಕೆಂದರೆ ಬೋರ್ನಿಯೋದಲ್ಲಿ ದೊರೆತಿರುವ ಮೂಲವರ್ಮನ ಯೂಪಶಾಸನ ಗಳ ಕಾಲ ಕ್ರಿ.ಶ. ಸುಮಾರು ೪೦೦ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ.

ಹನ್ನೆರಡು ರಾಜಮನೆತನಗಳು ಚಂಪಾದೇಶವನ್ನು ಆಳಿದವು. ಮೊದಲನೇ ಮನೆತನ ಹಿಂದೂ ಸಂಸ್ಕೃತಿಯನ್ನು ಚಂಪಾದೇಶದಲ್ಲಿ ಪ್ರತಿಷ್ಠಾಪಿಸಿತು. ವೋಚಾನ್ ಶಾಸನವನ್ನು ಸಾಮಾನ್ಯವಾಗಿ ಹಿಂದೂ ಧರ್ಮದ ದಾಖಲೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಕೆಲವರು ಅಶೋಕನ ಶಾಸನದ ಭಾವನೆಗಳೇ ಈ ಶಾಸನವು ಚಿತ್ರಿಸುವುದರಿಂದ ಅದು ಬೌದ್ಧ ಧರ್ಮದ ದಾಖಲೆ ಎಂದು ವಾದಿಸುವುದುಂಟು.

ಕ್ರಿ.ಶ. ೩೬೦ ರಲ್ಲಿ ಎರಡನೇ ರಾಜಮನೆತನ ಅಧಿಕಾರಕ್ಕೆ ಬಂತು. ಈ ಮನೆತನಕ್ಕೆ ಸೇರಿದ ಭದ್ರವರ್ಮ (೩೮೦–೪೧೩) ನೆಂಬುವನು ಶೈವ ಮತಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದುದೇ ಅಲ್ಲದೆ, ಭದ್ರೇಶ್ವರ ಎಂಬ ಹೆಸರಿನ ಶಿವ ದೇವಾಲಯವನ್ನು ಮಿಸಾನ್ (Mison) ಬಳಿ ಕಟ್ಟಿಸಿದನು. ಇವನ ಮಗ ಗಂಗ ರಾಜನೆಂಬುವನು ಉತ್ತರ ಭಾರತಕ್ಕೆ ಹೋಗಿ ಗಂಗಾನದಿಯ ದರ್ಶನ ಮಾಡಿದನೆಂದು ಇತಿಹಾಸವಿದೆ. ಬೋಸ್ ಎಂಬ ಇತಿಹಾಸಕರು ಹೇಳುವಂತೆ "ಪರದೇಶದಲ್ಲಿ ನೆಲೆಸಿದ ಭಾರತೀಯ ನೊಬ್ಬ ಬ್ರಾಹ್ಮಣಮತ ಅನುಯಾಯಿಯಾಗಿ ತೀರ್ಥಯಾತ್ರೆ ಕೈಗೊಂಡುದು ಇದೇ ಮೊದಲ ಉದಾಹರಣೆ". ಮೂರನೆಯ ಮನೆತನದ ಆಳ್ವಿಕೆಯ ಕಾಲದಲ್ಲಿ (೪೨೦–೫೨೮) ಚೀನಾದೇಶದಿಂದ ತೊಂದರೆಗಳುಂಟಾದವು. ನಾಲ್ಕನೆಯ ರಾಜಮನೆತನಕ್ಕೆ ಸೇರಿದ

ಮೊದಲನೇ ರುದ್ರವರ್ಮ (೫೨೯–೭೫೭) ನನ್ನು ಬ್ರಹ್ಮ-ಕ್ಷತ್ರಿಯನೆಂದು ವರ್ಣಿಸಲಾಗಿದೆ. ಅವನ ಮಗ ಹಾಗೂ ಉತ್ತರಾಧಿಕಾರಿಯಾಗಿದ್ದ ಶಂಭುವರ್ಮನೆಂಬುವನು ಚೀಣಿಯರ ಧಾಳಿಯನ್ನು ಎದುರಿಸಲಾರದೆ ಓಡಿಹೋದನು. ಚೀನಿಯರು ಚಂಪಾದಿಂದ ಬೌದ್ಧಧರ್ಮಕ್ಕೆ ಸಂಭಂದಪಟ್ಟ ೧೩೫೦ ಗ್ರಂಥಗಳನ್ನು ಹೊತ್ತುಕೊಂಡು ಹೋದರೆಂದು ಗೊತ್ತಾಗುತ್ತದೆ. ಚೀನಿಯರು ಕಾಲ್ತೆಗೆದ ಮೇಲೆ ಶಂಭುವರ್ಮನು ಮರಳಿ ತನ್ನ ರಾಜ್ಯಕ್ಕೆ ಬಂದು ತನ್ನ ತಂದೆಯ ಕಾಲದಲ್ಲಿ ಬೆಂಕಿಯ ಆಕಸ್ಮಿಕಕ್ಕೆ ತುತ್ತಾಗಿದ್ದ ಭದ್ರೇಶ್ವರ ದೇವಾಲಯದ ಜೀರ್ಣೋದ್ಧಾರವನ್ನು ಮಾಡಿಸಿದನು.

ಐದನೆಯ ರಾಜವಂಶ ೭೫೮ ರಿಂದ ೮೫೯ರ ವರೆಗೆ ಆಳಿತು. ಪಾಂಡುರಂಗ ಅಥವಾ ದಕ್ಷಿಣ ಚಂಪಾದಲ್ಲಿನ ವೀರಪುರವೇ ಇವರ ರಾಜಧಾನಿಯಾಗಿತ್ತು. ೭೪೪ ಮತ್ತು ೭೮೭ರಲ್ಲಿ ಇಂಡೋನೇಷಿಯಾದ ಶೈಲೇಂದ್ರರು ಚಂಪಾರಾಜ್ಯದ ಕರಾವಳಿ ಪ್ರದೇಶದ ಮೇಲೆ ಧಾಳಿ ನಡೆಸಿದರು. ಅನೇಕ ದೇವಾಲಯಗಳು ನಾಶವಾದವು. ಚಂಪಾದ ರಾಜರು ಈ ಘಟನೆ ನಡೆದ ಸ್ವಲ್ಪ ಕಾಲದಲ್ಲಿಯೇ ಪುನಃ ದೇವಸ್ಥಾನಗಳನ್ನು ಕಟ್ಟಿ ಶಿವ, ಶಂಕರನಾರಾಯಣ ಗಣಪತಿ ಮತ್ತು ಭಗವತಿ ಮೊದಲಾದ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು.

ಆರನೆಯ ರಾಜವಂಶಕ್ಕೆ ಸೇರಿದ ಎರಡನೆ ಇಂದ್ರವರ್ಮನು (೮೬೦-೯೦೦) ಇಂದ್ರಪುರವೆಂಬ ರಾಜಧಾನಿಯನ್ನು ಕಟ್ಟಕೊಂಡು ಆಡಳಿತ ನಡೆಸಿದನು. ಈತನು ಬುದ್ಧನನ್ನು ಪೂಜಿಸುತ್ತಿದ್ದನು. ಕ್ರಿ.ಶ. ೮೭೫ನೇ ವರ್ಷದ ಅವನ ಶಾಸನವೊಂದು ಅವನು ಬೌದ್ಧ ಮಠವೊಂದನ್ನು ಕಟ್ಟಿಸಿದನೆಂದು ಹೇಳುತ್ತದೆ. ಅವನ ಮಗ ಮೊದಲನೇ ಜಯಸಿಂಹವರ್ಮ ಮತ್ತು ಅವನ ದಂಡನಾಯಕ

ಶಿವಾಚಾರ್ಯರು ಶೈವಮತಕ್ಕೇ ಪ್ರೋತ್ಸಾಹಕೊಟ್ಟರು. ಏಳನೆ ರಾಜವಂಶಕ್ಕೆ (೯೦೦-೯೮೬) ಸೇರಿದ ಹರವರ್ಮನೆಂಬುವನು, ಹಿಂದೂ ವೇದಾಂತ ಬಗ್ಗೆ ಜ್ಞಾನಿಯಾಗಿಯೂ ಪ್ರಖ್ಯಾತ ವ್ಯಾಕರಣಿಯೂ ಆಗಿದ್ದನು. ಅವನು ಭಗವತಿದೇವಿಯ ಆರಾಧಕನಾಗಿದ್ದನು. ಅವನು ಪ್ರತಿಷ್ಠಾಪಿಸಿದ ಸುಂದರವಾದ ಭಗವತಿದೇವಿಯ ಮೂರ್ತಿಯನ್ನು ಕ್ಯಾಂಬೋಡಿಯಾದ ರಾಜೇಂದ್ರವರ್ಮನೆಂಬುವನು ಕ್ರಿ.ಶ. ೯೪೫ರಲ್ಲಿ ಕೊಂಡೊಯ್ದನು.

ಉತ್ತರ ವಿಯಟ್ನಾಂನಲ್ಲಿ ಆಳುತ್ತಿದ್ದ ವಿಯಟ್ನಾಮಿಯರ ಅಥವಾ ಅನ್ನಾಮಿಯರ ರಾಜರು ಕ್ರಿ.ಶ. ೯೮೨ರಲ್ಲಿ ಚಂಪಾ ರಾಜಧಾನಿಯಾದ ಇಂದ್ರಪುರವನ್ನು ನಾಶಮಾಡಿದರು. ಎಂಟನೆ ರಾಜಮನೆತನದ ಮೂಲಪುರುಷನಾದ (೯೮೯-೧೦೪೪) ಐದನೆ ಇಂದ್ರವರ್ಮನು (೯೮೯-೯೯೯) ವಿಜಯ ಎಂಬ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಈ ಪಟ್ಟಣ ಮಧ್ಯಚಂಪಾದಲ್ಲಿತ್ತು. ಅವನ ಉತ್ತರಾಧಿಕಾರಿ ರಾಜಧಾನಿಯನ್ನು ಇಂದ್ರಪುರಕ್ಕೆ ೯೯೯ರಲ್ಲಿ ಬದಲಾಯಿಸಿದನು. ೧೦೪೪ರಲ್ಲಿ ಅನ್ನಾಮಿಯರು ನಡೆಸಿದ ಧಾಳಿಗೆ ಎಂಟನೇ ರಾಜಮನೆತನದ ಆಳ್ವಿಕೆ ತುತ್ತಾಯಿತು. ಒಂಭತ್ತನೆ ರಾಜವಂಶದ ಮೊದಲನೆ ದೊರೆ (೧೦೪೪-೧೦೭೪) ದಕ್ಷಿಣ ಚಂಪಾ ರಾಜ್ಯದಲ್ಲಿ ತಲೆ ಎತ್ತಿದ್ದ ದಂಗೆಯನ್ನು ಅಡಗಿಸಿದನು. ಮೂರನೆಯ ರುದ್ರವರ್ಮನ (೧೦೬೧-೧೦೭೪) ಕಾಲದಲ್ಲಿ ವಿಯಟ್ನಾಮಿಯರು ೧೦೬೯ರಲ್ಲಿ ಮೂರನೆ ಸಾರಿ ಚಂಪಾವನ್ನು ಮುತ್ತಿದರು. ಚಂಪಾ ರಾಜ್ಯದಲ್ಲಿ ಇದರಿಂದ ದುಷ್ಪರಿಣಾಮಗಳುಂಟಾದವು. ಹತ್ತನೆ ರಾಜವಂಶಕ್ಕೆ ಸೇರಿದ ಮೂರನೇ ಹರಿವರ್ಮನು (೧೦೭೪-೧೧೫೯) ವಿಯಟ್ನಾಮಿಯರನ್ನು, ಕಾಂಬೋಡಿಯನ್ನರನ್ನೂ ತಡೆಗಟ್ಟಿ ಚಂಪಾ ರಾಜ್ಯವನ್ನು ಅದರ ರಾಜಧಾನಿಯಾದ ಇಂದ್ರಪುರವನ್ನು ಕಾಪಾಡಿ

ದನು. ೧೦೮೦ರಲ್ಲಿ ಅವನು ಮರಣ ಹೊಂದಿದಾಗ, ಅವನ ನಾಲ್ಕು ಜನ ರಾಣಿಯರು ಬೆಂಕಿಗೆ ಹಾರಿ ಸಾವನ್ನಪ್ಪಿದರು. ಇವನ ನಂತರ ಮೂರನೆ ಇಂದ್ರವರ್ಮನು (೧೧೩೯-೧೧೪೫) ಹನ್ನೊಂದನೇ ವಂಶದ ಆಳ್ವಿಕೆಯನ್ನು ಪ್ರಾರಂಭಿಸಿದನು. ಈತನು ಶಿವ, ವಿಷ್ಣು ಮತ್ತು ಬುದ್ಧರ ಪೂಜಾರಾಧಕನಾಗಿದ್ದನು. ಕಾಂಬೋಡಿಯಾ ದೊಡನೆ ಯುದ್ಧವನ್ನು ಕೊನೆಗಾಣಿಸಿ ಶಾಂತಿಸಂಧಾನವನ್ನು ಏರ್ಪಡಿಸಿದನು. ಹನ್ನೆರಡನೆ ರಾಜವಂಶದ ಆಳ್ವಿಕೆಯ ಕಾಲದಲ್ಲಿ (೧೧೪೯-೧೪೭೧) ಚಂಪಾರಾಜ್ಯ ವಿಯಟ್ನಾಮಿಯರ ಕೈಯಲ್ಲಿ ಸಂಪೂರ್ಣ ನಾಶವಾಯಿತು.

ಇಲ್ಲಿನ ಜನ ಶೂರರಾಗಿದ್ದು ಸಮುದ್ರದ ಮೂಲಕ ವ್ಯಾಪಾರ ಮಾಡುತ್ತಿದ್ದರು. ಚಂಪಾದೇಶದಿಂದ ಕರ್ಪೂರ, ಗಂಧದಮರ, ಪಿಂಗಾಣಿ ವಸ್ತುಗಳು, ಅರಗು, ಸಕ್ಕರೆ, ಸೀಸ ಮತ್ತು ಚಿನ್ನವನ್ನು ರಫ್ತುಮಾಡಲಾಗುತ್ತಿತ್ತು. ತಮ್ಮ ತೀರದ ಬಳಿ ಪರದೇಶದ ಹಡಗು ಗಳು ಪದಾರ್ಥಗಳನ್ನು ಹೇರಿಕೊಂಡು ಹೋಗುತ್ತಿದ್ದಾಗ, ಛಾಂ ಜನರು ಅವುಗಳ ಮೇಲೆ ಮುತ್ತಿಗೆ ನಡೆಸಿ, ಹಡಗಿನಲ್ಲಿರುವ ವಸ್ತು ಗಳ ಶೇಕಡಾ ೩೦ರಷ್ಟು ಬೆಲೆಯನ್ನು ವಸೂಲಿಮಾಡಿ ಜೀವನ ನಡೆಸುತ್ತಿದ್ದುದು ಉಂಟು. ನೂರು ಹಡಗುಗಳ, ದೋಣಿಗಳ ಒಂದು ಪಡೆಗೆ ಒಬ್ಬ ಛಾಂ (Cham) ರಾಜಕುಮಾರ ಮುಖಂಡ ನಾಗಿದ್ದನು. ಛಾಂ ಸೈನ್ಯ ಸಣ್ಣದಾಗಿದ್ದರೂ ಶಿಸ್ತಿನದಾಗಿತ್ತು. ಅಶ್ವಬಲ, ಆನೆಬಲ, ಸೈನ್ಯದ ಮುಖ್ಯ ಅಂಗಗಳಾಗಿದ್ದವು. ಛಾಂ ನಗರಗಳಸುತ್ತ ಕೋಟೆಗಳಿದ್ದು ಸುರಕ್ಷಿತವಾಗಿದ್ದವು. ರಾಜ್ಯದಲ್ಲಿ ಅಮರಾವತಿ, ವಿಜಯ ಮತ್ತು ಪಾಂಡುರಂಗಗಳೆಂಬ ಮೂರು ಮುಖ್ಯ ಪ್ರಾಂತ್ಯಗಳಿದ್ದವು.

ಆಗ್ನೇಯ ಏಷ್ಯಾದ ಜನಾಂಗಗಳಲ್ಲೆಲ್ಲಾ ಹಿಂದೂ ಸಂಸ್ಕೃತಿ ಹೆಚ್ಚು ಪ್ರಭಾವ ಬೀರಿದ್ದು ಛಾಂ ಜನರ ಮೇಲೆಂದು ಕಾಣುತ್ತದೆ. ಈ ಜನರು ಬ್ರಹ್ಮನಿಗಾಗಿ ದೇವಾಲಯಗಳನ್ನು ಕಟ್ಟಿದುದು ಒಂದು ವಿಶೇಷ. ಏಕೆಂದರೆ ಬ್ರಹ್ಮನಿಗೆ ಕಟ್ಟಿದ ದೇವಾಲಯಗಳು ಬಹು ಅಪರೂಪ. ಈ ಕಾಲದಲ್ಲಿ ಶೈವಮತ ಪ್ರಬಲವಾಗಿತ್ತು. ಗಣಪತಿ, ಸ್ಕಂದ, ನಂದಿ, ಗರುಡ, ಮೊದಲಾದವರ ಪೂಜೆಯನ್ನು ಈ ಜನರು ಮಾಡುತ್ತಿದ್ದರು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜನಿಗಿರಬೇಕಾದ ಗುಣಗಳು, ರಾಜ್ಯರಚನೆಗೆ ಸಂಬಂಧಪಟ್ಟ ವಿಷಯಗಳು, ಮಿಸಿಯಾನ್ (Mision) ಎಂಬಲ್ಲಿ ದೊರೆತಿರುವ ಶಾಸನದಲ್ಲಿ ಬರೆಯಲಾಗಿದೆ. ಈ ಜನಾಂಗದವರಲ್ಲಿ ವಿಧವೆಯರಿಗೆ ಪುನರ್‌ವಿವಾಹ ಮಾಡಿಕೊಳ್ಳುವ ಅಧಿಕಾರವಿರಲಿಲ್ಲ. ರಾಜ ಸತ್ತಾಗ ರಾಣಿಯರು ಸಹಗಮನ ಮಾಡುತ್ತಿದ್ದರು. ಈ ಜನರಿಗೆ ಹಿಂದೂಗಳಿಗಿರುವಂತೆ ಗೋವು ಪವಿತ್ರವಾಗಿತ್ತು. ಗೋಮಾಂಸ ನಿಷೇಧವಾಗಿತ್ತು. ಹಿಂದೂ ಪಂಚಾಂಗದ ಪ್ರಕಾರ ತಿಥಿ, ವಾರ, ಹಬ್ಬ, ಹರಿದಿನಗಳನ್ನು ಆಚರಿಸುತ್ತಿದ್ದರು. ಯೋಗದ ಪರಿಚಯ ಇವರಿಗಿತ್ತು. ಸಂಸ್ಕೃತ ಸಾಹಿತ್ಯದ ಎಲ್ಲಾ ಪ್ರಕಾರಗಳೂ ಪರಿಚಯವಿದ್ದರೂ, ಛಾಂ ಭಾಷೆಯಲ್ಲಾಗಲಿ ಸಂಸ್ಕೃತದಲ್ಲಾಗಲಿ ಕ್ರಿಯಾತ್ಮಕವಾದ ಸಾಹಿತ್ಯವನ್ನು ಸೃಷ್ಟಿಸಲಿಲ್ಲ. ಈ ರೀತಿಯಾಗಿ ಚಂಪಾ ಹಿಂದೂ ಸಂಸ್ಕೃತಿಯನ್ನು ಆಳವಾಗಿ ಅಳವಡಿಸಿಕೊಂಡಿತ್ತು.

ಚಂಪಾರಾಜ್ಯ ಸರ್ಕಾರ ಏಕತೆಯ ಆಧಾರದ ಮೇಲೆ ರಚಿತವಾಗಿತ್ತು. ಮೂರು ಪ್ರಾಂತ್ಯಗಳಾದ ವಿಜಯ, ಅಮರಾವತಿ, ಪಾಂಡುರಂಗಗಳನ್ನು ೩೮ ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಅಧಿಕಾರಿಗಳಿಗೆ ಜಹಗೀರು ಕೊಡುವ ಪದ್ಧತಿಯಿತ್ತು. ಶೇ. ೧೦ ರಿಂದ ೧೭ ರಷ್ಟು ಭೂ ಕಂದಾಯವನ್ನು ಕೊಡಬೇಕಾಗಿತ್ತು.

ಶ್ರೀಮಂತರ ಸಭೆಯೊಂದು ರಾಜನಿಗೆ ಸಲಹಾ ಮಂಡಳಿಯಂತೆ ಕೆಲಸ ಮಾಡುತ್ತಿತ್ತು. ರಾಜರುಗಳು "ವರ್ಮನ್" ಎಂಬ ಅಭಿಧಾನ ವನ್ನು ತಮ್ಮ ಹೆಸರಿನ ಕಡೆಯಲ್ಲಿ ಸೇರಿಸಿಕೊಳ್ಳುತ್ತಿದ್ದರು. "ರಾಜಾ ಪ್ರತ್ಯಕ್ಷ ದೇವತಾ" ಎಂಬುದು ಜನರ ನಂಬಿಕೆಯಾಗಿತ್ತು. ರಾಜನ ಅಂತಃಪುರದಲ್ಲಿ ರಾಜ್ಯದ ಪ್ರಮುಖ ಕುಟುಂಬಗಳ ಸ್ತ್ರೀಯರು ಇರು ತ್ತಿದ್ದು ಅವರ ಸಂಖ್ಯೆ ೨೦೦ಕ್ಕೂ ಹೆಚ್ಚಿಗೆಯಿತ್ತು. ಛಾಂರು ಹಿಂದೂ ಜಾತಿ ಪದ್ಧತಿಯನ್ನು ಹೆಚ್ಚಾಗಿ ಅನುಸರಿಸಲಿಲ್ಲ.

ಚೀನಾ, ಜಾವಾಗಳ ಜೊತೆ ಛಾಂರು ವ್ಯಾಪಾರ ಸಂಪರ್ಕ ಹೊಂದಿದ್ದರು, ಹತ್ತಿ ಮತ್ತು ರೇಷ್ಮೆ ಬಟ್ಟೆ ನೇಯುವುದರಲ್ಲೂ ಲೋಹಗಳಿಂದ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲೂ ಛಾಂ ಕುಶಲಕರ್ಮಿಗಳು ಪ್ರವೀಣರಾಗಿದ್ದರು. ಅವರು ಇಟ್ಟಿಗೆಯಿಂದ ಕಟ್ಟಿದ ಕಟ್ಟಡಗಳು ಕಾಂಬೋಡಿಯಾದ ಕಲ್ಲಿನ ಕಟ್ಟಡಗಳ ಸೌಂದರ್ಯವನ್ನು ಪ್ರತಿಬಿಂಬಿಸುವುದಿಲ್ಲ. ಇದಕ್ಕೆ ಕಾರಣ ಛಾಂ ಜನರಲ್ಲಿ ಐಶ್ವರ್ಯದ ಹಾಗೂ ಜನಬಲದ ಅಭಾವವೆಂದು ಕಾಣು ತ್ತದೆ. ನಾವು ಈಗ ವಿಯಟ್ನಾಮಿಯರ ಅಥವಾ ಅನ್ನಮಿಯರ ಜನಾಂಗದವರ ಇತಿಹಾಸವನ್ನು ಸಂಕ್ಷಿಪ್ತವಾಗಿ ನೋಡೋಣ. ವಿಯಟ್ನಾಮಿನ ಥಾನ್-ಹೋ (Than-Hoe) ಮತ್ತು ದಾಂಗ್ ಸಾನ್ (Dong-Son) ಎಂಬ ಪ್ರದೇಶಗಳಲ್ಲಿ ಪ್ರಾಚ್ಯ ಸಂಶೋಧನೆ ನಡೆಸಿದ ಫಲವಾಗಿ ಇತಿಹಾಸ ಪೂರ್ವ ಕಾಲದಲ್ಲಿದ್ದ ಸಂಸ್ಕೃತಿ ಯೊಂದು ಬೆಳಕಿಗೆ ಬಂದಿದೆ. ಇದನ್ನು ದಾಂಗ್-ಸಾನ್ ಸಂಸ್ಕೃತಿ ಎಂದು ಕರಿಯುವುದುಂಟು. ಈ ಸಂಸ್ಕೃತಿಯ ಕಾಲದಲ್ಲಿ ವಿಯ ಟ್ನಾಮಿಯರು ವ್ಯವಸಾಯ, ಪಶುಪಾಲನೆ ಕಲೆ ಮುಂತಾದ ಕ್ಷೇತ್ರ ಗಳಲ್ಲಿ ಮುಂದುವರೆದಿದ್ದುದು ಕಾಣಬರುತ್ತದೆ. ಈ ಸಂಸ್ಕೃತಿಯಲ್ಲಿ ಚೀನಿಯರ, ಮಂಗೋಲ್, ಇಂಡೋನೇಷಿಯನ್ನರ ಸಂಸ್ಕೃತಿಗಳ

ಪ್ರಭಾವಗಳನ್ನು ಗುರುತಿಸಬಹುದು. ಒಟ್ಟಿನಲ್ಲಿ ದಾಂಗ್-ಸಾನ್ ಸಂಸ್ಕೃತಿ ವಿಯಟ್ನಾಮಿಯರ ಸಂಸ್ಕೃತಿಗೆ ಅಡಿಗಲ್ಲಾಯಿತೆಂದರೆ ತಪ್ಪಾಗಲಾರದು.

ವಿಯಟ್ನಾಮಿಯರು ಉತ್ತರದಲ್ಲಿ ಪ್ರಭಾವಗೊಂಡು ಬೆಳೆಯುತ್ತಿದ್ದ ಚೀನಿಯರ ಸಂಸ್ಕೃತಿ ಮತ್ತು ರಾಜಕೀಯ ಚಟುವಟಿಕೆಗಳಿಂದ ಪ್ರಭಾವಿತರಾದರು. ಕ್ರಿ.ಪೂ. ಒಂಬತ್ತನೆಯ ಶತಮಾನದಿಂದ ನಾಲ್ಕನೆ ಶತಮಾನದವರೆಗಿನ ಅವಧಿಯಲ್ಲಿ ಚೀನಿಯರ ಸಂಸ್ಕೃತಿ ಚೇಕಿಯಾಂಗ್, ಫುಕೇಂನ್, ಕ್ವಾಂಗ್-ಟುಂಗ್ ಮತ್ತು ಕ್ವಾಂಗ್-ಸಿ ಪ್ರಾಂತ್ಯಗಳಲ್ಲಿ ಹರಡಿತು. ಕ್ರಿ.ಪೂ. ಮೂರನೆ ಶತಮಾನದಲ್ಲಿ ಉತ್ತರವಿಯಟ್ನಾಂನಲ್ಲಿನ ಟಾಂಗ್‌ಕಿಂಗ್ ಮತ್ತು ಅನ್ನಾಂ (Annam) ಪ್ರಾಂತ್ಯಗಳಿಗೂ ಅದು ಹಬ್ಬಿತು. ಚೀನಾ ದೇಶದ ಚಿನ್ ಮನೆತನಕ್ಕೆ ಸೇರಿದ 'ಮೊದಲನೇ ಚಕ್ರವರ್ತಿ' ಎಂದು ಪ್ರಖ್ಯಾತನಾಗಿದ್ದ ಷಿ ಹುವಾಂಗ್-ಟಿ (ಕ್ರಿ.ಪೂ. ೨೪೬–೨೦೯) ಕಾಲದಲ್ಲಿ ಅವನ ದಂಡನಾಯಕನಾಗಿದ್ದ ಚಾವೊ ತೋ (Chao To) ಎಂಬುವನು ಕ್ವಾಂಗ್-ಟುಂಗ್ ಮತ್ತು ಕ್ವಾಂಗ್-ಸಿ ಪ್ರಾಂತ್ಯಗಳನ್ನು ಗೆದ್ದು ಚೀನಾ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಈ ಪ್ರಾಂತ್ಯಗಳಲ್ಲಿ ಆಗ ಚೀನಿಯರಲ್ಲದ ಜನಾಂಗದವರೇ ಹೆಚ್ಚಾಗಿ ವಾಸಿಸುತ್ತಿದ್ದರು. ದಾಂಗ್ ಮತ್ತು ಅನ್ನಮಿಯರೇ ಅವರಲ್ಲಿ ಮುಖ್ಯರಾಗಿದ್ದರು. ಕ್ರಿ.ಪೂ, ೨೧೪ರಲ್ಲಿ ಚೀನಿಯರ ವಸಾಹತು ಆಡಳಿತ ಪ್ರಾರಂಭವಾಯಿತು, ಟಾಂಗ್ ಕಿಂಗ್ ಮತ್ತು ಅನ್ನಾಂ ಪ್ರಾಂತ್ಯಗಳು ಕೆಲವು ಕಾಲ ಚೀನಿ ಸಾಮ್ರಾಜ್ಯದ ಹೊರಗೆ ಉಳಿದಿದ್ದವು. ಚಿನ್ ರಾಜಮನೆತನದವರ ಆಳ್ವಿಕೆ ಕುಸಿಯುತ್ತಿದ್ದ ಸಮಯದಲ್ಲಿ ದಂಡನಾಯಕನಾಗಿದ್ದ ಚಾವೋತೋನು ಕ್ರಿ.ಪೂ. ೨೦೭ರಲ್ಲಿ ಕ್ವಾಂಗ್ ಟುಂಗ್, ಕ್ವಾಂಗ್-ಸಿ, ಅನ್ನಾಂ ಮತ್ತು ಟಾಂಗ್‌ಕಿಂಗ್

ಪ್ರಾಂತ್ಯಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಸ್ವತಂತ್ರ ರಾಜ್ಯವನ್ನು ಕಟ್ಟಿದನು. ಅನ್ನಮಿಯರ ಭಾಷೆಯಲ್ಲಿ ಇದಕ್ಕೆ ನಾಮ್-ವಿಯಟ್ ಎಂಬ ಹೆಸರು ಬಂತು. ಕಡೆಗೆ ಈ ದೇಶಕ್ಕೆ ವಿಯಟ್ನಾಂ ಎಂಬ ಹೆಸರು ಬಂದುದು ಈ ಪದದಿಂದಲೇ. ಈಗಿನ ಉತ್ತರ ವಿಯಟ್ನಾಂನ ಥಾನ್-ಹೋವಾ, ಕ್ವಾಂಗ್-ಟ್ರಿ ಮತ್ತು ಕ್ವಾಂಗ್-ಬಿನ್ ಪ್ರಾಂತ್ಯಗಳೇ ದಂಡನಾಯಕ ಚಾವೋ-ತೋನ ಅಧೀನಕ್ಕೆ ಬಂದ ಪ್ರದೇಶಗಳಾಗಿದ್ದವು. ಚಿನ್ ಮನೆತನದ ಆಳ್ವಿಕೆ ಮುಗಿದು ಹಾನ್ ಮನೆತನದವರು ಅಧಿಕಾರಕ್ಕೆ ಬಂದ ಮೇಲೆ ಅವರು ವಿಯಟ್ನಾಂನ ಸ್ವಾತಂತ್ರ್ಯಕ್ಕೆ ಮನ್ನಣೆ ಕೊಟ್ಟರು. ಆದರೆ ಆ ರಾಜ್ಯದ ಮೇಲೆ ಒಂದು ರೀತಿಯ ಸಾರ್ವಭೌಮಾಧಿಕಾರವನ್ನು ಮಾತ್ರ ಇಟ್ಟು ಕೊಂಡಿದ್ದರು. ಚಾವೋ-ತೋನು ಸ್ಥಾಪಿಸಿದ ಕ್ಯಾನ್-ಟನ್ ಮನೆತನದ ಆಳ್ವಿಕೆಯ ಕಾಲದಲ್ಲಿ ಕ್ವಾಂಗ್-ಟೂಂಗ್ ಮತ್ತು ಕ್ವಾಂಗ್-ಸಿ ಪ್ರಾಂತ್ಯಗಳಲ್ಲಿ ನೇರವಾದ ಆಳ್ವಿಕೆ ಇದ್ದು, ಟಾಂಗ್ ಕಿಂಗ್ ಮತ್ತು ಅನ್ನಾಂಗಳಲ್ಲಿ ಸ್ಥಳೀಯ ಆಡಳಿತವನ್ನೇ ಮುಂದುವರೆಸಿ ಕೊಂಡು ಹೋಗುವ ಪದ್ಧತಿ ಬಂದಿತು.

ಕ್ರಿ.ಪೂ. ೧೧೧ರಲ್ಲಿ ಏಷ್ಯದಲ್ಲಿ ಚೀನಿಯರ ಸಾಮ್ರಾಜ್ಯಷಾಹಿ ಆಡಳಿತವನ್ನು ಸೃಷ್ಟಿಸಿದವನೆಂದು ಪ್ರಖ್ಯಾತನಾಗಿರುವ ಊ-ಟ (Wu-Ti 140-87 B. C.)ಯು ಕ್ಯಾನ್‌ಟನ್ ರಾಜ್ಯವನ್ನು ಗೆದ್ದನಲ್ಲದೆ ಟಾಂಗ್‌ಕಿಂಗ್ ಮತ್ತು ಅನ್ನಾಂಗಳನ್ನ (ವಿಯಟ್ನಾಮಿ ಯರ ತೌರುಮನೆ) ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಅಲ್ಲಿದ್ದ ಸ್ಥಳೀಯ ಅಡಳಿತವನ್ನು ರದ್ದು ಪಡಿಸಿ ನೇರವಾದ ಅಡಳಿತವನ್ನು ಏರ್ಪಡಿಸಿದನು. ಈ ಕಾಲದಿಂದ ಕ್ರಿ.ಶ. ೯೩೯ರವರೆಗೆ ವಿಯಟ್ನಾಂ ಚೀನಿಸಾಮ್ರಾಜ್ಯದ ಅವಿಭಾಜ್ಯಅಂಗವಾಗಿತ್ತು. ಮೊದಮೊದಲು ವಿಯಟ್ನಾಮಿಯರು ತಮ್ಮದೇ ಆದ ಆಡಳಿತವನ್ನು ಹೊಂದಿರಲು

ಅವಕಾಶವಿತ್ತು. ಆದರೆ ಕ್ರಿ.ಶ. ೪೦ರಲ್ಲಿ ವಿಯಟ್ನಾಮಿಯರು ದಂಗೆ ಎದ್ದಾಗ, ಚೀನಿಯರ ನೇರ ಆಡಳಿತ, ಮತ್ತು ಸಂಘಸಂಸ್ಥೆಗಳನ್ನು ವಿಯಟ್ನಾಮಿಯರ ಮೇಲೆ ಹೇರಲಾಯಿತು.

ಕ್ರಿ.ಶ. ೫೪೧ ರಿಂದ ೬೦೨ರ ವರೆಗಿನ ಕಾಲದಲ್ಲಿ ವಿಯಟ್ನಾಂ ಸ್ವಾತಂತ್ರ ಗಳಿಸಿಕೊಳ್ಳಲು ಮೂರು ಭಾರಿ ಹೋರಾಟ ನಡೆಸಿತು. ೫೪೪, ೫೭೦ ಮತ್ತು ೬೦೨ರಲ್ಲಿ ಚೀನಿ ಗೌರ್ನರುಗಳ ದಬ್ಬಾಳಿಕೆಯ ವಿರುದ್ಧ ವಿಯಟ್ನಾಮಿಯರು ಹೋರಾಡಿದರು. ಅದರೆ ಇವುಗಳನ್ನು ಹತ್ತಿಕ್ಕಲಾಯಿತು.

ಈ ಕಾಲದಲ್ಲಿ ಚೀನಿಯರ ಸಂಸ್ಕೃತಿ ವಿಯಟ್ನಾಮಿಯರ ಸಂಸ್ಕೃತಿ ಆಡಳಿತ ಕ್ಷೇತ್ರಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು. ಛಾಂ (Cham) ಜನರ ಮೇಲೆ ಹಿಂದೂ ಸಂಸ್ಕೃತಿ ಪ್ರಭಾವಬೀರಿದಂತೆ ವಿಯಟ್ನಾಮಿಯರ ಮೇಲೆ ಚೀನಿ ಸಂಸ್ಕೃತಿ ಪ್ರಭಾವ ಬೀರಿತು. ಚೀನಿಯರ ಪ್ರಸಿದ್ದ ಗ್ರಂಥಗಳು, ಅವರ ನಡೆನುಡಿ ಸಂಪ್ರದಾಯ ಗಳು ವಿಯಟ್ನಾಂನಲ್ಲಿ ಬಳಕೆಗೆ ಬಂದವು. ಕನ್‌ಫ್ಯೂಷಿಸ್ (Confucius) ಎಂಬ ಚೀನಿ ತತ್ವಜ್ಞಾನಿಯ ಬೋಧನೆಗಳು ಮತ್ತು ಮಹಾಯಾನ ಬೌದ್ಧಮತವು ಈ ದೇಶದಲ್ಲಿ ಪ್ರಚಾರ ಗೊಂಡವು. ಹೀಗಿದ್ದರೂ, ವಿಯಟ್ನಾಂ ತನ್ನದೇ ಆಗಿದ್ದ ವಿಶಿಷ್ಟ ರೀತಿಯ ಸಂಸ್ಕೃತಿಯನ್ನು ಕಳೆದುಕೊಳ್ಳಲಿಲ್ಲ. ವಿದ್ಯಾವಂತರ ಮೇಲೆ ಚೀನಿ ಸಂಸ್ಕೃತಿ ಹೆಚ್ಚಿನ ಪ್ರಭಾವ ಬೀರಿತು. ಆದರೆ ಇವರ ಸಂಖ್ಯೆ ಬಹಳ ಕಡಮೆ. ಅವಿದ್ಯಾವಂತವರ್ಗಕ್ಕೆ ಸೇರಿದ ಹೆಚ್ಚಿನ ವಿಯಟ್ನಾಮಿಯರು ತಮ್ಮದೇ ಆದ ನಡೆ-ನುಡಿ ಸಾಂಪ್ರದಾಯ ಗಳನ್ನು ಪ್ರಾಣಿಗಳ ಪೂಜೆಯನ್ನು ಮತ್ತು ಪಿತೃಪೂಜೆಯನ್ನು (Ancestor Worship) ಮುಂದುವರೆಸಿಕೊಂಡು ಹೋದರು. ಭಾರತದೇಶದಿಂದ ಚೀನಾದೇಶಕ್ಕೆ ಹೋಗಿಬರುತ್ತಿದ್ದ ಹಲವಾರು

ಸಾಂಸ್ಕೃತಿಕ ರಾಯಭಾರಿಗಳು ಟಾಂಗ್‌ಕಿಂಗ್‌ನಲ್ಲಿ ತಂಗುತ್ತಿದ್ದುದು ಉಂಟು. ಇವರ ಸಂಪರ್ಕದಿಂದ ಸ್ವಲ್ಪಮಟ್ಟಿಗೆ ಭಾರತೀಯ ಸಂಸ್ಕೃತಿಯು ವಿಯಟ್ನಾಂನಲ್ಲಿ ಪ್ರಸಾರವಾಯಿತೆಂದು ಹೇಳಬಹುದು. ಇತ್ಸಿಂಗ್ (Itsing) ಎಂಬ ಚೀನಿ ಬೌದ್ಧ ಯಾತ್ರಿಕನು ಟಾಂಗ್‌ಕಿಂಗ್ ಬೌದ್ಧಮತದ ಒಂದು ಪ್ರಖ್ಯಾತ ಕೇಂದ್ರವಾಗಿತ್ತೆಂದು ಬರೆದಿದ್ದಾನೆ. ಇಂಡೋನೇಷಿಯಾದಲ್ಲಿ ಬೌದ್ಧಮತದ ಕೇಂದ್ರವಾಗಿದ್ದ ಶ್ರೀವಿಜಯದಿಂದ ಬೌದ್ಧ ಧರ್ಮಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ತರಿಸಿಕೊಂಡು ಟಾಂಗ್‌ಕಿಂಗ್‌ನಲ್ಲಿ ಅವುಗಳನ್ನು ಭಾಷಾಂತರಮಾಡಲಾಯಿತು.

ಕ್ರಿ.ಶ. ೭೬೭ರಲ್ಲಿ ಮಲೆಜನಾಂಗದವರು ವಿಯಟ್ನಾಂ ಮೇಲೆ ಧಾಳಿ ನಡೆಸಿದ ಸಂದರ್ಭದಲ್ಲಿ ಅವರ ಧಾಳಿಯಿಂದ ವಿಯಟ್ನಾಮಿಯರನ್ನು ಚೀನಿಯರು ರಕ್ಷಿಸಿದರು. ಆ ಕಾಲದಿಂದ ಚೀನಿಯರ ಪ್ರಾಬಲ್ಯ, ಪ್ರಭಾವಗಳು ವಿಯಟ್ನಾಂನಲ್ಲಿ ಹೆಚ್ಚಿದವು. ಆದರೆ ಕ್ರಿ.ಶ. ಹತ್ತನೆ ಶತಮಾನದಲ್ಲಿ ಚೀನಾದೇಶದಲ್ಲಿ ಟಾಂಗ್ ಮನೆತನದ ಆಳ್ವಿಕೆ ಶಿಥಿಲಗೊಂಡಾಗ ವಿಯಟ್ನಾಮಿಯರು ಸ್ವತಂತ್ರರಾಗುವ ಅವಕಾಶ ಲಭಿಸಿತು. ಚೀನಿಯರು ೭೮೦ರಲ್ಲಿ ಛಾಂ (Cham)ರ ಧಾಳಿಯನ್ನು ತಡೆಗಟ್ಟುವುದರಲ್ಲಿ ಅಸಹಾಯಕರಾದರು. ಟಾಂಗ್ ಮನೆತನದ ಆಳ್ವಿಕೆ ಕೊನೆಗೊಂಡು ಚೀನಾದಲ್ಲಿ ಅರಾಜಕತ್ವ ಉಂಟಾದ ಸಮಯದಲ್ಲಿ ವಿಯಟ್ನಾಮಿಯರು ಸ್ವಾತಂತ್ರವನ್ನು ಘೋಷಿಸಿಕೊಂಡರು. ತಮ್ಮವನೇ ಆದ ಎನ್‌ಗೊ ಕೊಯನ್ (Ngo-Quyan) ಎಂಬುವನ ನಾಯಕತ್ವದಲ್ಲಿ ರಾಷ್ಟ್ರೀಯ ಆಳ್ವಿಕೆಯನ್ನು ಪ್ರಾರಂಭಿಸಿದರು. ಹೀಗೆ ಎನ್‌ಗೊ (Ngo) ರಾಜ ಮನೆತನದ ಆಳ್ವಿಕೆ (೯೩೯–೭೮) ಪ್ರಾರಂಭವಾಯಿತು.

ಫ್ರೆಂಚ್ ವಿದ್ವಾಂಸರು ವಿಯಟ್ನಾಮಿಯರ ಇತಿಹಾಸದಲ್ಲಿ ಹದಿನೈದು ರಾಜಮನೆತನಗಳ ಆಳ್ವಿಕೆಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ನಾಲ್ಕು ರಾಜಮನೆತನಗಳು, ಕ್ರಿ.ಶ. ೯೩೯ಕ್ಕೂ ಹಿಂದೆ ಅಂದರೆ ಚೀನಿಯರ ಪ್ರಭಾವ ವಿಯಟ್ನಾಮಿನಲ್ಲಿ ಅಧಿಕವಾಗಿದ್ದ ಕಾಲದಲ್ಲಿ ಅಲ್ಪಕಾಲ ಆಡಳಿತ ನಡೆಸಿ ಅವನತಿ ಹೊಂದಿದ್ದವು. ೯೩೯ರ ನಂತರ ಮೂರು ಮನೆತನಗಳು ಕೆಲವುಕಾಲ ಪ್ರಾಬಲ್ಯ ವಾಗಿದ್ದವು. ಒಟ್ಟು ಆಡಳಿತ ನಡೆಸಿದ ರಾಜರ ಸಂಖ್ಯೆ ಎಂಟು. ಅವರು ೧೦೦೯ರವರೆಗೆ ಪ್ರಬಲರಾಗಿದ್ದರು. ಮೊದಲು ವಿಯಟ್ನಾಮಿಯರ ರಾಜ್ಯ ಚಾಂಗ್‌ಕಿಂಗ್ ಮತ್ತು ಅನ್ನಾಂ ಪ್ರಾಂತ್ಯಗಳನ್ನು ಮಾತ್ರ ಒಳಗೊಂಡಿತ್ತು. ಇದಕ್ಕೆ ದಕ್ಷಿಣದಲ್ಲಿ ಛಾಂ ಸಾಮ್ರಾಜ್ಯವಿತ್ತು.

ಎನ್‌ಗೋ ಮನೆತನದ ರಾಜರು (೯೩೯–೬೮) ಸ್ಥಳೀಯ ಪಾಳೆಯಗಾರರನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಅಸಮರ್ಥರಾದರು. ಚೀನಿಯರಿಂದ ಮನ್ನಣೆಪಡೆಯಲು ವಿಫಲರಾದರು. ಇವರ ನಂತರ ಪ್ರಾಬಲ್ಯಕ್ಕೆ ಬಂದ ದಿನ್ ಅರಸುಮನೆತನ (೯೬೮–೮೦, Dinh-dynasty) ಇನ್ನೂ ಬಲಹೀನವಾಗಿತ್ತು. ಇದಾದನಂತರ ಮೊದಲನೆಯ ಲೇ-ಮನೆತನದ (The earlier Le-dynasty) (೯೮೦–೧೦೦೯) ಆಳ್ವಿಕೆ ಒಳ್ಳೆಯ ಹುರುಪಿನಿಂದ ಪ್ರಾರಂಭವಾಯಿತು. ಮೊದಲನೆಯ ಅರಸನಾದ ಲೇ–ಹೋವಾನ್ (Le-Hoan) ೯೮೨ರಲ್ಲಿ ಚಂಪಾರಾಜ್ಯದ ಮೇಲೆ ದಂಡೆತ್ತಿಹೋಗಿ, ಅಲ್ಲಿಯ ರಾಜನನ್ನುಕೊಂದು, ರಾಜಧಾನಿ ಇಂದ್ರಪುರವನ್ನು ಮುತ್ತಿ ಹೆಚ್ಚಿನ ಕೊಳ್ಳೆಯೊಡನೆ ಸ್ವದೇಶಕ್ಕೆ ಹಿಂತಿರುಗಿದನು. ಅವನ ಉತ್ತರಾಧಿಕಾರಿಯನ್ನು ಸಿಂಹಾಸನದಿಂದ ಇಳಿಸಿ ೧೦೦೯ ರಲ್ಲಿ ಲೀ-ಮನೆತನದವರು (Li-dynasty) ತಮ್ಮ ಎರಡೂ ಶತಮಾನ

2

ಗಳ ಆಳ್ವಿಕೆಯನ್ನು ಪ್ರಾರಂಭಿಸಿದರು. (೧೦೦೯-೧೨೨೫) ೯೬೮ ಮತ್ತು ೧೦೦೯ರ ನಡುವಣ ಕಾಲದಲ್ಲಿ ವಿಯಟ್ನಾಮಿನಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳಾದವು. ದಿನ್ ಮನೆತನಕ್ಕೆ ಸೇರಿದ ತೀನ್-ಹೋವಾಂಗ್ ಎಂಬುವನು ಚಾವೋ ಮತದವರನ್ನು ಬೌದ್ಧರನ್ನು ಒಂದುಗೂಡಿಸಿ ದೇಶಕ್ಕೊಂದು ಅಧಿಕೃತವಾದ ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿದ. ಲೀ ಮನೆತನದ (Li-dynasty) ಎರಡನೆ ರಾಜನು ಚೀನಾದೇಶದಿಂದ ಮಹಾಯಾನ ಬೌದ್ಧಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳನ್ನು ತರಿಸಿಕೊಂಡು ದೇಶದಲ್ಲೆಲ್ಲಾ ಬೌದ್ಧಧರ್ಮವನ್ನು ಪ್ರಸಾರ ಮಾಡಿದನು. ಈ ಕಾಲದಲ್ಲಿ ವಿಯಟ್ನಾಮಿಯರು ಅಧಿಕ ಸಂಖ್ಯೆಯಲ್ಲಿ ಈ ಧರ್ಮದ ಅನುಯಾಯಿಗಳಾದರು. ಈ ಧರ್ಮ ಕಡೆಯವರೆಗೂ ಉಳಿದುಕೊಂಡು ಬಂತು. ವಿಯಟ್ನಾಂ ದೇಶದ ಪಂಡಿತವರ್ಗವು ಕನ್‌ಫ್ಯೂಷಿಯಸ್ ಅಥವಾ ಚಾವೋ ಧರ್ಮವನ್ನು, ಬೌದ್ಧಧರ್ಮದ ಜೊತೆಗೆ ಅನುಸರಿಸುತ್ತಿದ್ದುದುಂಟು. ಬೌದ್ಧ ಸಂನ್ಯಾಸಿಗಳು ರಾಜ್ಯದ ಅಡಳಿತಗಾರರಾಗಿಯೂ, ರಾಜರ ಮಂತ್ರಿಗಳಾಗಿಯೂ ವಿದೇಶಿ ವ್ಯವಹಾರಗಳನ್ನು ನೋಡಿಕೊಳ್ಳುವ ರಾಜತಂತ್ರ ಪ್ರವೀಣರಾಗಿಯೂ ಕೆಲಸ ಮಾಡುತ್ತಿದ್ದರು. ವಿಯಟ್ನಾಂ ದೇಶದಿಂದ ಅನೇಕ ಬೌದ್ಧ ಬಿಕ್ಷುಗಳು ಪುಣ್ಯಕ್ಷೇತ್ರಗಳ ಸಂದರ್ಶನಕ್ಕಾಗಿ ಭಾರತಕ್ಕೆ ಬಂದಿದ್ದರು. ಅದೇ ರೀತಿ ಭಾರತದ ಬೌದ್ಧ ಸಂನ್ಯಾಸಿಗಳು ಚೀನಾದೇಶಕ್ಕೆ ಹೋಗುವ ಮಾರ್ಗದಲ್ಲಿ ವಿಯಟ್ನಾಮಿನಲ್ಲಿ ತಂಗುತ್ತಿದ್ದುದುಂಟು.

ಲೀ ಮನೆತದ ಆಳ್ವಿಕೆಯ ಕಾಲದಲ್ಲಿ (೧೦೦೯-೧೨೨೫) ಚಂಪಾ ರಾಜ್ಯಕ್ಕೂ ವಿಯಟ್ನಾಮಿಯರಿಗೂ ಯುದ್ಧ ಪ್ರಾರಂಭವಾಯಿತು. ಛಾಂ ಜನಾಂಗದವರು ಹಿಂದೂ ಸಂಸ್ಕೃತಿಯನ್ನು ಹೆಚ್ಚಾಗಿ ಪ್ರತಿ

ನಿಧಿಸುತ್ತಿದ್ದರೆ, ವಿಯಟ್ನಾಮಿಯರು ಚೀನಿ ಸಂಸ್ಕೃತಿಯನ್ನು ಹೆಚ್ಚಾಗಿ ಪ್ರತಿನಿಧಿಸುತ್ತಿದ್ದರು. ಈ ಎರಡು ಸಂಸ್ಕೃತಿಗಳ ಹೋರಾಟ ವಿಯಟ್ನಾಂನಲ್ಲಿ ಆಯಿತೆಂದರೆ ತಪ್ಪಲ್ಲ. ಛಾಂರಿಗೆ ಸೇರಿದ್ದ ಉತ್ತರದ ಪ್ರಾಂತ್ಯಗಳು ಹನ್ನೊಂದನೆ ಶತಮಾನದಲ್ಲಿ ವಿಯಟ್ನಾಮಿಯರ ವಶವಾದವು. ೯೮೨ರಲ್ಲಿ ಲೇ ಹೋವಾನ್ ಇಂದ್ರಪುರನನ್ನು ಮುತ್ತಿದ ಮೇಲೆ ಛಾಂರು ತಮ್ಮ ರಾಜಧಾನಿಯನ್ನು ವಿಜಯಪುರಕ್ಕೆ ಬದಲಾಯಿಸಿದರು. ವಿಜಯಪುರ ಇಂದಿನ ಬಿಂದಿನ್ ಹತ್ತಿರವಿತ್ತು. (Binh Dinh) ೧೦೪೪ರಲ್ಲಿ ವಿಯಟ್ನಾಮಿಯರು ವಿಜಯಪುರವನ್ನು ಮುತ್ತಿದರು. ರಾಜನಾದ ಮೂರನೆ ರುದ್ರವರ್ಮನು ಕ್ಯಾಂಬೋಡಿಯಾದೊಳಕ್ಕೆ ಓಡಿಹೋದಾಗ ಅವನನ್ನು ಅಟ್ಟಿಕೊಂಡುಹೋಗಿ ಸೆರೆಹಿಡಿಯಲಾಯಿತು. ಉತ್ತರದ ಮೂರು ಪ್ರಾಂತ್ಯಗಳನ್ನು ಒಪ್ಪಿಸಿದಮೇಲೆ ರುದ್ರವರ್ಮನಿಗೆ ಬಿಡುಗಡೆಯಾಯಿತು.

ಛಾಂರು ಕಳೆದುಕೊಂಡ ಪ್ರದೇಶಗಳನ್ನು ಮತ್ತೆ ಗೆಲ್ಲಲು ಪ್ರಯತ್ನ ನಡೆಸಿದರು. ಆದರೆ ಕ್ಯಾಂಬೋಡಿಯಾದ ರಾಜ ಎರಡನೇ ಸೂರ್ಯವರ್ಮನು ಹನ್ನೆರಡನೇ ಶತಮಾನದಲ್ಲಿ ಚಂಪಾರಾಜ್ಯವನ್ನು ಮುತ್ತಿದಾಗ ಅವರ ಶಕ್ತಿಗುಂದಿತು. ೧೨೨೦ರಲ್ಲಿ ಕ್ಯಾಂಬೋಡಿಯನ್ನರೊಡನೆ ಯುದ್ಧ ಮುಕ್ತಾಯಗೊಂಡಾಗ, ಮೂರು ಉತ್ತರ ಪ್ರಾಂತ್ಯಗಳು ಅವರ ಕೈಯಲ್ಲಿದ್ದವು.

೧೨೨೫ರಲ್ಲಿ ಲೀ-ಮನೆತನದ ಆಳ್ವಿಕೆ ಕೊನೆಗೊಂಡು ಟ್ರಾನ್ (Tran dynasty) ಮನೆತನದ ಆಳ್ವಿಕೆ ಪ್ರಾರಂಭವಾಯಿತು. ಈ ಕಾಲದಲ್ಲಿ ಛಾಂರೊಡನೆ ಯುದ್ಧ ಮುಂದುವರೆಯಿತು. ಮಂಗೋಲರು ವಿಯಟ್ನಾಂ ಮೇಲೆ ಧಾಳಿನಡೆಸಿದ ಸಂದರ್ಭದಲ್ಲಿ ಮಾತ್ರ ಛಾಂರ ಮತ್ತು ವಿಯಟ್ನಾಮಿಯರ ನಡುವೆ ತಾತ್ಕಾಲಿಕ

ಶಾಂತಿ ಒಪ್ಪಂದ ಏರ್ಪಟ್ಟಿತು. ೧೨೫೭ರಲ್ಲಿ ಮಂಗೋಲರ ಸೇನೆ ಹನಾಯ್ (Honai) ಪಟ್ಟಣವನ್ನು ಮುತ್ತಿದಾಗ ವಿಯಟ್ನಾಮಿಯರು ಅವರನ್ನು ತಡೆದರು. ೧೨೬೦ರಲ್ಲಿ ಕುಟ್ಲೈ ಖಾನನು (Kutlai Khan) ಚಕ್ರವರ್ತಿಯಾದಮೇಲೆ ವಿಯಟ್ನಾಂಗೆ ತನ್ನ ರಾಯಭಾರಿಗಳನ್ನು ಕಳಿಸಿಕೊಟ್ಟು ತನಗೆ ವಿಧೇಯತೆಯನ್ನು ತೋರಿಸುವಂತೆ ಅಪ್ಪಣೆಕೊಟ್ಟನು. ೧೨೮೧ರಲ್ಲಿ ಕುಟ್ಲೈಖಾನನು ದಂಡನಾಯಕ ಸೋಗಾತು (Sogatu)ನನ್ನು ಚಂಪಾರಾಜ್ಯದ ಮೇಲೆ ಧಾಳಿನಡೆಸಲು ಕಳುಹಿಸಿಕೊಟ್ಟಾಗ, ವಿಯಟ್ನಾಮಿಯರು, ಛಾಂರು ಒಂದಾಗಿ ಅವನ ವಿರುದ್ಧವಾಗಿ ಹೋರಾಡಿದರು. ೧೨೮೭ರಲ್ಲಿ ಮಂಗೋಲರು ಹನಾಯ್ ನಗರವನ್ನು ಮೂರನೇ ಬಾರಿ ಹಿಡಿದಾಗಲೂ ಧೈರ್ಯವಾಗಿ ಹೋರಾಡಿದರು. ಹೀಗೆ ಛಾಂರು, ವಿಯಟ್ನಾಮಿಯರು ಒಂದಾಗಿ ಮಂಗೋಲರ ಧಾಳಿಯಿಂದ ಸ್ನೇಹ ಏರ್ಪಟ್ಟಿದ್ದನ್ನು ಭದ್ರಗೊಳಿಸುವ ಸಲುವಾಗಿ ಚಂಪಾದೇಶದ ರಾಜನು ವಿಯಟ್ನಾಂ ರಾಜಮನೆತನದ ಹೆಣ್ಣನ್ನು ಮದುವೆ ಮಾಡಿಕೊಡುವಂತೆ ಕೇಳಿಕೊಂಡನು. ೧೩೦೭ರಲ್ಲಿ ವಿಯಟ್ನಾಂ ರಾಜನಾದ ಟ್ರಾನ್ ಆನ್ ಚಾನನು ತನ್ನ ತಂಗಿಯನ್ನು ಚಂಪಾರಾಜನಾದ ಜಯಸಿಂಹವರ್ಮನಿಗೆ ಕೊಟ್ಟು ಮದುವೆಮಾಡಿದನು. ಆದರೆ ಮದುವೆಯಾದ ಸ್ವಲ್ಪ ಕಾಲದಲ್ಲೇ ಜಯಸಿಂಹವರ್ಮನು ಮಡಿದನು. ಈ ಸ್ನೇಹ ಕೊನೆಗೊಂಡು ೧೩೧೨ರಲ್ಲಿ ಟ್ರಾನ್ ಆನ್ ಜಾನ್‌ನು ಚಂಪಾನನ್ನು ಮುತ್ತಿ ಅಲ್ಲಿಯ ದೊರೆಯನ್ನು ಸೆರೆಹಿಡಿದು ಚಾಂಗ್ ಕಿಂಗ್‌ಗೆ ಕರೆತಂದನು. ಚಂಪಾರಾಜ್ಯ ವಿಯಟ್ನಾಂನ ಅಧೀನ ರಾಜ್ಯವಾಯಿತು.

೧೩೨೬ರಲ್ಲಿ ಅನೇಕ ದಂಗೆಗಳಾದನಂತರ ಛಾಂರು ಚೀನಾದೇಶದ ಸಹಾಯ ಕೋರಿ, ತಮ್ಮ ಸ್ವಾತಂತ್ರ್ಯವನ್ನು ಮರಳಿಪಡೆದರು.

೧೩೫೩ರಲ್ಲಿ ಛಾಂರು ಹೂವೆ (Hue) ಪ್ರದೇಶವನ್ನು ಗೆಲ್ಲಲು ವ್ಯರ್ಥ ಪ್ರಯತ್ನವನ್ನು ನಡೆಸಿದರು. ಅನಂತರ ಛಾಂರ ರಾಜನಾದ ಶೇಬಾಂಗ್ (Che BongNga) (೧೩೬೦-೯೦)ನು ವಿಯಟ್ನಾಂ ವಿರುದ್ಧ ಅನೇಕ ಧಾಳಿಗಳನ್ನು ನಡೆಸಿ, ವಿಯಟ್ನಾಮಿಯರನ್ನು ಹೆದರಿಸಿದನು. ೧೩೭೧ರಲ್ಲಿ ಅವನು ಹನಾಯ್ ಪಟ್ಟಣವನ್ನು ಸಹಾ ಮುತ್ತಿದನು. ೧೩೭೭ರಲ್ಲಿ ಟ್ರಾನ್ ಡ್ಯೂ-ಜಾನ್‌ನು ಮರುಮುತ್ತಿಗೆ ಹಾಕಿ ಛಾಂರ ರಾಜಧಾನಿ ವಿಜಯಪುರದಮೇಲೆ ದಂಡೆತ್ತಿ ಹೋದನು. ಆದರೆ ಅವನನ್ನು ಅವನ ಸೈನಿಕರನ್ನು ಊರಿನೊಳಗೆ ಕೊಲ್ಲಲಾಯಿತು. ಶೇಬಾಂಗ್‌ನು ಮರಣಾಂತರ ೧೪೮೮ರಲ್ಲಿ ಛಾಂರು ತೆಗೆದುಕೊಂಡಿದ್ದ ಪ್ರದೇಶಗಳನ್ನು ವಾಪಸ್ಸು ಪಡೆದರು.

೧೪೦೦ರಲ್ಲಿ ಲೇ-ಕ್ವಿ-ಲಿ (Le-qui-li) ಎಂಬ ದಂಡನಾಯಕ ಟ್ರಾನ್ ದೊರೆಯನ್ನು ಸಿಂಹಾಸನದಿಂದ ತಳ್ಳಿ ಅಧಿಕಾರಕ್ಕೆ ಬಂದನು. ಆದರೆ ಟ್ರಾನ್ ಮನೆತನದ ಬೆಂಬಲಿಗರು ಚೀನಾ ದೇಶದ ಮಿಂಗ್ ಚಕ್ರವರ್ತಿ ಯಂಗ್-ಲೋ-ವಿನ ಸಹಾಯ ಬೇಡಿ ದರು. ಚೀನಿಯರ ಸೇನೆ ಹನಾಯ್ ನಗರ ಹಿಡಿದುಕೊಂಡು ಲೇ-ಕಿ-ಲಿಯನ್ನು ಸೆರೆಹಿಡಿಯಿತು. ಚೀನಿಯರು ಈ ಘಟನೆಯ ನಂತರ ಮತ್ತೆ ವಿಯಟ್ನಾಂನಿಂದ ಹಿಂತಿರುಗಲು ಹಿಂಜರಿದರು. ಅಲ್ಲೇ ತಳ ಊರಿ, ತಮ್ಮ ಭಾಷೆ, ನಡೆ ಸಂಪ್ರದಾಯಗಳನ್ನು ವಿಯಟ್ನಾ ಮಿಯರ ಮೇಲೆ ಹೇರುವ ಕಾರ್ಯದಲ್ಲಿ ತೊಡಗಿದಾಗ ದೇಶ, ಭಾಷಾಭಿಮಾನಿಗಳಾದ ವಿಯಟ್ನಾಮಿಯರು ಥಾನ್-ಹೂವಾ ಪ್ರಾಂತ್ಯದ ಪಾಳಯಗಾರ ಲೇ-ಲೊ-ಯಿ (Le-Loi) ಎಂಬುವನ ನೇತೃತ್ವದಲ್ಲಿ ೧೪೧೮ರಲ್ಲಿ ಚೀನಿಯರನ್ನು ದೇಶದಿಂದ ಉಚ್ಚಾಟನೆ ಮಾಡಿದರು. ಹನಾಯ್ ನಗರ ಅವನ ವಶವಾಯಿತು. ಈತನು ಎರಡನೆ ಲೋ ರಾಜಮನೆತನದ ಆಳ್ವಿಕೆಯನ್ನು ಪ್ರಾರಂಭಿಸಿದನು.

ಈ ಮನೆತನದ ಪ್ರಖ್ಯಾತ ದೊರೆಯಾದ ಲೇಥಾಂನ್-ಥೋಂನ್ (Le Thanh Ton) (೧೪೬೦-೬೭) ಎಂಬುವನು ೧೪೭೧ರಲ್ಲಿ ಚಂಪಾ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಛಾಂರನ್ನು ಸಂಪೂರ್ಣ ವಾಗಿ ಸೋಲಿಸಿ ಆ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡು ಬಿಟ್ಟನು. ಹೀಗೆ ಅನೇಕ ಶತಮಾನಗಳಿಂದ ನಡೆಯುತ್ತಿದ್ದ ಯುದ್ಧ ಕೊನೆಗೊಂಡು ವಿಯಟ್ನಾಮೀಯರಿಗೆ ಜಯವಾಯಿತು. ಚಂಪಾ ರಾಜ್ಯದ ಅವನತಿಯ ಜತೆ ಹಿಂದೂ ಸಂಸ್ಕೃತಿಯ ಪ್ರಭಾವವು ವಿಯಟ್ನಾಂನಲ್ಲಿ ಕುಂದಿತು.

ಹದಿನಾರನೆ ಶತಮಾನದಲ್ಲಿ ವಿಯಟ್ನಾಮಿನ ಆಂತರಿಕ ಸ್ಥಿತಿಗತಿ ಗಳು ಹದಗೆಟ್ಟು, ಅಧಿಕಾರಕ್ಕಾಗಿ ಸಣ್ಣಪುಟ್ಟ ಪಾಳೆಯಗಾರರ ನಡುವೆ ಕಲಹಗಳೇರ್ಪಟ್ಟು ಕೊನೆಗೆ ೧೫೭೦ರಲ್ಲಿ ಮೂರು ಮನೆತನ ಗಳು ದೇಶವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವಂತಾಯಿತು. ಮಾಕ್ (the Mac) ಮನೆತನದವರು ಹನಾಯ್ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಚಾಂಗ್ ಕಿಂಗ್ ಪ್ರಾಂತ್ಯ ವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡರು. ಟ್ರಿನ್ (Trinh) ಮನೆತನದ ಅರಸರು ಲೇ ದೊರೆಗಳ ಅರಮನೆಯ ಚಾಲಕರಾಗಿ ಥಾನ್-ಹೂವಾ, ಘೇ-ಆನ್ ಮತ್ತು ಹಾ-ಟಿನ್ ಪ್ರಾಂತ್ಯಗಳ ಅಧಿಪತಿಗಳಾದರು. ಅವರ ರಾಜಧಾನಿ ಥೇ-ಡೋ ಆಗಿತ್ತು. ಮತ್ತೊಂದು ಪ್ರಸಿದ್ಧ ಮನೆತನವಾದ ನುಯೋನ್ (Nauyen) ಮನೆತನದವರು ಲೇ ಅರಸರ ಬೆಂಬಲಿಗರಾಗಿಯೇ ಇದ್ದುಕೊಂಡು ವಿಯಟ್ನಾಮಿನ ದಕ್ಷಿಣಪ್ರಾಂತ್ಯಗಳಿಗೆ ಒಡೆಯರಾದರು. ಅವರ ಕೇಂದ್ರ ಕ್ವಾಂಗ್-ಟ್ರಿ ಆಗಿತ್ತು. ಹದಿನಾರನೆ ಶತಮಾನದ ಕಡೆ ಯಲ್ಲಿ ಮ್ಯಾಕ್ ಮತ್ತು ಲೇ ಮನೆತನದವರ ಪ್ರಾಬಲ್ಯ ಅಡಗಿ

ಟ್ರಿನ್ ಮತ್ತು ನ್ಗುಯೇನ್ ಮನೆತನದವರು ವಿಯಟ್ನಾಂನಲ್ಲಿ ಪ್ರಮುಖ ಪ್ರತಿಸ್ಪರ್ಧಿಗಳಾದರು.

ಹದಿನೇಳನೇ ಶತಮಾನದಲ್ಲಿ ನ್ಗುಯೇನ್ ಮತ್ತು ಟ್ರಿನ್ ಮನೆತನದ ದೊರೆಗಳ ನಡುವೆ ಅನೇಕ ಕಾಳಗಗಳು ನಡೆದವು. ಇವುಗಳಿಂದ ಯಾವ ಹೆಚ್ಚಿನ ರಾಜಕೀಯ ಪರಿಣಾಮಗಳು ಉಂಟಾಗದೆ ಇದ್ದರೂ ಸಹ ದೇಶದ ಆರ್ಥಿಕ ಸ್ಥಿತಿಗತಿಗಳು ಹದಗೆಟ್ಟವು. ಟ್ರಿನ್ ಮನೆತನದವರು ಟಾಂಗ್-ಕಿಂಗ್ ಪ್ರದೇಶದಲ್ಲಿ ತಮ್ಮ ಪ್ರಾಬಲ್ಯ ಬೆಳಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಕಾಲದಲ್ಲಿ ನ್ಗುಯೇನ್ ಮನೆತನದ ದೊರೆಗಳು ದಕ್ಷಿಣದಲ್ಲಿ ಛಾಂರನ್ನು, ಅನಂತರ ಕ್ಯಾಂಬೋಡಿಯನ್ನರನ್ನು ಓಡಿಸಿ, ಅಲ್ಲೆಲ್ಲಾ ತಮ್ಮ ಸಂಸ್ಕೃತಿಯನ್ನು ಹರಡಿದರು. ಹೀಗೆ ವಿಯಟ್ನಾಮಿಯರು ಇಂದಿನ ಉತ್ತರ ಮತ್ತು ದಕ್ಷಿಣ ವಿಯಟ್ನಾಂಗಳೆಂದು ಕರೆಯುತ್ತಿರುವ ಪ್ರದೇಶಗಳನ್ನೆಲ್ಲಾ ತಮ್ಮ ವಶಮಾಡಿಕೊಂಡರು. ಮೂಲತಃ ಉತ್ತರದ ಟಾಂಗ್‌ಕಿಂಗ್ ಮತ್ತು ಅನ್ನಾಂ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದ ಈ ಜನಾಂಗ, ಕಾಲಾನಂತರ ಪ್ರಬಲರಾಗಿ ದಕ್ಷಿಣದತ್ತ ಒತ್ತರಿಸಿಬಂದು, ಮೊದಲು ಛಾಂರನ್ನು ಅನಂತರ ಕ್ಯಾಂಬೋಡಿಯನ್ನರನ್ನು ಓಡಿಸಿ ಆ ಪ್ರದೇಶವನ್ನು ಆಕ್ರಮಿಸಿಕೊಂಡರು.

ಹದಿನೆಂಟನೆ ಶತಮಾನದಲ್ಲಿ ವಿಯಟ್ನಾಮಿನಲ್ಲಿ ಪ್ರಬಲವಾಗಿದ್ದ ನ್ಗುಯೇನ್ (ದಕ್ಷಿಣದಲ್ಲೂ) ಮನೆತನದವರಿಗೂ, ಟ್ರಿನ್ (ಉತ್ತರದಲ್ಲೂ) ಮನೆತನದವರಿಗೂ ಅಧಿಕಾರಕ್ಕಾಗಿ ಕೊನೆಯ ಹೋರಾಟಗಳು ನಡೆದವು. ಈ ಆಂತರಿಕ ಯುದ್ಧಗಳಲ್ಲಿ ಫ್ರೆಂಚರು ತಲೆಹಾಕಿ, ನ್ಗುಯೇನ್ ಮನೆತನದ ರಾಜನಾದ ನ್ಗುಯೇನ್-ಆನ್ ಎಂಬುವನಿಗೆ ಬೆಂಬಲ ನೀಡಿದರು. ಟ್ರಿನ್ ಮನೆತನದ ಪ್ರಾಬಲ್ಯ ೧೮೦೨ ರಲ್ಲಿ ಸಂಪೂರ್ಣವಾಗಿ ಅಡಗಿ ಇಡೀ ಉತ್ತರ ಮತ್ತು ದಕ್ಷಿಣ

ವಿಯಟ್ನಾಂಗಳು ನುಯೇನ್ ಮನೆತನದ ಅರಸು ನುಯೇನ್-ಆನ್ (Nauyen-Anh) ನ ವಶವಾಯಿತು. ಜೂನ್ ಒಂದು ೧೮೦೨ ರಲ್ಲಿ ನುಯೇನ್-ಆನ್ ಹೂವೆ (Hue) ಪಟ್ಟಣದಲ್ಲಿ ವಿಯಟ್ನಾಂ ದೇಶದ ಚಕ್ರವರ್ತಿ ಎಂದು ಘೋಷಿಸಿಕೊಂಡ. ತನ್ನ ಹೆಸರನ್ನು ಜಿಯ-ಲಾಂಗ್ (Gia-long) ಎಂದು ಬದಲಾಯಿಸಿಕೊಂಡ. ಚೀನಾ ದೇಶದ ಮಂಚೂ ಚಕ್ರವರ್ತಿಯು ಈ ಆಡಳಿತಕ್ಕೆ ಮನ್ನಣೆ ಕೊಟ್ಟ. ಹೀಗೆ ಫ್ರೆಂಚರ ನೆರವಿನಿಂದ ಅಧಿಕಾರಕ್ಕೆ ಬಂದ ನುಯೇನ್ ಮನೆತನದವರು ಕಡೆಗೆ ಅವರಿಗೇ ತಮ್ಮ ದೇಶದ ಅನೇಕ ಪ್ರದೇಶಗಳನ್ನು ಬಿಟ್ಟುಕೊಟ್ಟು ಅವರ ಆಶ್ರಿತರಾಗಿರಬೇಕಾಯಿತು.

ವಿಯಟ್ನಾಂನಲ್ಲಿ ಫ್ರೆಂಚರ ವಸಾಹತು ನೀತಿ ಮತ್ತು ಆಡಳಿತ

ಅನ್ನಾಂ, ಕೊಚಿನ್-ಚೀನಾ ಮತ್ತು ಟಾಂಗ್-ಕಿಂಗ್‌ಗಳನ್ನು ಒಂದುಗೂಡಿಸಿ, ನುಯೇನ್ ಮನೆತನದ ಜಿಯಾಲಾಂಗ್‌ನು ೧೮೦೨ರಲ್ಲಿ ಇಡೀ ವಿಯಟ್ನಾಂಗೆ ಚಕ್ರವರ್ತಿಯೆಂದು ಘೋಷಿಸಿದ. ಅವನ ರಾಜಧಾನಿ ಹೂವೆ ಪಟ್ಟಣವಾಗಿತ್ತು. ಜಿಯಾ-ಲಾಂಗ್ ಚಕ್ರವರ್ತಿಯಾಗಲು ಫ್ರೆಂಚರು ಹೆಚ್ಚಿನ ಸಹಾಯ ನೀಡಿದರು. ಫ್ರೆಂಚ್ ಅಧಿಕಾರಿಯಾದ ಪಿನೋ (Pigneau: 1741–99) ಫ್ರಾನ್ಸ್ ದೇಶಕ್ಕೆ ವಿಯಟ್ನಾಮಿಯರ ರಾಜಕುಮಾರ ಕಾನ್ (Canh)ನನ್ನು ಮಾತುಕತೆ ನಡೆಸಲು ಕರೆದುಕೊಂಡುಹೋಗಿದ್ದ. ಫ್ರಾನ್ಸಿನ ಚಕ್ರವರ್ತಿ ೧೬ ನೇ ಲೂಯಿಯು ಎಲ್ಲಾ ಸಹಾಯ ನೀಡಲು ಒಪ್ಪಿಗೆ ಕೊಟ್ಟಿದ್ದ. ಹೀಗೆ ಫ್ರಾನ್ಸ್ ದೇಶದ ನೆರವಿನಿಂದ

ಜಿಯಾ-ಲಾಂಗ್ ೧೮೦೨ರಲ್ಲಿ ಪಟ್ಟಕ್ಕೆ ಬಂದು ಒಂದು ಹೊಸ ಅಧ್ಯಾಯವನ್ನೇ ವಿಯಟ್ನಾಂ ದೇಶದ ಇತಿಹಾಸದಲ್ಲಿ ಪ್ರಾರಂಭಿಸಿದನೆಂದು ಹೇಳಬಹುದು. ಹತ್ತೊಂಬತ್ತನೆಯ ಶತಮಾನದಲ್ಲಿ ಫ್ರೆಂಚರ ಪ್ರಾಬಲ್ಯ ಹೆಚ್ಚಿ ವಿಯಟ್ನಾಂನ ಕೆಲವು ಭಾಗಗಳು ಅವರ ವಶವಾದವು. ಜಿಯಾ-ಲಾಂಗ್‌ನು ಚೀನಾ ದೇಶದಿಂದಲೂ ತನ್ನ ಆಡಳಿತಕ್ಕೆ ಮನ್ನಣೆ ಕೊಡುವಂತೆ ಪ್ರಾರ್ಥಿಸಿಕೊಂಡ. ಚೀನಾ ದೇಶ ಅವನ ರಾಜ್ಯಕ್ಕೆ ಮನ್ನಣೆ ನೀಡಿತು.

ವಿಯಟ್ನಾಂ ದೇಶಕ್ಕೂ, ಪಾಶ್ಚಾತ್ಯರಿಗೂ ಹದಿನಾರನೆಯ ಶತಮಾನದಲ್ಲೇ ಸಂಪರ್ಕ ಏರ್ಪಟ್ಟಿದ್ದಿತು. ಪೋರ್ಚುಗೀಸರು, ಸ್ಪಾನಿಷರು ಆ ಶತಮಾನದಲ್ಲಿ ವಿಯಟ್ನಾಂನೊಡನೆ ವ್ಯಾಪಾರ, ವಾಣಿಜ್ಯ ಸಂಪರ್ಕಗಳನ್ನು ಇಟ್ಟುಕೊಂಡಿದ್ದರು. ಡಚ್ಚರು, ಬ್ರಿಟಿಷರು ಹನಾಯ್ ನಗರದಲ್ಲಿ ತಮ್ಮ ವ್ಯಾಪಾರದ ಕೋಠಿಗಳನ್ನು ಇಟ್ಟುಕೊಂಡಿದ್ದರು. ಹೀಗಿದ್ದರೂ ಫ್ರೆಂಚರೇ ಈ ದೇಶದಲ್ಲಿ ತಮ್ಮ ಪ್ರಾಬಲ್ಯವನ್ನು ಕಡೆಗೆ ಸ್ಥಾಪಿಸಿದರು. ಫ್ರೆಂಚರಿಗೆ ಎರಡು ಉದ್ದೇಶಗಳಿದ್ದವು. ಒಂದು ವ್ಯಾಪಾರ ಮಾಡುವುದು; ಎರಡು ಕ್ರೈಸ್ತ ಮತವನ್ನು ವಿಯಟ್ನಾಂನಲ್ಲಿ ಹರಡುವುದು. ಮೊದಲು ಫ್ರೆಂಚರ ಪ್ರಭಾವ ಕ್ರೈಸ್ತ ಮಿಷನರಿಗಳ ಮೂಲಕ ವಿಯಟ್ನಾಂ ದೇಶದೊಳಕ್ಕೆ ಪ್ರವೇಶಿಸಿತೆಂದು ಹೇಳಬಹುದು. ಹದಿನೇಳನೆಯ ಶತಮಾನದಲ್ಲಿ ಫ್ರೆಂಚ್ ಕ್ಯಾಥೊಲಿಕ್ ಮಿಶನರಿಗಳು ವಿಯಟ್ನಾಂಗೆ ಬಂದರು, ಅವರಲ್ಲಿ ಅಲೆಗ್ಸಾಂಡರ್ ಡು-ರೋಡ್ಸ್ (Alexander-de-Rhodes: 1591–1660)ನ ಹೆಸರು ಪ್ರಖ್ಯಾತವಾಗಿದೆ. ಈತನು ಕ್ರೈಸ್ತಮತ ಪ್ರಚಾರದ ಜೊತೆಗೆ ವಿಯಟ್ನಾಂ ಭಾಷೆಯನ್ನು ಬರೆಯಲು ರೋಮನ್ ಲಿಪಿಯ ಬಳಕೆಯನ್ನು ಜಾರಿಗೆ ತಂದನು. ಈ ಭಾಷೆಗೆ ಅನ್ನಾಮೈಟ್

ಎಂದು ಹೆಸರಿಟ್ಟು, ಮೊದಲು ಇದನ್ನು ಚೀನಿಯರ ಲಿಪಿಗಳ ಮೂಲಕ ಬರೆಯುತ್ತಿದ್ದರು. ಈ ಭಾಷೆಯ ಮೂಲಕ ವಿದ್ಯಾ ಪ್ರಸಾರ ನಡೆದು, ವಿಯಟ್ನಾಮಿಯರಲ್ಲಿ ಮುಂದೆ ರಾಷ್ಟ್ರೀಯ ಪ್ರಜ್ಞೆ ತಲೆದೋರಲು ಸಹಾಯವಾಯಿತು. ಹೀಗೆ ಕ್ರೈಸ್ತ ಮಿಶನರಿಗಳಿಂದ ಪ್ರಾರಂಭವಾದ ಫ್ರೆಂಚರ ಪ್ರಭಾವ ಜಿಯ-ಲಾಂಗನ ಕಾಲಕ್ಕೆ ರಾಜಕೀಯ ಬಣ್ಣವನ್ನು ತಾಳಿತು. ದೇಶದ ಒಳಜಗಳಗಳಲ್ಲಿ ಒಂದು ಪಕ್ಷಕ್ಕೆ ಸಹಾಯ ನೀಡುವುದರ ಮೂಲಕ ಫ್ರೆಂಚರು ವಿಯಟ್ನಾಂನಲ್ಲಿ ತಮ್ಮ ಪ್ರಾಬಲ್ಯ ಬೆಳೆಸಲು ನಾಂದಿ ಹಾಡಿದರು.

ಜಿಯಾಲಾಂಗ್ ಬದುಕಿರುವವರೆಗೆ ಫ್ರೆಂಚರ-ವಿಯಟ್ನಾಮಿಯರ ನಡುವಣ ಸ್ನೇಹ ಚೆನ್ನಾಗಿತ್ತು. ಜಿಯಾಲಾಂಗ್‌ನು ಪರಮತ ಸಹಿಷ್ಣು ನೀತಿಯನ್ನು ಅನುಸರಿಸಿ ಬೌದ್ಧಮತ, ಕನ್‌ಫ್ಯೂಷಿಯನ್ ಮತ, ಹಾಗೂ ಕ್ರೈಸ್ತ ಮತಕ್ಕೆ ಸಮಾನವಾದ ಮನ್ನಣೆ ನೀಡಿದ್ದನು. ಆದರೆ ಜಿಯಾಲಾಂಗ್‌ನು ೧೮೨೦ರಲ್ಲಿ ಮರಣ ಹೊಂದಿದ ಮೇಲೆ ಪರಿಸ್ಥಿತಿ ಬದಲಾವಣೆ ಹೊಂದಿ ಫ್ರೆಂಚರಿಗೂ, ವಿಯಟ್ನಾಮಿಯರಿಗೂ ನಡುವೆ ದ್ವೇಷದ ಬೆಂಕಿ ಹತ್ತಿಕೊಂಡಿತು. ಜಿಯಾಲಾಂಗ್‌ನ ಉತ್ತರಾಧಿಕಾರಿಗಳಾದ ಮಿನ್ ಮಾಂಗ್ (Minh-Mong : 1820-41) ಥ್ಯೂ-ಟ್ರಿ (Thieu-Tri : 1841-48) ಮತ್ತು ಟು-ಡಕ್ (1848-83)ರು ಕ್ರೈಸ್ತಮತ ಪಾದ್ರಿಗಳನ್ನು ಹಿಂಸಿಸಲು ಆರಂಭಿಸಿದರು. ಅನೇಕ ಫ್ರೆಂಚ್ ಕ್ಯಾಥೋಲಿಕ್ ಮಿಶನರಿಗಳನ್ನು ಕೊಲ್ಲಲಾಯಿತು. ಕ್ರೈಸ್ತ ಮತಕ್ಕೆ ಪರಿವರ್ತನೆಯಾದ ವಿಯಟ್ನಾಮಿಯರನ್ನು ಹಿಂಸಿಸಲು ಆರಂಭಿಸಿದರು. ಇಂತಹ ಕ್ರೈಸ್ತಮತ ದ್ವೇಷ ಫ್ರೆಂಚರನ್ನು ಕೆಣಕಿತು. ೧೮೫೭-೬೮ರ ನಡುವೆ ವಿಯಟ್ನಾಂನಲ್ಲಿ ೧,೫೦,೦೦೦ ಕ್ರಿಶ್ಚಿಯನ್ನರನ್ನು ಕೊಲ್ಲಲಾಯಿತು. ತನ್ನದೇ ಆದ ಆಂತರಿಕ ತೊಂದರೆಗಳನ್ನು ಹೊಂದಿದ್ದ

ಫ್ರಾನ್ಸ್ ಇತ್ತಕಡೆ ಗಮನ ಕೊಡಲಾಗಲಿಲ್ಲ. ಫ್ರಾನ್ಸಿನ ಮಹಾ ಕ್ರಾಂತಿ, ನೆಪೋಲಿಯನ್ನನ ಕಾಲದ ದಿನಗಳಲ್ಲಿ ಮಗ್ನರಾಗಿದ್ದ ಫ್ರೆಂಚರಿಗೆ ವಿಯಟ್ನಾಂನಲ್ಲಿ ಕ್ರೈಸ್ತಮತೀಯರ ಬಗ್ಗೆ ನಡೆಯುತ್ತಿದ್ದ ಹಿಂಸಾಚಾರಗಳ ಕಡೆ ಗಮನ ಹರಿಸುವಷ್ಟು ಸಮಯವಿರಲಿಲ್ಲ. ಆದರೆ ಮೂರನೆಯ ನೆಪೋಲಿಯನ್ನನು ಫ್ರಾನ್ಸಿನ ಚಕ್ರವರ್ತಿಯಾದಮೇಲೆ ಪರಿಸ್ಥಿತಿ ಬದಲಾಯಿತು. ೧೮೫೭ರಲ್ಲಿ ಅವನು ವಿಸ್ತರಣ ನೀತಿಗೆ ಅಡಿಪಾಯ ಹಾಕಿದನು. ಫ್ರಾನ್ಸ್‌ದೇಶದ ಇತರ ಯೂರೋಪಿಯನ್ ದೇಶಗಳಂತೆ ವಸಾಹತುಗಳನ್ನು ಹೊಂದಿರಬೇಕೆಂಬುದು ಅವನ ಆಸೆಯಾಗಿದ್ದಿತು. ವಿಯಟ್ನಾಂನ ಚಕ್ರವರ್ತಿ ಟು-ಡಕ್‌ನಿಗೆ ಒಂದು ಮನವಿ ಕಳುಹಿಸಿ ತಕ್ಷಣವೆ ಕ್ರಿಶ್ಚಿಯನ್ನರಲ್ಲಿ ಸಾಮೂಹಿಕ ಕೊಲೆಯನ್ನು ನಿಲ್ಲಿಸಬೇಕೆಂದು ಮೂರನೆ ನೆಪೋಲಿಯನ್ ಕೇಳಿಕೊಂಡ. ಇದಕ್ಕೆ ಸಮರ್ಪಕವಾದ ಉತ್ತರ ದೊರೆಯದಿದ್ದಾಗ, ೧೮೫೮ರಲ್ಲಿ ಫ್ರೆಂಚರು; ಸ್ಪಾನಿಷರು ಸೇರಿಕೊಂಡು ಒಂದು ನೌಕಾಪಡೆಯನ್ನು ರಿಗೋಲ್ಟನ (Rigault) ನಾಯಕತ್ವದಲ್ಲಿ ಕಳುಹಿಸಿಕೊಡಲಾಯಿತು. ರಿಗೋಲ್ಟನು ಸೈಗಾನ್ ನಗರವನ್ನು ಮುತ್ತಿ ವಶಪಡಿಸಿಕೊಂಡ. ೧೮೬೨ರಲ್ಲಿ ಟು-ಡಕ್‌ನು ಫ್ರೆಂಚರೊಡನೆ ಒಪ್ಪಂದಮಾಡಿಕೊಂಡು ದಕ್ಷಿಣ ವಿಯಟ್ನಾಂನನ್ನು ಅವರಿಗೆ ಬಿಟ್ಟುಕೊಟ್ಟ. ಟು-ಡಕ್‌ನ ಮರಣಾನಂತರ ಹೀಪ್-ಹೋವಾ (Hiep-Hoa) ಎಂಬುವನು ಸಿಂಹಾಸನವನೇರಿದನು (೧೮೮೩). ಇವನ ಕಾಲದಲ್ಲಿ ಮತ್ತೆ ವಿಯಟ್ನಾಮಿಯರಿಗೂ ಫ್ರೆಂಚರಿಗೂ ಯುದ್ಧ ನಡೆದು, ಫ್ರೆಂಚರು ಹೂವೆ (Hu e) ಪಟ್ಟಣವನ್ನು ಹಿಡಿದರು. ೧೮೮೪ರಲ್ಲಿ ಮತ್ತೊಂದು ಒಪ್ಪಂದವಾಗಿ ಟಾಂಗ್-ಕಿಂಗ್ ಮತ್ತು ಅನ್ನಾಂಗಳು ಫ್ರೆಂಚರ ಆಶ್ರಿತ ರಾಜ್ಯಗಳೆಂದು (Protectorates) ಘೋಷಿಸಲಾಯಿತು. ಹೀಗೆ ಹತ್ತೊಂಬತ್ತನೆ ಶತಮಾನ

ಅಂತ್ಯಭಾಗದ ವೇಳೆಗೆ ಫ್ರೆಂಚರು ದಕ್ಷಿಣ ವಿಯಟ್ನಾಂನ ಕೊಚಿನ್ ಚೀನಾ (Cochin-China) ಪ್ರದೇಶದಲ್ಲಿ ತಮ್ಮ ವಸಾಹತನ್ನು ಸ್ಥಾಪಿಸಿಕೊಂಡಿದಲ್ಲದೆ ನುಯೇನ್ ಮನೆತನದ ಅರಸರು ಆಳುತ್ತಿದ್ದ ಟಾಂಗ್-ಕಿಂಗ್, ಅನ್ನಾಂ ಪ್ರಾಂತ್ಯಗಳ ಮೇಲೂ ತಮ್ಮ ಹತೋಟಿಯನ್ನು ಸ್ಥಾಪಿಸಿದರು. ಇಲ್ಲಿಂದಾಚೆಗೆ ಫ್ರೆಂಚರ ಆಳ್ವಿಕೆಯ ಕಾಲ ಪ್ರಾರಂಭವಾಗುತ್ತದೆ.

ಫ್ರೆಂಚರ ಆಳ್ವಿಕೆಯ ಕಾಲದಲ್ಲಿ ವಿಯಟ್ನಾಂನಲ್ಲಿ ಮೂರು ವಿಭಾಗಗಳಿದ್ದವು. ೧) ಟಾಂಗ್-ಕಿಂಗ್ ೨) ಅನ್ನಾಂ ೩) ಕೊಚಿನ್ ಚೀನಾ. ಟಾಂಗ್-ಕಿಂಗ್ ಮತ್ತು ಅನ್ನಾಂಗಳು ಫ್ರೆಂಚರ ಆಶ್ರಿತ ರಾಜ್ಯಗಳಾಗಿದ್ದರೆ, ವಿಯಟ್ನಾಂನ ದಕ್ಷಿಣ ಭಾಗವಾದ ಕೊಚಿನ್-ಚೀನಾ ಫ್ರೆಂಚರ ವಸಾಹತಾಗಿತ್ತು. ಆಶ್ರಿತರಾಜ್ಯಗಳಲ್ಲಿ ಫ್ರೆಂಚರು 'ಪರೋಕ್ಷ' ಆಡಳಿತ ನಡೆಸಿದರೆ, ಕೊಚಿನ್ ಚೀನಾದಲ್ಲಿ ಫ್ರೆಂಚರು "ನೇರ" ಆಡಳಿತ ನಡೆಸುತ್ತಿದ್ದರು.

ಫ್ರೆಂಚರು ಕೇಂದ್ರಿಕೃತವಾದ ಆಡಳಿತ ವ್ಯವಸ್ಥೆಯನ್ನು ವಿಯಟ್ನಾಂನಲ್ಲಿ ಸ್ಥಾಪಿಸಿದರು. ಈ ಸಂಪ್ರದಾಯ ನೆಪೋಲಿಯನ್ನನ ಕಾಲದಿಂದ ಫ್ರಾನ್ಸಿನಲ್ಲಿ ಬಂದಿದ್ದ ಪದ್ಧತಿ. ಈ ನೆಪೋಲಿಯನ್ನನ ಕೇಂದ್ರಿಕೃತ ಆಡಳಿತವನ್ನೇ ಫ್ರೆಂಚರು ೨೦ ನೇ ಶತಮಾನದಲ್ಲಿ ವಿಯಟ್ನಾಂನಲ್ಲಿ ವ್ಯವಸ್ಥೆಗೊಳಿಸಿದರು. ಪಾಲ್ ಡೊಮರ್ (Paul Doumer) ಎಂಬ ಫ್ರೆಂಚ್ ಗೌರ್ನರ್ ಜನರಲ್‌ನು (೧೮೯೭-೧೯೦೨) ವಸಾಹತು ಆಡಳಿತಕ್ಕೆ ಅಸ್ತಿಭಾರ ಹಾಕಿದನು. ಆಡಳಿತ ಮುಖ್ಯಾಧಿಕಾರಿ ಗೌರ್ನರ್ ಜನರಲ್ ಅವನು ಹನಾಯ್ ನಗರದಲ್ಲಿ ವಾಸಿಸುತ್ತಿದ್ದ. ಅವನು ರಾಜಕೀಯ ಪಕ್ಷದಿಂದ ಹಾಗೂ ಅದರ ಪ್ರಭಾವದಿಂದ ನೇಮಕವಾದ ವ್ಯಕ್ತಿ. ಈ ಅಧಿಕಾರಕ್ಕೆ ಬಂದ ವ್ಯಕ್ತಿಗಳಿಗೆ ಸಾಮಾನ್ಯವಾಗಿ ವಸಾಹತು ಆಡಳಿತದ ಬಗ್ಗೆ

ಪೂರ್ವಭಾವಿ ಅನುಭವವಿರುತ್ತಿರಲಿಲ್ಲ. ಇವನ ಅಧಿಕಾರಾವಧಿ ಸಾಮಾನ್ಯವಾಗಿ ಎರಡು ವರ್ಷ. ಇದರ ಪರಿಣಾಮವೆಂದರೆ ಗೌರ್ನರ್ ಜನರಲ್ ಆದ ವ್ಯಕ್ತಿ ವಿಯಟ್ನಾಂನ ಸಮಸ್ಯೆಗಳನ್ನು ಅರ್ಥಮಾಡಿ ಕೊಳ್ಳುವುದರಲ್ಲೇ ಹೆಚ್ಚಿನ ಕಾಲ ವ್ಯಯವಾಗಿ ನಿಜವಾದ ಆಸಕ್ತಿ ಹೊಂದಲು ಆಗುತ್ತಿರಲಿಲ್ಲ. ಆದುದರಿಂದ ಖಾಯಂ ಆಗಿ ನೇಮಕ ವಾದ ಅವನ ಕೈಕೆಳಗಿನ ಅಧಿಕಾರಿಗಳ ಪ್ರಭಾವಕ್ಕೆ ಅವನು ಒಳ ಗಾಗುತ್ತಿದ್ದುದು ಸಹಜವಾಗಿತ್ತು. ಪ್ಯಾರಿಸ್‌ನಲ್ಲಿದ್ದ ವಸಾಹತು ಗಳ ಸಚಿವ ಶಾಖೆ (Ministry of Colonies) ಸಹ ಅವನ ಮೇಲೆ ನಿರ್ಬಂಧಗಳನ್ನು ಹೇರಿತ್ತು. ಆ ಸಚಿವ ಶಾಖೆಯು ಕೈಕೆಳಗೆ ನಿರ್ದೇಶನ ಹಾಗೂ ನಿಯಂತ್ರಣ (Direction & Control) ವೆಂಬ ಇಲಾಖೆಯಿತ್ತು. ಈ ಇಲಾಖೆಯು ಇನ್ಸ್‌ಪೆಕ್ಟರುಗಳು ಆಗಾಗ ವಿಯಟ್ನಾಂಗೆ ಭೇಟಿ ಕೊಟ್ಟು ಅಲ್ಲಿನ ಆಡಳಿತದ ಬಗ್ಗೆ ಫ್ರೆಂಚ್ ಸರ್ಕಾರಕ್ಕೆ ವರದಿ ಸಲ್ಲಿಸುತ್ತಿದ್ದರು. ಅವರ ವರದಿಗಳು ರಹಸ್ಯವಾಗಿದ್ದವು. ಹೀಗಾಗಿ, ಸ್ಥಳೀಯ ಅಧಿಕಾರಿಗಳು ಫ್ರೆಂಚ್ ಸರ್ಕಾರ ಹೇಳಿದಂತೆ ಕೇಳಿಕೊಂಡಿರುವುದೇ ತಮ್ಮ ಕರ್ತವ್ಯವೆಂದು ತಿಳಿದಿದ್ದರು. ಅವರಿಗೆ ಸ್ವಾತಂತ್ರವಾಗಲಿ ವ್ಯವಧಾನವಾಗಲಿ ಇರುತ್ತಿರಲಿಲ್ಲ.

ಗೌರ್ನರ್ ಜನರಲ್‌ನ ಕೈ ಕೆಳಗೆ, ಒಬ್ಬ ಗೌರ್ನರನು, ಇಬ್ಬರು ರೆಸಿಡೆಂಟ್ ಸುಪಿರಿಯರ್ (Resident Superiors) ಗಳೆಂಬ ದೊಡ್ಡ ಅಧಿಕಾರಿಗಳಿದ್ದರು. ಕೊಚಿನ್-ಚೀನಾದ ವಸಾಹತಿಗೆ ಗೌರ್ನರ್ ಮುಖ್ಯಾಧಿಕಾರಿಯಾಗಿದ್ದರೆ, ರೆಸಿಡೆಂಟ್ ಸುಪಿರಿಯರ್ ಗಳು, ಟಾಂಗ್‌ಕಿಂಗ್ ಮತ್ತು ಅನ್ನಾಂಗಳ ಮುಖ್ಯಾಧಿಕಾರಿ ಗಳಾಗಿದ್ದರು. ಹೀಗೆ ಫ್ರೆಂಚ್‌ರ ವಸಾಹತು ಆಡಳಿತ ಕೇಂದ್ರಿಕೃತ ವಾದ ವ್ಯವಸ್ಥೆಯಾಗಿತ್ತು.

ಕೊಚಿನ್-ಚೀನಾದಲ್ಲಿ ಕೆಲಸ ಮಾಡುತ್ತಿದ್ದ ಗೌರ್ನರ್‌ಗೆ ಸಹಾಯಕವಾಗಿ ಒಂದು ಸಲಹಾ ಮಂಡಳಿಯೂ (Privy Council) ಮತ್ತು ಶಾಸನ ಮಂಡಳಿ (Legislative Council) ಗಳು ಇದ್ದವು. ಕೊಚಿನ್-ಚೀನಾವನ್ನು ಅನೇಕ ಜಿಲ್ಲೆಗಳಾಗಿ ವಿಭಾಗಿಸಲಾಯಿತು. ಪ್ರತಿಯೊಂದು ಜಿಲ್ಲೆಯ ಮುಖ್ಯಾಧಿಕಾರಿ ಫ್ರೆಂಚ್‌ನೇ ಆಗಿದ್ದ. ಫ್ರೆಂಚರು ತಾವು ಸ್ಥಳೀಯರಿಗೆ ಅಂದರೆ ವಿಯೆಟ್ನಾಮಿಯರಿಗೆ ಸರ್ಕಾರದ ಹುದ್ದೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಕೊಡುತ್ತೇವೆಂದು ಘೋಷಿಸಿಕೊಂಡಿದ್ದರು (Policy of Association). ಕೊಚಿನ್-ಚೀನಾದಲ್ಲಿ ವಿಯಟ್ನಾಮಿ ಅಧಿಕಾರಿಗಳ ಸಂಖ್ಯೆ, ಫ್ರೆಂಚ್ ಅಧಿಕಾರಿಗಳ ಸಂಖ್ಯೆಗಿಂತ ಕಡಮೆಯಿದ್ದಿತು. ಡಚ್ ಮತ್ತು ಬ್ರಿಟಿಷರು ಆಗ್ನೇಯ ಏಷ್ಯದ ತಮ್ಮ ವಸಾಹತುಗಳಲ್ಲಿ ಫ್ರೆಂಚರಿಗಿಂತ ಹೆಚ್ಚಿನ ಸ್ಥಾನಮಾನಗಳನ್ನು ಸ್ಥಳೀಯ ಜನಾಂಗದವರಿಗೆ ಕೊಟ್ಟಿದರು. ಉದಾಹರಣೆಗೆ, ಬರ್ಮಾದಲ್ಲಿ ೧೯೦೦ರಲ್ಲಿ ಯುರೋಪಿಯನ್ನರು ಹೆಚ್ಚಿನ ಮಟ್ಟಿಗೆ ಸಿವಿಲ್ ಸರ್ವೀಸ್ ಹುದ್ದೆಗಳನ್ನು (I.C.S.) ಹೊಂದಿದ್ದರು, ಸಿವಿಲ್ ಸರ್ವೀಸ್ ಹುದ್ದೆಗಳಲ್ಲದ ಹೆಚ್ಚಿನ ಹುದ್ದೆಗಳಿಗೆ ಭಾರತೀಯರೋ ಅಥವಾ ಬರ್ಮಿಯರೋ ನೇಮಕವಾಗುತ್ತಿದರು. ೧೯೨೩ ರಲ್ಲಿ "ದ್ವಂದ್ವ ಸರ್ಕಾರ" (Dyarchy) ರಚಿತವಾದ ಮೇಲೆ ಉನ್ನತ ಹುದ್ದೆಗಳಿಗೂ ಬ್ರಿಟಿಷರು ಬರ್ಮಿಯರನ್ನೇ ನೇಮಿಸುತ್ತಿದ್ದರು.

ಆಶ್ರಿತ ರಾಜ್ಯಗಳಾದ ಅನ್ನಾಂ ಮತ್ತು ಟಾಂಗ್‌ಕಾಂಗ್‌ಗಳಲ್ಲಿ ರೆಸಿಡೆಂಟ್ ಸುಪೀರಿಯರ್‌ಗಳು ಮುಖ್ಯಾಧಿಕಾರಿಗಳಿದ್ದು, ಅವರ ಸಹಾಯಕ್ಕೆ ಪ್ರೀವಿ ಕೌನ್ಸಿಲ್ ಮತ್ತು ಪ್ರೊಟೆಕ್ಟರೇಟಾ ಕೌನ್ಸಿಲ್‌ಗಳಿದ್ದವು. ಈ ಸಭೆಗಳು ಕೊಚಿನ್-ಚೀನಾದಲ್ಲಿದ್ದಂತೆ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಪ್ರತಿ ಆಶ್ರಿತ ರಾಜ್ಯವನ್ನು

ಅನೇಕ ಜಿಲ್ಲೆಗಳಾಗಿ ವಿಭಾಗಮಾಡಿ, ಫ್ರೆಂಚ್ ಅಧಿಕಾರಿಗಳನ್ನು ನೇಮಿಸಿದ್ದರು. ಈ ಪ್ರದೇಶಗಳಲ್ಲಿ ಫ್ರೆಂಚರ ಆಡಳಿತ "ಪರೋಕ್ಷ" ವಾಗಿತ್ತು. ಅಂದರೆ ಸ್ಥಳೀಯರ ಮೂಲಕ ಫ್ರೆಂಚರ ಆಡಳಿತ ನಡೆಸುತ್ತಿದ್ದರು. ಈ ಆಶ್ರಿತ ರಾಜ್ಯಗಳಲ್ಲಿ ರೆಸಿಡೆಂಟರದೇ ದರ್ಪ ಆಡಳಿತ. ಅವನಂತೆಯೇ ಜಿಲ್ಲೆಗಳಲ್ಲಿನ ಅವನ ಪ್ರತಿನಿಧಿಗಳು ಸಹ ಬಲಿಷ್ಠರಾಗಿದ್ದರು. ವಿಯಟ್ನಾಮಿಯರ ರಾಜ ಕೇವಲ ಹೆಸರಿಗೆ ಮಾತ್ರಕ್ಕೆ ರಾಜನಾಗಿದ್ದ. ರಾಜ್ಯಾಡಳಿತವು ಪೂರ್ವ ನಿಯೋಜಿತ ಹಾಗೂ, ಎಚ್ಚರಿಕೆಯಿಂದ ಆರಿಸಲ್ಪಟ್ಟ ಚೊಕ್ಕ ಅಧಿಕಾರಿಗಳ ಕೈ ಯಲ್ಲೇ ಉಳಿಯಿತು. ರಾಜನಾಗಲಿ, ರಾಜಕುಮಾರನಾಗಲಿ, ಅನ್ನಾಂ ಮತ್ತು ಟಾಂಗ್-ಕಿಂಗ್‌ಗಳ ಆಡಳಿತದಲ್ಲಿ ಕೈಯಿಡಲು ಸಾಧ್ಯವಿಲ್ಲದಂತೆ ಎಲ್ಲಾ ಎಚ್ಚರಿಕೆಗಳನ್ನು ಫ್ರೆಂಚರು ವಹಿಸಿದ್ದರು. ಅದೂಅಲ್ಲದೆ ಫ್ರೆಂಚ್ ಪ್ರಭುತ್ವಕ್ಕೆ ಸ್ವಾಮಿ ನಿಷ್ಠೆಯನ್ನು ತೋರಿಸ ಲೊಪ್ಪಿದ ವಿಯಟ್ನಾಮಿಯ ಜನಕ್ಕೆ ಉತ್ತಮ ಹುದ್ದೆ ಹಾಗೂ ಫ್ರೆಂಚ್ ಪ್ರಜೆಯಂತಹ (French Citizenship) ಪುರಸ್ಕಾರ ಗಳು ದೊರೆಯುತ್ತಿದ್ದವು. ಈ ಕಾರಣಗಳಿಂದ ವಿಯಟ್ನಾಮಿ ಅಧಿಕಾರಿಗಳಿಗೆ ರಾಜನಲ್ಲಿದ್ದ ಅವಿಚಲವಾದ ಶ್ರದ್ಧಾಭಕ್ತಿಗಳು ಕ್ರಮೇಣ ಶಿಥಿಲವಾಗತೊಡಗಿತು.

ಫ್ರೆಂಚರ ವಸಾಹತಾಗಿದ್ದ ದಕ್ಷಿಣ ವಿಯಟ್ನಾಂನ ಕೊಚಿನ್-ಚೀನಾದಲ್ಲಿ ಫ್ರೆಂಚರು ಆಧುನಿಕ ವಿದ್ಯಾಭ್ಯಾಸಕ್ಕೆ ಗಮನಕೊಟ್ಟರು. ಆದರೆ ವಿದ್ಯಾಭ್ಯಾಸದ ಉದ್ದೇಶ ದುಭಾಷಿ (Interpreters) ಗಳನ್ನು ತಯಾರುಮಾಡುವುದೇ ಹೊರತು, ಜ್ಞಾನಾರ್ಜನೆಯಾಗಿರ ಲಿಲ್ಲ. ಹೀಗೆ ಫ್ರೆಂಚ್–ಸ್ಥಳೀಯ ಭಾಷೆಗಳ ಶಾಲೆಗಳು ತೆರೆಯ ಲ್ಪಟ್ಟವು. ಈ ವಿದ್ಯಾಭ್ಯಾಸ ಅಧಿಕಾರಕ್ಕೇರಲು ಅನುಕೂಲವೆಂದು ಕಂಡುಬಂದಾಗ, ಶ್ರೀಮಂತರ ಮಕ್ಕಳು ಶಾಲೆಗೆ ಸೇರಿದರು.

ಆಧುನಿಕ ಪಾಶ್ಚಾತ್ಯ ವಿದ್ಯಾಭ್ಯಾಸ ಕೊಚಿನ್-ಚೀನಾದಲ್ಲಿ ಜನಪ್ರಿಯವಾದರೆ, ಆಶ್ರಿತ ರಾಜ್ಯಗಳಾದ ಅನ್ನಾಂ ಮತ್ತು ಟಾಂಗ್‌ಕಿಂಗ್‌ಗಳಲ್ಲಿ ಸ್ಥಳೀಯ, ಪ್ರಾಚೀನ ವಿದ್ಯಾಭ್ಯಾಸ ಕ್ರಮವೇ ಹೆಚ್ಚಾಗಿ ಮುಂದುವರಿಯಿತು. ಇಂತಹ ಶಾಲೆಗಳಿಂದ ಹೊರಬಿದ್ದ ವಿಯಟ್ನಾಮೀಯರೆ ರಾಷ್ಟ್ರೀಯ ಸಂಗ್ರಾಮದ ಮುಖಂಡರಾದರು. ೧೯೩೯ರಲ್ಲಿ ೫,೦೦,೦೦೦ ವಿಯಟ್ನಾಮಿ ಮಕ್ಕಳು ಪ್ರೈಮರಿಶಾಲೆಗಳಲ್ಲೂ, ೫೦,೦೦೦ ಮಿಡ್ಲ್ ಸ್ಕೂಲುಗಳಲ್ಲೂ, ೫೦೦೦ ಹೈಸ್ಕೂಲುಗಳಲ್ಲೂ ಓದುತ್ತಿದ್ದರು. ೧೯೩೭ರಲ್ಲಿ ಹನಾಯ್ ವಿಶ್ವವಿದ್ಯಾನಿಲಯದಲ್ಲಿ ೬೩೧ ಜನ ವಿದ್ಯಾರ್ಥಿಗಳಿದ್ದರು. ಸಾಂಸ್ಕೃತಿಕವಾಗಿ ಫ್ರೆಂಚರು ವಿಯಟ್ನಾಮೀಯರನ್ನು ತಮ್ಮ ನಡೆ, ನುಡಿ ಆಚಾರ ವಿಚಾರಗಳಿಗೆ ಸಂಪೂರ್ಣವಾಗಿ ಪರಿವರ್ತನೆ ಮಾಡುವ ಉದ್ದೇಶವನ್ನಿಟ್ಟುಕೊಂಡಿದ್ದರು. ಇದಕ್ಕೆ ಪಾಲಿಸಿ ಆಫ್ ಅಸ್ಸಿಮಿಲೇಷನ್ (Policy of Assimilation) ಎಂದು ಕರೆಯುತ್ತಾರೆ. ಹೆಚ್ಚಿನ ಶ್ರೀಮಂತ ವಿಯಟ್ನಾಮೀಯರು, ಫ್ರೆಂಚರನ್ನು, ಅವರ ಸಂಸ್ಕೃತಿಯನ್ನು ಅನುಕರಣೆ ಮಾಡತೊಡಗಿದರು. ಆದರೆ ಈ ಸಾಂಸ್ಕೃತಿಕ ಪ್ರಸಾರದಿಂದ ಫ್ರೆಂಚರು ಯೋಚಿಸಿದಂತೆ ನಡೆಯಲಿಲ್ಲ. ಫ್ರೆಂಚ್ ಭಾಷೆ ಆಚಾರ, ನಡೆ ನುಡಿಗಳಲ್ಲಿ ಪರಿಣತರಾದ ಹಲವು ವಿಯಟ್ನಾಮಿಯರು, ಫ್ರೆಂಚರಿಗೆ ವಿಧೇಯರಾಗಿರುವುದರ ಬದಲು ಅವರ ಬಗ್ಗೆ ವಿಮರ್ಶೆ ನಡೆಸುವ ಕೆಲಸಕ್ಕೆ ಕೈಹಾಕಿದರು. ಫ್ರೆಂಚರು ತಮ್ಮ ಸಂಸ್ಕೃತಿಯನ್ನು ವಿಯಟ್ನಾಂನಲ್ಲಿ ಬೇರೂರುವಂತೆ ಮಾಡಿ ಅಲ್ಲೊಂದು ಮರಿ ಫ್ರಾನ್ಸನ್ನು ಸ್ಥಾಪಿಸುವ ಆಲೋಚನೆಯಲ್ಲಿದ್ದಾಗಲೇ ಕೆಲವು ಪ್ರಖ್ಯಾತ ಫ್ರೆಂಚ್ ತಜ್ಞರು, ಪಂಡಿತರು, ವಿಯಟ್ನಾಂನ ಇತಿಹಾಸ ಕಲೆ, ಧರ್ಮ, ಸಾಹಿತ್ಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಆಳವಾದ ಸಂಶೋಧನೆ ನಡೆಸಿ ಇಲ್ಲಿನ ಅಧ್ಯಯನಕ್ಕೆ ಅಸ್ತಿಭಾರ ಹಾಕಿ

ಮಹೋಪಕಾರ ಮಾಡಿದರು. ಇಂತಹ ಸಂಶೋಧನೆಗಳಿಂದಲೂ ವಿಯಟ್ನಾಮಿಯರ ರಾಷ್ಟ್ರಪ್ರಜ್ಞೆಯ ಬೆಳವಣಿಗೆಗೆ ತುಂಬಾ ಸಹಾಯ ವಾಯಿತು. ತಮಗೊಂದು ತಮ್ಮದೇ ಆದ ಸಂಸ್ಕೃತಿ ಪರಂಪರೆ ಇದೆ ಎಂಬುದು ವಿಯಟ್ನಾಮಿಯರಿಗೊಂದು ಹೆಮ್ಮೆಯ ಸಂಗತಿ ಯಾಯಿತು.

ಆರ್ಥಿಕವಾಗಿ ಫ್ರೆಂಚರು ವಿಯಟ್ನಾಂನಲ್ಲಿ ಶೋಷಣೆಯ ನೀತಿ ಯನ್ನು ಅನುಸರಿಸಿದರು. ಮೇಕಾಂಗ್ ನದಿಯ ಫಲವತ್ತಾದ ಭೂಮಿಯನ್ನು ಹೊಂದಿದ್ದ ಕೊಚಿನ್-ಚೀನಾ ಹಾಗೂ ಕೆಂಪು ನದಿಯ ಮುಖಜ ಭೂಮಿಯನ್ನು ಒಳಗೊಂಡಿದ್ದ ಟಾಂಗ್-ಕಿಂಗ್ ಪ್ರದೇಶಗಳು ಭತ್ತದ ಬೆಳೆಗೆ ಹಿಂದಿನಿಂದಲೂ ಪ್ರಸಿದ್ಧಿಯಾಗಿದ್ದು, ಈ ಕಾಲದಲ್ಲಿ ಫ್ರೆಂಚರ ಆರ್ಥಿಕ ಶೋಷಣೆಯ ಕೇಂದ್ರಗಳಾದವು. ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದೇ ಫ್ರೆಂಚರ ಆರ್ಥಿಕ ಧೋರಣೆಯ ಮುಖ್ಯ ಗುರಿಯಾಗಿತ್ತು. ವಸಾಹತು ತನ್ನ ತಾಯ್ನಾಡಿಗೆ ಹೆಚ್ಚು ಪದಾರ್ಥಗಳನ್ನು ರಫ್ತುಮಾಡಬೇಕು ಮತ್ತು ತಾಯ್ನಾಡಿನಲ್ಲಿ ತಯಾರಾದ ಸಿದ್ಧವಸ್ತುಗಳನ್ನು ಆಮದುಮಾಡಿ ಕೊಳ್ಳಬೇಕು ಎಂಬುದೇ ಫ್ರೆಂಚರ ನೀತಿಯಾಗಿತ್ತು. ಆದುದರಿಂದ ವಿಯಟ್ನಾಂ ದೇಶದ ಆರ್ಥಿಕ ಸ್ಥಿತಿಗತಿಗಳು ಫ್ರೆಂಚ್ ಹಿತಾಸಕ್ತಿ ಗಳನ್ನು ಅವಲಂಬಿಸಿತ್ತು. ದೇಶದ ಹೆಚ್ಚಿನ ಜನ ವ್ಯವಸಾಯವನ್ನೇ ನಂಬಿ ಬದುಕುತ್ತಿದ್ದರು. ಫ್ರೆಂಚರು ಆಧುನಿಕ ಕೈಗಾರಿಕೆಗಳನ್ನು ಸ್ಥಾಪಿಸಲಿಲ್ಲ. ಪರಂಪರೆಯಿಂದ ಬಂದ ಸ್ಥಳೀಯ ಕೈಗಾರಿಕೆಗಳೇ ನಾದರು ಬದುಕಿ ಉಳಿದಿದ್ದರೆ ಅದಕ್ಕೆ ಕಾರಣ ಫ್ರಾನ್ಸಿನಿಂದ ಆಮದಾದ ವಸ್ತುಗಳನ್ನು ಹೆಚ್ಚಿನ ಬೆಲೆಕೊಟ್ಟು ಕೊಳ್ಳಲು ಹೆಚ್ಚಿನ ವಿಯಟ್ನಾಮಿಯರು ಅಸಮರ್ಥರಾಗಿದ್ದುದೆ ಆಗಿತ್ತು.

ವಿಯಟ್ನಾಮಿಯರು ಕಷ್ಟಪಟ್ಟು ದುಡಿಯುವ ರೈತರ, ಬೆಸ್ತರ ಮತ್ತು ಕುಶಲ ಕರ್ಮಿಗಳಿಗೆ ಸೇರಿದ್ದರು. ವಿಯಟ್ನಾಂನ ಅನೇಕ ಕಡೆ (ಹೆಚ್ಚಾಗಿ ಟಾಂಗ್‌ಕಿಂಗ್ ಮತ್ತು ಅನ್ನಾಂಗಳಲ್ಲಿ) ಜನ ಸಂಖ್ಯೆಯ ಒತ್ತಡದಿಂದ ಆರ್ಥಿಕ ಪರಿಸ್ಥಿತಿ ಕಠಿಣವಾಗಿತ್ತು. ಈ ಪ್ರದೇಶಗಳಲ್ಲಿ ಇದರ ಪರಿಣಾಮವಾಗಿ ಸಾಮಾನ್ಯ ಭೂ-ಹಿಡುವಳಿಯ ಗಾತ್ರ ಸಣ್ಣದಾಗಿತ್ತು. ಟಾಂಗ್-ಕಿಂಗ್‌ನಲ್ಲಿ ವ್ಯವಸಾಯ ಯೋಗ್ಯವಾದ ಒಟ್ಟು ಭೂಮಿಯ ಶೇ ೪೦ ರಷ್ಟು ಭಾಗವನ್ನು ಮಾತ್ರ ರೈತರು ಸಣ್ಣ ಸಣ್ಣ ಹಿಡುವಳಿಗಳಾಗಿ ವಿಭಾಗಿಸಿಕೊಂಡು ಉಳುತ್ತಿದ್ದರು. ಶೇ ೬ ರಷ್ಟು ಜನ ರೈತರು ಒಂದು ಎಕರೆಗಿಂತ ಕಮ್ಮಿಯಷ್ಟು ಭೂಮಿಯನ್ನು ಹೊಂದಿದ್ದರು. ಶೇ ೬೩ರಷ್ಟು ತೆರಿಗೆದಾರರು ೧/೨ ಏಕರೆಗಿಂತ ಕಮ್ಮಿ ಭೂಮಿಯನ್ನು ಹೊಂದಿದ್ದೋ ಅಥವಾ ಭೂಹೀನರಾಗಿಯೋ ಇದ್ದರು. ಇದಕ್ಕೆ ವಿರುದ್ಧವಾಗಿ ಕೊಚಿನ್-ಚೀನಾದಲ್ಲಿ ಹಿಡುವಳಿಗಳ ಗಾತ್ರ ದೊಡ್ಡದಾಗಿದ್ದು, ಒಟ್ಟು ಉಳಲು ಯೋಗ್ಯವಾದ ಭೂಮಿಯಲ್ಲಿ ಶೇ ೪೫ರಷ್ಟು ಸಣ್ಣ ಹಿಡುವಳಿಗಳಾಗಿದ್ದವು.

ವಿಯಟ್ನಾಂನಲ್ಲಿ ಫ್ರೆಂಚರು ದೊಡ್ಡ ದೊಡ್ಡ ಪ್ಲಾಂಟೇಷನ್‌ಗಳ ಬೆಳವಣಿಗೆಗೆ ಉತ್ತೇಜನ ಕೊಟ್ಟರು. ಇದರಿಂದ ಸಣ್ಣ ಸಣ್ಣ ರೈತರಿಗೆ ತೊಂದರೆಯಾಯಿತು. ಸಣ್ಣ ಹಿಡುವಳಿದಾರರು ತಮ್ಮ ಭೂಮಿಯನ್ನು ಜಮೀನುದಾರರಿಗೋ ಅಥವಾ ಶ್ರೀಮಂತರಾದ ವಿಯಟ್ನಾಮಿ ಜಮೀನುದಾರರಿಗೋ ಆರ್ಥಿಕ ಕಾರಣಗಳಿಗೆ ಅಡವು ಹಾಕಿ ಭೂಮಿಯನ್ನು ಕಳೆದುಕೊಂಡರು. ಅನಂತರ ಗೇಣಿದಾರರಾಗಿ ಜೀವಿಸುತ್ತಿದ್ದ ಈ ಬಡ ವಿಯಟ್ನಾಮಿಯರ ವರ್ಗ ಜಮೀನುದಾರರಿಗೆ ಬೆಳೆದ ಬೆಳೆಯ ಶೇ ೪೦ ರಷ್ಟನ್ನು ಕೊಡಬೇಕಾಗಿತ್ತು. ಜಮೀನ್ದಾರರು ರೈತರಿಗೆ ಸಾಲ ಕೊಟ್ಟಾಗ ಶೇ ೫೦ರಷ್ಟು ವಾರ್ಷಿಕ

ಬಡ್ಡಿಯನ್ನು ವಸೂಲಿ ಮಾಡುತ್ತಿದ್ದುದೂ ಉಂಟು. ಕಡೆಕಡೆಗೆ, ಜಮೀನ್ದಾರರಿಗೆ ಭೂಮಿಯಿಂದ ಬರುವ ಲಾಭಕ್ಕಿಂತ ಬಡ್ಡಿಯ ಆಸೆಯೇ ಹೆಚ್ಚಾಗಿ, ವ್ಯವಸಾಯ ಹೀನಸ್ಥಿತಿಗೆ ಬರುವಂತಾಯಿತು. ವ್ಯಾಪಾರ, ವ್ಯವಹಾರಗಳಲ್ಲೂ, ಪರದೇಶೀಯರಾದ, ಆದರೆ ವಿಯಟ್ನಾಂನಲ್ಲಿ ತಳ ಊರಿದ್ದ, ಚೀನಿಯರು ದಳ್ಳಾಳಿ ಕೆಲಸ ನಿರ್ವಹಿಸಿ, ವಿಯಟ್ನಾಮಿಯರಿಗೆ ನಷ್ಟವನ್ನುಂಟು ಮಾಡುತ್ತಿದ್ದರು.

ಫ್ರೆಂಚರು ರಬ್ಬರ್ ತೋಟಗಳನ್ನು ಮಾಡಿ ಹೆಚ್ಚಿನ ಲಾಭವನ್ನು ಗಳಿಸುತ್ತಿದ್ದರು. ಈ ಲಾಭಗಳಿಕೆಯಲ್ಲಿ ವಿಯಟ್ನಾಮಿಯರಿಗೆ ಪಾಲಿರಲಿಲ್ಲ. ಎರಡು ರೀತಿಗಳಲ್ಲಿ ಬೇಕಾದ ಬಂಡವಾಳವನ್ನು ಫ್ರೆಂಚರು ಸಂಗ್ರಹಿಸುತ್ತಿದ್ದರು. ಒಂದು ತೆರಿಗೆಗಳ ಮೂಲಕ ವಿಯಟ್ನಾಂನಲ್ಲಿ ಸಂಗ್ರಹಿಸಿದ ಹಣ; ಎರಡನೆಯದು, ಫ್ರಾನ್ಸ್ ದೇಶದಲ್ಲಿ ಎತ್ತಿದ ಸಾಲದ ಹಣ: ಫ್ರೆಂಚರಲ್ಲದ ಯುರೋಪಿಯನ್ನರಿಗೆ ವಿಯಟ್ನಾಂನಲ್ಲಿ ಬಂಡವಾಳ ಹೂಡುವುದಕ್ಕೆ, ಅಥವಾ ವಾಣಿಜ್ಯ ವ್ಯವಹಾರ ನಡೆಯುವುದಕ್ಕೆ ಅವಕಾಶಕೊಡದಷ್ಟು ಫ್ರೆಂಚರು ಸ್ವಾರ್ಥಿಗಳಾಗಿದ್ದರು. ೧೯೩೮ ರಲ್ಲಿ ಯುರೋಪಿಯನ್ನರು ಹೂಡಿದ ಒಟ್ಟು ಬಂಡವಾಳದಲ್ಲಿ ಶೇ ೯೬ ರಷ್ಟು ಫ್ರೆಂಚರದಾಗಿತ್ತು. ಸರ್ಕಾರದ ಸಾಲಪತ್ರಗಳಲ್ಲೆ ಎಲ್ಲಾ ಬಂಡಾವಾಳವನ್ನು ಹೂಡಲಾಗಿತ್ತು. ಹೂಡಿದ ಒಟ್ಟು ೩೮೨ ಮಿಲಿಯನ್ ಅಮೇರಿಕನ್ ಡಾಲರ್‌ಗಳಲ್ಲಿ (ಒಂದು ಡಾಲರ್ ಅಂದರೆ ಇವತ್ತಿನ ೭ ೧/೨ ರೂಪಾಯಿಗೆ ಸಮ), ಚೀನಿಯರು ೪೦ ಮಿಲಿಯನ್ (ಒಂದು ಮಿಲಿಯನ್ ಅಂದರೆ ೧೦ಲಕ್ಷ) ಡಾಲರ್‌ಗಳನ್ನು ತೊಡಗಿಸಿದ್ದರು.

ಫ್ರೆಂಚರು, ವಿಯಟ್ನಾಂನಲ್ಲಿ ಗಣಿ, ಕಲ್ಲಿದ್ದಲು, ರಬ್ಬರ್, ಟಿಂಬರ್, ಮದ್ಯ (ಅಕ್ಕಿಯಿಂದ ತಯಾರಿಸಿದ) ಎಲೆಕ್ಟ್ರಿಕ್ ಕೆಲಸಗಳು ಹೊಗೆಸೊಪ್ಪು, ಬೆಂಕಿಕಡ್ಡಿ–ಕೈಗಾರಿಕೆಗಳಲ್ಲಿ ಬಂಡವಾಳ

ವನ್ನು ತೊಡಗಿಸಿ ಹೆಚ್ಚಿನ ಲಾಭವನ್ನು ಸಂಪಾದಿಸುತ್ತಿದ್ದರು. ವಿಯಟ್ನಾಂನಲ್ಲಿ ತಯಾರಾದ ಹೆಚ್ಚಿನ ವಸ್ತುಗಳು ಫ್ರಾನ್ಸಿಗೆ ರಫ್ತಾಗುತ್ತಿತ್ತು. ಫ್ರೆಂಚರ ಬಟ್ಟೆ ಕೈಗಾರಿಕೆ, ಫ್ರೆಂಚರ ವಸಾಹತು ನೀತಿಯ ಮೇಲೆ ಬಹಳ ಪ್ರಭಾವ ಬೀರಿತು. ಫ್ರೆಂಚರು ತಯಾರಿಸಿದ ಬಟ್ಟೆಗಳಿಗೆ ವಿಯಟ್ನಾಂನಲ್ಲಿ ಒಳ್ಳೆಯ ಸ್ಥಾನವಿತ್ತು. ಫ್ರೆಂಚರ ಲೋಹಗಳ ತಯಾರಿಕೆಗೆ ವಿಯಟ್ನಾಂನಲ್ಲಿ ಒಳ್ಳೆಯ ಮಾರುಕಟ್ಟೆಯಿತ್ತು. ಬಟ್ಟೆ ಮತ್ತು ಲೋಹವಸ್ತುಗಳೇ ಫ್ರಾನ್ಸಿನಿಂದ ಆಮದಾಗುತ್ತಿದ್ದ ವಸ್ತುಗಳ ಪೈಕಿ ೨/೩ ರಷ್ಟಾಗುತ್ತಿತ್ತು.

ಈ ಆಕರ್ಷಣೀಯ ಪರಿಣಾಮವಾಗಿ, ಫ್ರೆಂಚರು ತಯಾರಿಸಿದ ಸಿದ್ಧವಸ್ತುಗಳ ಮುಂದೆ ಪೈಪೋಟಿಗೆ ನಿಲ್ಲಲಾರದೆ, ಸ್ಥಳೀಯ ವಿಯಟ್ನಾಂವಿಯರ ಗೃಹ ಕೈಗಾರಿಕೆಗಳು ಹೀನಸ್ಥಿತಿಗೆ ಬಂದವು. ಅವುಗಳೆಲ್ಲಾ ಸಂಪೂರ್ಣವಾಗಿ ನಾಶವಾಗದೆ ಉಳಿಯಲು ಕಾರಣವೇನೆಂದರೆ. ಹೆಚ್ಚಿನ ವಿಯೆಟ್ನಾಮಿಯರು ಫ್ರಾನ್ಸಿನಿಂದ ತಯಾರಾಗಿ ಬಂದ ವಸ್ತುಗಳನ್ನು ಕೊಳ್ಳಲು ಅಶಕ್ತರಾಗಿದ್ದರು. ಹತ್ತಿ ಮತ್ತು ರೇಷ್ಮೆ ಬಟ್ಟೆಗಳನ್ನು ಗೃಹಗಳಲ್ಲೇ ಮಗ್ಗಗಳಿಂದ ತಯಾರಿಸುವ ಕ್ರಮವನ್ನು ವಿಯಟ್ನಾಮಿಯರು ಮುಂದುವರಿಸಿಕೊಂಡು ಹೋದರು. ಮರಗೆಲಸ, ಕಲ್ಲಿನ ಕೆಲಸ, ಕುಂಭಾರ ಕೆಲಸ ಮತ್ತು ಬೆತ್ತದ ಕೆಲಸ ಇವೆಲ್ಲಾ ಮುಂದುವರಿದುಕೊಂಡು ಹೋಯಿತು. ವಿಯಟ್ನಾಮಿಯರ ಜೀವನ ಮಟ್ಟವನ್ನು ಹೆಚ್ಚಿಸಿ, ಆ ಮೂಲಕ ಅವರು ಫ್ರೆಂಚರು ತಯಾರಿಸಿದ ವಸ್ತುಗಳನ್ನು ಕೊಳ್ಳುವಂತೆ ಮಾಡುವುದೇ ತಮ್ಮ ಆರ್ಥಿಕ ನೀತಿಯ ಮೂಲೋದ್ದೇಶವೆಂದು ಘೋಷಿಸಿದರು, ಅದು ಪರಿಣಾಮದಲ್ಲಿ ಮಾತ್ರ ಕಾಣಲಿಲ್ಲ.

ಫ್ರೆಂಚರ ಆಡಳಿತದಿಂದ ಹಲಕೆಲವು ಸತ್ಪರಿಣಾಮಗಳೂ ಆದವು. ವಿಯಟ್ನಾಂನಲ್ಲಿ ಅನೇಕ ಅಣೆಕಟ್ಟು, ರಸ್ತೆ, ಸಾರಿಗೆ ಸಂಪರ್ಕ

ಗಳನ್ನು ಫ್ರೆಂಚರು ರಚಿಸಿದರು. ಆರೋಗ್ಯ ವಿದ್ಯಾಭ್ಯಾಸಕ್ಕೆ ಗಮನ ನೀಡಿದರು. ಇದರ ಜೊತೆಗೆ ಆಧುನಿಕ ನಾಗರಿಕ ಸೌಲಭ್ಯಗಳಾದ ರೇಡಿಯೋ, ಚಲನಚಿತ್ರ, ಬಸ್, ಕಾರು, ಲಾರಿ ಮೊದಲಾದವು ವಿಯಟ್ನಾಂ ಜನತೆಗೆ ಅವರು ನೀಡಿದ ಕೆಲವು ಆಧುನಿಕ ಸಲಕರಣೆಗಳು ಆಡಳಿತಕ್ಕೆ ಅನುಕೂಲವಾಗುವಂತೆ ಅವರು ಪ್ರಾಂತ್ಯಗಳ, ಜಿಲ್ಲೆಗಳ ಪುನರ್ವಿಂಗಡನೆ ಮಾಡಿದರು. ವಿಯಟ್ನಾಂನ ಪ್ರಾಚೀನ ಕಾನೂನ ಗಳಲ್ಲಿದ್ದ ಅನೇಕ ಕ್ರೂರವಾದ ಶಿಕ್ಷೆಗಳನ್ನು ತೆಗೆದುಹಾಕಿ, ಮಾನ ವೀಯತೆಯನ್ನು ಕಾನೂನಿನಲ್ಲಿ ಜಾರಿಗೆ ತಂದರು. ಪಾಠಶಾಲೆಗಳು, ಕಾಲೇಜು, ವಿಶ್ವವಿದ್ಯಾನಿಲಯ, ಬೌದ್ಧ ಧರ್ಮ ಅಭ್ಯಾಸ ಕೇಂದ್ರ ಗಳು, ಆಡಳಿತ ತರಬೇತಿ ಶಾಲೆ ಮೊದಲಾದುವುಗಳನ್ನು ಅವರು ಸ್ಥಾಪಿಸಿದರು. ಆದರೆ ಎಲ್ಲಕ್ಕೂ ಮಿಗಿಲಾದ ಹಾಗೂ ಶಾಶ್ವತ ವಾದ ಉಪಕಾರದ ಕೆಲಸವಾದುದು ಫ್ರೆಂಚ್ ಆಡಳಿತಗಾರರಿಂದಲ್ಲ ಫ್ರೆಂಚ್ ವಿದ್ವಾಂಸರುಗಳಿಂದ. ಫ್ರೆಂಚ್ ವಿದ್ವಾಂಸರು, ಪ್ರಾಚೀನ ವಸ್ತು ಶೋಧಕರು, ವಿಪರೀತ ಶ್ರಮ ವಹಿಸಿ, ಕಷ್ಟಪಟ್ಟು ವಿಯ ಟ್ನಾಂನ ಗತಕಾಲದ ಇತಿಹಾಸ ಹೆಣೆದು, ವಿಯಟ್ನಾಂ ರಾಜ್ಯದ ಹಿಂದಿನ ಕೀರ್ತಿ ಪ್ರತಿಷ್ಠೆಗಳನ್ನು ಬೆಳಕಿಗೆ ತಂದರು.

ವಿಯಟ್ನಾಂಗೆ ಫ್ರೆಂಚರು ಬಂದು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದರಿಂದ, ಅಲ್ಲಿನ ರಾಜಕೀಯ ಸ್ಥಿತಿಯಲ್ಲಿ ಅಲ್ಲೋಲ ಕಲ್ಲೋಲ ಉಂಟಾಯಿತು. ಫ್ರೆಂಚರ ಆಡಳಿತ ಅನ್ನಾಂ ಮತ್ತು ಟಾಂಗ್-ಕಿಂಗ್‌ಗಳಲ್ಲಿ ಪರೋಕ್ಷವಾಗಿದ್ದು, ನುಯೇನ್ ವಂಶದ ರಾಜರು ತಮ್ಮ ನಿಜವಾದ ರಾಜತ್ವವನ್ನು, ಆಳುವ ಅಧಿಕಾರವನ್ನು ಕಳೆದುಕೊಂಡರು. ಇದರಿಂದ ಈ ರಾಜವಂಶ ಹಾಗೂ ಶ್ರೀಮಂತ ಆಶ್ರಿತ ವರ್ಗಗಳೂ ವಿಯಟ್ನಾಂ ರಾಜಕೀಯ ವ್ಯವಸ್ಥೆಯ ಅಲಂಕಾರಪ್ರಿಯ ಪ್ರತಿನಿಧಿಗಳಾಗಿ ಉಳಿದುಕೊಂಡವು.

ಬದಲಾದ ರಾಜಕೀಯ ಸ್ಥಿತಿಯಿಂದ ದುಷ್ಪರಿಣಾಮಗಳೇ ಆದವೆಂದು ಹೇಳಲು ಬರುವುದಿಲ್ಲ. ಫ್ರೆಂಚರು ವಿಯಟ್ನಾಂನ ಹಿಂದಿನ ರಾಜ್ಯಾಂಗ ವ್ಯವಸ್ಥೆಯಲ್ಲಿದ್ದ ಅನೇಕ ಅಪಾಯಕಾರಿ ಅಂಶಗಳನ್ನು ತೆಗೆದು ಹಾಕಿದರು. ಹಿಂದೆ ವಿಯಟ್ನಾಂನಲ್ಲಿ ಆಳಿದ ರಾಜಮನೆತನಗಳು ದಬ್ಬಾಳಿಕೆಗಳಿಗೆ ಹೆಸರಾಗಿದ್ದು, ತಮ್ಮ ತಮ್ಮಲ್ಲೇ ಅಧಿಕಾರಕ್ಕಾಗಿ ಯಾದವೀಕಲಹ ನಡೆಸುತ್ತಿದ್ದವು. ಫ್ರೆಂಚರು ಇಂತಹ ಅಂಶಗಳನ್ನು ತೊಡೆದುಹಾಕಿ ವಿಯಟ್ನಾಂನಲ್ಲಿ ಹೊಸ ರಾಜಕೀಯ ರಚನೆಯ ವ್ಯವಸ್ಥೆಗೆ ಅಸ್ತಿಭಾರ ಹಾಕಿದರು. ಇದರಿಂದ ಮುಂದೆ ಆಧುನಿಕ ಹಾಗೂ ರಾಷ್ಟ್ರೀಯ ಬೆಳವಣಿಗೆಯಾಯಿತು. ಆರ್ಥಿಕ ಕ್ಷೇತ್ರದಲ್ಲಿ ಶೋಷಣೆಯನ್ನು ಅನುಸರಿಸಿದರೂ ಸಹ ಸುವ್ಯವಸ್ಥೆ, ಆಧುನಿಕ ರೀತಿಯ ಆಡಳಿತದ ಸ್ಥಾಪನೆ, ಲಂಚಗುಳಿತನ ದಬ್ಬಾಳಿಕೆಗಳ ನಿರ್ಮೂಲ. ಆಧುನಿಕ ಸಂಪರ್ಕ ಸಾರಿಗೆಗಳ ಸೃಷ್ಟಿ, ಆರೋಗ್ಯ, ರಕ್ಷಣ ವ್ಯವಸ್ಥೆ ಮತ್ತು ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸ ಕ್ರಮ (ಫ್ರೆಂಚ್ ಕ್ರೈಸ್ತ ಮಿಷನರಿಗಳಿಂದಲೋ, ವಸಾಹತು ಸರ್ಕಾರದಿಂದಲೋ ಸ್ಥಾಪಿಸಲ್ಪಟ್ಟ ವಿದ್ಯಾಸಂಸ್ಥೆಗಳು) ಇವುಗಳು ಫ್ರೆಂಚರ ವಸಾಹತು ನೀತಿಯ, ಆಡಳಿತದ ಒಳ್ಳೆಯ ಪರಿಣಾಮ ಗಳೆನ್ನಬಹುದು. ಫ್ರೆಂಚರ ವಸಾಹತು ನೀತಿಯ ಕಾರಣವಾಗಿ ವಿಯಟ್ನಾಮಿಯರಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯದ ಎಚ್ಚರಿಕೆ ಮೂಡಿತು. ಮೊದಲನೆ ಮಹಾಯುದ್ಧದಲ್ಲಿ ಫ್ರೆಂಚರ ಸಲುವಾಗಿ ಯುದ್ಧಕ್ಕೆ ತೆರಳಿದ ೧,೦೦,೦೦೦ ವಿಯಟ್ನಾಮಿಯರು ತಮ್ಮ ತಾಯ್ನಾಡಿಗೆ ಹಿಂತಿರುಗಿದಾಗ ಅವರ ದೃಷ್ಟಿವೈಶಾಲ್ಯ ವಿಕಸಿತವಾಗಿತ್ತು. ಅವರಲ್ಲಿ ಸ್ವಾತಂತ್ರ್ಯದಾಹ ಹೆಚ್ಚಿತು. ಇವೆಲ್ಲಾ ರಾಷ್ಟ್ರಪ್ರಜ್ಞೆಯ ಉಗಮಕ್ಕೆ ನಾಂದಿಯಾಯಿತು.

ವಿಯಟ್ನಾಂನಲ್ಲಿ ರಾಷ್ಟ್ರೀಯ ಪ್ರಜ್ಞೆ ಹಾಗೂ ಸ್ವಾತಂತ್ರ್ಯ ಸಂಗ್ರಾಮ

ಆಗ್ನೇಯ ಏಷ್ಯದ ಇಂಡೋ–ಚೀನಾದ ಪರ್ಯಾಯ ದ್ವೀಪದಲ್ಲಿ ಫ್ರೆಂಚರ ಆಡಳಿತಕ್ಕೆ ಒಳಪಟ್ಟಂತೆ ಕ್ಯಾಂಬೋಡಿಯ, ಲ್ಯಾವೋಸ್ ಮತ್ತು ವಿಯಟ್ನಾಂಗಳಿದ್ದವು. ಆದರೆ ರಾಷ್ಟ್ರೀಯಪ್ರಜ್ಞೆ ಮೊದಲು ಉಗಮವಾಗಿ; ಆಳವಾಗಿ ಬೇರೂರಿ ಉಗ್ರರೀತಿಯ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರದರ್ಶಿತವಾದದ್ದು ವಿಯಟ್ನಾಂನಲ್ಲಿ ಮಾತ್ರ. ವಿಯಟ್ನಾಮಿಯರು ಫ್ರೆಂಚರ ವಸಾಹತು ನೀತಿಯ ವಿರುದ್ಧ ಹೋರಾಡಿದರು. ಇಂಡೋಚೀನಾದ ಎಲ್ಲಾ ಜನಾಂಗದವರಿಗಿಂತ ವಿಯಟ್ನಾಮಿಯರು ಸಂಖ್ಯೆಯಲ್ಲಿ ಹೆಚ್ಚಾಗಿದ್ದರು. ೧೯೬೫ರ ಅಂಕೆ ಸಂಖ್ಯೆಗಳ ಪ್ರಕಾರ ವಿಯಟ್ನಾಮಿಯರ ಜನಸಂಖ್ಯೆ ೩೫ ಮಿಲಿಯನ್‌ಗಳಷ್ಟಿದ್ದು, ಅದು ಇಂಡೋಚೀನಾದ ಒಟ್ಟು ಜನಸಂಖ್ಯೆಯ ಶೇಕಡ ೭೫ ಭಾಗವಾಗಿತ್ತು.

ರಾಷ್ಟ್ರೀಯ ಪ್ರಜ್ಞೆ ವಿಯಟ್ನಾಮಿಯರಿಗೆ ಪರಂಪರೆಯಿಂದ ಬಂದಿದ್ದ ಒಂದು ಗುಣವೆಂದು ಕಾಣುತ್ತದೆ. ಅವರ ಇತಿಹಾಸವನ್ನು ನೋಡಿದಾಗ, ಅವರು ಚೀನಾದ ಅಧೀನದಲ್ಲಿದ್ದ ಸುಮಾರು ಒಂದು ಸಾವಿರ ವರ್ಷಗಳಲ್ಲಿ ಅನೇಕ ವೇಳೆ ಅವರ ದಬ್ಬಾಳಿಕೆಯ ವಿರುದ್ಧ ಸ್ವಾತಂತ್ರ ಪಡೆಯಲು ಹೋರಾಡಿದ ವಿಷಯ ತಿಳಿಯುತ್ತದೆ. ವಿಯಟ್ನಾಮಿಯರ ಸಂಸ್ಕೃತಿ ಹೆಚ್ಚಿನ ಮಟ್ಟಿಗೆ ಚೀನಾದ ಸಂಸ್ಕೃತಿಯನ್ನೇ ಹೋಲುತ್ತಿದ್ದರೂ ಸಹ, ಕ್ರಿ.ಶ. ೯೩೯ರಲ್ಲಿ ಅವರು ಚೀನಾದೇಶದ ದಾಸ್ಯದಿಂದ ಮುಕ್ತಿ ಪಡೆದಮೇಲೆ ಅವರ ಸಂಸ್ಕೃತಿಗೆ ಒಂದು ವಿಶಿಷ್ಟತೆ ಕಾಣಬಂತು. ದಕ್ಷಿಣ ವಿಯಟ್ನಾಂನಲ್ಲಿ ಛಾಂ

ರನ್ನು, ಕ್ಯಾಂಬೋಡಿಯನ್ನರನ್ನು ಓಡಿಸಿ, ಅಲ್ಲೆಲ್ಲಾ ಹರಡಿಕೊಂಡ ಮೇಲೆ ಈ ಎಲ್ಲಾ ಸಂಸ್ಕೃತಿಗಳಿಂದಲೂ ಅವರು ಪ್ರಭಾವಿತರಾದರು.

ವಿಯಟ್ನಾಂನ ಕೊಚ್ಚಿನ್-ಚೀನಾ ಮತ್ತು ಟಾಂಗ್-ಕಿಂಗ್‌ಗಳನ್ನು ಸೈನ್ಯಬಲದ ಸಹಾಯದಿಂದ ಗೆದ್ದು ಫ್ರೆಂಚರು ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಈ ರೀತಿ ತಮ್ಮ ಅಧಿಕಾರವನ್ನು ಸ್ಥಾಪಿಸುವ ಮುನ್ನ ಅವರು ನ್ಗುಯೆನ್ ಮನೆತನದ ಆಳ್ವಿಕೆಯ ವಿರುದ್ಧ ಅನೇಕ ಯುದ್ಧಗಳನ್ನು ಮಾಡಬೇಕಾಯಿತು. ವಿಯಟ್ನಾಮಿಯರು ಫ್ರೆಂಚರಿಗೆ ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳಲಿಲ್ಲ. ಆದರೆ ಕೊನೆಯಲ್ಲಿ ಅವರು ಫ್ರೆಂಚರ ಪ್ರಾಬಲ್ಯಕ್ಕೆ ಮಣಿಯಬೇಕಾಗಿ ಬಂದಾಗ ಈ ಪರಕೀಯರನ್ನು ತಾಯ್ನಾಡಿನಿಂದ ಓಡಿಸುವ ಆಸೆಯನ್ನು ಬಿಟ್ಟು ಕೊಡಲಿಲ್ಲ. ತಮ್ಮ ಆಡಳಿತಕ್ಕೆ ವಿರುದ್ಧವಾಗಿ ವಿಯಟ್ನಾಮಿಯರು ನಡೆಸಿದ ಸಣ್ಣ ಪುಟ್ಟ ದಂಗೆಗಳನ್ನು ಫ್ರೆಂಚರು ಅಡಗಿಸಲು ಅಸಮರ್ಥರಾದರು. ಆಗಾಗ್ಯೆ ಫ್ರೆಂಚರ ಅಧಿಕಾರವನ್ನು ಉರುಳಿಸಲು ಚಿತಾವಣೆಗಳು, ಕ್ಷಿಪ್ರಕ್ರಾಂತಿಗಳು ನಡೆದವು. ಆದರೆ ಅಂತಹ ಪ್ರತಿಭಟನೆಗಳನ್ನು ಫ್ರೆಂಚರು ಸೈನ್ಯಬಲದಿಂದ ಹತ್ತಿಕ್ಕಿದ್ದರು. ವಿಯಟ್ನಾಂನಲ್ಲಿ ಉದಾರ ತತ್ವಗಳ ಆಧಾರದ ಮೇಲೆ ಆಡಳಿತವನ್ನು ನಡೆಸಿ, ವಿಯಟ್ನಾಮಿಯರ ಹೃದಯವನ್ನು ಗೆಲ್ಲಬೇಕೆಂದು ಹಲವಾರು ಫ್ರೆಂಚ್ ಅಧಿಕಾರಿಗಳು ಪ್ರಯತ್ನ ನಡೆಸಿದರು. ಉದಾಹರಣೆಗೆ ಫ್ರೆಂಚ್ ಗೌರ್ನರ್ ಜನರಲ್‌ಗಳಾದ ಪಾಲ್ ಬೋ (Paul Beau: 1902–1907) ಮತ್ತು ಆಲ್ಬರ್ಟ್ ಸಾರೋಟ್ (Albert Sauroat : 1911–14, 1917_19)ರು ಇಂತಹ ಉದಾರವಾದಿ ಅಧಿಕಾರಿಗಳಾಗಿದ್ದರು. ಆದರೆ ಉಗ್ರ ರೀತಿಯ ವಸಾಹತು ನೀತಿಗೆ ಹೆಚ್ಚಿನ ಬೆಂಬಲ ಫ್ರೆಂಚ್ ಸರ್ಕಾರದಿಂದ ದೊರೆಕಿತು.

೧೯೦೫ರಲ್ಲಿ ಏಷ್ಯಾದ ರಾಷ್ಟ್ರವಾದ ಜಪಾನ್, ಯುರೋಪಿಯನ್ ರಾಷ್ಟ್ರವಾದ ರಷ್ಯಾವನ್ನು ಯುದ್ಧದಲ್ಲಿ ಸೋಲಿಸಿದ್ದುದು ಏಷ್ಯಾದ ಇತಿಹಾಸದಲ್ಲೇ ಮಹತ್ವಪೂರ್ಣ ಘಟನೆ. - ಈ ಯುದ್ಧದಲ್ಲಿ ಜಪಾನ್ ದೇಶವು ಗಳಿಸಿದ ವಿಜಯ ವಿಜಯ ಏಷ್ಯನ್ನರು ಗಳಿಸಿದ ವಿಜಯ ಎಂಬುದಾಗಿ ಏಷ್ಯಾದ ಜನಾಂಗದವರೆಲ್ಲಾ ಭಾವಿಸಿ ದರು. ಅದಲ್ಲದೂ ಪಾಶ್ಚಾತ್ಯ ಸಾಮ್ರಾಜ್ಯ ಆಡಳಿತದಲ್ಲಿ ಸಿಕ್ಕಿ ನರಳುತ್ತಿದ್ದ ಏಷ್ಯಾದ ಜನಾಂಗವನ್ನು ಗೆಲ್ಲಲು ಅಸಾಧ್ಯವೆಂದು ಒಳಗಿಂದೊಳಗೆ ಕುಗ್ಗಿ ನರಳುತ್ತಿದ್ದ ಏಷ್ಯಾದ ಜನಾಂಗಗಳಿಗೆ ಇದೊಂದು ಆಸೆಯನ್ನೇ ಕೆರಳಿಸುವ ಘಟನೆಯಾಯಿತು. ಪಶ್ಚಿಮದ ಬಿಳಿಯರನ್ನು ಗೆಲ್ಲಲು ಅಸಾಧ್ಯವೆಂದು ಒಳಗಿಂದೊಳಗೆ ಕುಗ್ಗಿ ನರಳು ತ್ತಿದ್ದ ಏಷ್ಯನರಿಗೆ ಜಪಾನ್ ಗಳಿಸಿದ ವಿಜಯ ಸ್ಫೂರ್ತಿಯ ನೆಲೆ ಯಾಯಿತು. ಪುಟ್ಟ-ದ್ವೀಪ-ಸಮೂಹ ರಾಷ್ಟ್ರವೊಂದು ಇಂತಹ ಶೌರ್ಯ ಪ್ರದರ್ಶನ ನೀಡಬೇಕಾದರೆ; ಎಲ್ಲಾ ರೀತಿಗಳಿಂದಲೂ ಸಮೃದ್ಧ ವಾದ ಉಳಿದ ಜನಾಂಗದವರೇಕೆ ಪರಕೀಯರ ವಿರುದ್ಧ ಅಂತಹ ರಚನಾತ್ಮಕ ಹೋರಾಟ ನಡೆಸಿ ಸ್ವಾತಂತ್ರ್ಯಗಳಿಸಿಕೊಳ್ಳಬಾರದು ಎಂಬ ಪ್ರಜ್ಞೆ ಏಷ್ಯಾದಲ್ಲೆಲ್ಲಾ ಮೂಡಿತು. ವಿಯಟ್ನಾಮಿಯರು ಇಂತಹ ಭಾವನೆಗೆ ಹೊರತಾಗಿರಲಿಲ್ಲ.

ಜಪಾನು ಗಳಿಸಿದ ವಿಜಯ, ವಿಯಟ್ನಾಮಿಯರನ್ನು ಫ್ರೆಂಚರ ವಿರುದ್ಧ ಕೆಣಕುವಂತಾಯಿತು. ದೇಶದ ಉದ್ದಕ್ಕೂ ಅಶಾಂತಿ ತಲೆದೋರಿ ದಂಗೆಗಳಾದವು. ಇಂತಹ ದಂಗೆಯೊಂದರ ನಾಯಕ ಗಿಲ್ಬರ್ಟ್ ಚ್ಯೂನ್ (Gilbert Chuan). ಇವನ ಒಳಸಂಚು ೧೯೦೮ರಲ್ಲಿ ಬೆಳಕಿಗೆ ಬಂತು. ಯುರೋಪಿನಲ್ಲಿ ಫ್ರೆಂಚರು, ರಷ್ಯಾ ದೊಡನೆ ಸ್ನೇಹ ಒಪ್ಪಂದ ಮಾಡಿಕೊಂಡಾಗ (ಜರ್ಮನಿಯ ವಿರುದ್ಧ) ವಿಯಟ್ನಾಮಿನ ಯುವಕ ಅನ್ನಾಮಿಯರ ಸಂಘ ಇದಕ್ಕೆ ಪ್ರತಿಭಟನೆ

ಯನ್ನು ತೋರಿಸಿತು. ಇದೆಲ್ಲಾ ವಿಯಟ್ನಾಮಿಯರ ರಾಷ್ಟ್ರಪ್ರಜ್ಞೆಗೆ ಉದಾಹರಣೆಗಳು.

ಈ ಕಾಲದಲ್ಲಿ ವಿಯಟ್ನಾಂನಲ್ಲಿ ಬುದ್ಧಿವಂತರ ಗುಂಪೊಂದು ಬೆಳೆಯುತ್ತಿತ್ತು. ಇವರೆಲ್ಲಾ ಪಾಶ್ಚಾತ್ಯ ವಿದ್ಯಾಭ್ಯಾಸ ಮಾಡಿದವರು. ಚೀನಾದೇಶದ ಸುಧಾರಕರು (Reformers) ರಚಿಸಿದ್ದ ಗ್ರಂಥಗಳಿಂದಲೂ ಈ ಜನ ಪ್ರಭಾವಗೊಂಡರು. ಚೀನಾದೇಶದ ಕಾಂಗ್-ಯು-ವೈ (Kang-Yu-Wei) ಎಂಬ ಸುಧಾರಕನು, ಪಾಶ್ಚಿಮಾತ್ಯರ ಸಂಸ್ಕೃತಿಯನ್ನು ಅಭ್ಯಾಸಮಾಡಿ, ಅದರಲ್ಲಿ ಕಂಡುಬರುವ ಒಳ್ಳೆಯ ಅಂಶಗಳನ್ನು ತಮ್ಮ ಸಂಸ್ಕೃತಿ ಪರಂಪರೆಗೆ ಧಕ್ಕೆ ಬರದ ರೀತಿಯಲ್ಲಿ ಅಳವಡಿಸಿಕೊಂಡು ಪ್ರಗತಿ ಹೊಂದಬೇಕೆಂದು ಹೇಳುತ್ತಿದ್ದ. ಇಂತಹ ಬೋಧನೆಗಳಿಂದ ವಿಯಟ್ನಾಂನ ಬೌದ್ಧಿಕ ಜನಾಂಗ (Intelligentia)ಪ್ರಭಾವಗೊಂಡು, ಪಶ್ಚಿಮದ ಜ್ಞಾನಭಂಡಾರದ ಕಡೆ ನೋಡುವಂತಾಯಿತು. ಹದಿನೆಂಟನೆ ಶತಮಾನದ ಫ್ರೆಂಚ್ ತತ್ವಜ್ಞಾನಿಗಳಾದ ಮಾಂಟೆಸ್ಕ್ಯೂ (Montesquieu) ಮತ್ತು ರುಸೋ (Rousseau) ಇವರುಗಳ ಬರವಣಿಗೆಗಳಿಂದ ಈ ಜನ ಆಕರ್ಷಿತರಾದರು. ೧೯೦೭ರಲ್ಲಿ ಫ್ರೆಂಚರು ಹನಾಯ್ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದಾಗ ಅಲ್ಲಿಗೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು ಕಾತರಗೊಂಡರು. ಫ್ರೆಂಚರು ರಾಷ್ಟ್ರೀಯ ಚಟುವಟಿಕೆಗಳನ್ನು ಹತ್ತಿಕ್ಕಿದರು. ದೇಶಪ್ರೇಮಿಗಳನ್ನು ಹಿಡಿದು ಬಂಧನದಲ್ಲಿಡಿಸಿದರು. ಹನಾಯ್ ವಿಶ್ವವಿದ್ಯಾನಿಲಯವನ್ನು ಮುಚ್ಚಿದರು. ಇದರಿಂದ ೨೦ನೆ ಶತಮಾನದ ಸ್ವಾತಂತ್ರ ಸಂಗ್ರಾಮದ ಮೊದಲನೆಯ ಘಟ್ಟ ಮುಕ್ತಾಯವಾದಂತಾಯಿತು.

ಉದಾರ ಮನೋಭಾವದ ಫ್ರೆಂಚ್ ಗೌರ್ನರ್-ಜನರಲ್ ಆಲ್ಬರ್ಟ್ ಸರೋತ್ (Albert Saurat)ನ ಮೊದಲ ಆಳ್ವಿಕೆಯ

ಕಾಲದಲ್ಲಿ (೧೯೧೧-೧೯೧೪) ದೇಶದಲ್ಲಿ ಶಾಂತಿ ನೆಲೆಸಿತ್ತು. ಈ ಶಾಂತವಾತಾವರಣ ಮೊದಲನೆ ಮಹಾಯುದ್ಧ ಪ್ರಾರಂಭವಾಗುವ ವರೆಗೂ ಇತ್ತು. ಮೊದಲನೆ ಮಹಾಯುದ್ಧ ಕಾಲದಲ್ಲಿ ಸಾವು ನೋವುಗಳ ನಡುವೆ ಹೋರಾಡುತ್ತಿದ್ದ ಫ್ರಾನ್ಸ್, ವಿಯಟ್ನಾಮಿ ಯರಿಗೆ ರಾಜಕೀಯ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತರುವ ಆಸೆಯನ್ನು ತೋರಿಸಿತು. ಆದರೆ ಯುದ್ಧ ಮುಗಿದು, ಫ್ರಾನ್ಸ್ ಜಯಗಳಿಸಿದಾಗ ಅಂತಹ ಆಸೆಗಳನ್ನು ನೆರವೇರಿಸಲು ಯಾವ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ. ಫ್ರಾನ್ಸ್ ಯುದ್ದದಲ್ಲಿ ಗೆಲ್ಲಲು ವಿಯಟ್ನಾಂನಿಂದ ಜಲಬಲ ಧನಬಲ ಆ ದೇಶಕ್ಕೆ ಹೋಯಿತು. ೧,೦೦,೦೦೦ ವಿಯಟ್ನಾಮಿ ಯುವಕರನ್ನು ಫ್ರಾನ್ಸಿಗೆ ಯುದ್ಧದಲ್ಲಿ ನೆರವು ಪಡೆಯುವ ಸಲುವಾಗಿ ಫ್ರೆಂಚರು ಕರೆದುಕೊಂಡು ಹೋದರು. ಫ್ರೆಂಚರು ಬಲವಂತ ಪ್ರಯೋಗ ಮಾಡಿ ಇವರನ್ನು ಸೇನೆಗೆ ಸೇರಿಸಿಕೊಂಡಿತು. ಯುದ್ಧ ಮುಗಿದ ಮೇಲೆ ಇವರಲ್ಲಿ ಅನೇಕರು ತಾಯ್ನಾಡಿಗೆ ಮರಳುವಾಗ ತಲೆಯಲ್ಲಿ ಕ್ರಾಂತಿಕಾರಕ ಭಾವನೆಗಳನ್ನು ಹೊತ್ತು ತಂದರು. ಪುಲೋ-ಕಾಂಡೋರ್ (Pulo-Candore) ಎಂಬಲ್ಲಿ ಬಂಧಿಸಿಟ್ಟದ್ದ ರಾಜಕೀಯ ಕೈದಿಗಳು ಸಹಾ ಈ ಹೊಸ ಚಟುವಟಿಕೆಗಳಿಂದ ಪ್ರಭಾವಿತರಾದರು. ಇವರೆಲ್ಲಾ ಯುದ್ಧಮುಗಿದಮೇಲೆ ಥಾಯ್ ಮತ್ತು ಚೀನಿ ಕ್ರಾಂತಿಕಾರರೊಡನೆ ಸಂಪರ್ಕಗಳಿಸಿಕೊಂಡರು. ಆದುದರಿಂದ ಯುದ್ಧಮುಗಿದ ವರ್ಷಗಳಲ್ಲಿ ವಿಯಟ್ನಾಂನಲ್ಲಿ ಹೊಸ ಹೊಸ ರಾಜಕೀಯ ಪಕ್ಷಗಳು ತಲೆ ಎತ್ತಿಕೊಂಡು ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನಗಳನ್ನು ಅಣಿಮಾಡಲು ಸಿದ್ಧವಾದವು. ಬೌದ್ಧಿಕ ಗುಂಪು; ಮಿತ್ರರಾಷ್ಟ್ರಗಳು ತಾವು ಬೆಂಬಲ ಸೂಚಿಸುವುದಾಗಿ ಘೋಷಿಸಿದ ಸ್ವಯಂ ಅಧಿಕಾರದ ಹಕ್ಕು (Principles of

self-determination)ಗಳಿಂದ ಪ್ರಭಾವಿತರಾದರು. ಇದಲ್ಲದೆ ಭಾರತದಿಂದಲೂ ಕೆಲವು ವಿಯಟ್ನಾಮಿಯರಿಗೆ ಸ್ಫೂರ್ತಿ ದೊರೆಯಿತು. ಆಗ ಮಹಾತ್ಮ ಗಾಂಧಿಯವರು ಬ್ರಿಟಿಷರ ವಿರುದ್ಧ ಹೊಸ ರೀತಿಯ ಹೋರಾಟ ಪ್ರಾರಂಭಿಸಿದ್ದರಷ್ಟೇ. ಭಾರತೀಯರ ಅಹಿಂಸಾತ್ಮಕ ಸ್ವರಾಜ್ಯ ಚಳುವಳಿ ಕೆಲವು ವಿಯಟ್ನಾಮಿ ರಾಜಕೀಯ ಮುಖಂಡರಿಗೆ ಸ್ಫೂರ್ತಿ ಕೊಟ್ಟಿತು. ಮತ್ತೆ ಕೆಲವರು ಚೀನಿ ಕಮ್ಯೂನಿಸ್ಟರಂತೆ ಉಗ್ರ ಮನೋಭಾವನೆಗಳಿಸಿ ಬೆಂಬಲಕೊಟ್ಟರು.

ಮೊದಮೊದಲು ಸ್ವಾತಂತ್ರ್ಯ ಸಂಗ್ರಾಮ ಕ್ರಿಯಾತ್ಮಕ ವಿಮರ್ಶೆಯ ದೃಷ್ಟಿಯ ಮೂಲಕ ವಿಯಟ್ನಾಂನಲ್ಲಿ ಬದಲಾವಣೆಗಳನ್ನು ತರುವ ಉದ್ದೇಶಗಳನ್ನು ಹೊಂದಿತ್ತು. ಇಂತಹ ಮುಖಂಡರನ್ನು ಮಂದಿಗಾಮಿಗಳು (Moderater) ಎಂದು ಕರೆಯುತ್ತಾರೆ. ಮಂದಗಾಮಿ ಮುಖಂಡರಲ್ಲಿ ಇಬ್ಬರ ಹೆಸರು ಪ್ರಮುಖವಾಗಿ ಕೇಳಿ ಬರುತ್ತದೆ. ಅವರು ಯಾರೆಂದರೆ ಬುಯಿಯ್-ಕ್ವಾಂಗ್-ಚ್ಯೂ (Bui-Quang-Cheu)ಮತ್ತು ಫಾಂಚಿನ್ (Pham-quynh) ಬುಯಿಯ್ ಕ್ವಾಂಗ್-ಚ್ಯೂ ಎಂಬುವರು ಸಂವಿಧಾನವಾದಿಗಳ ಪಕ್ಷವೊಂದನ್ನು (Constitutionalist party) ಕಟ್ಟಿ, ಪ್ರಜಾಸತ್ತಾತ್ಮಕ ತತ್ವಗಳ ತಳಹದಿಯ ಮೇಲೆ ವಿಯಟ್ನಾಂನಲ್ಲಿ ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಫ್ರೆಂಚ್ ವಸಾಹತು ಸರ್ಕಾರದಲ್ಲಿ ಮನವಿ ಮಾಡಿಕೊಂಡರು. ಇದೇ ರೀತಿಯ ತತ್ವಗಳನ್ನು ಫಾಂಚಿನರು ಪ್ರತಿಪಾದಿಸಿದರು. ಫಾಂಚಿನರು ಮುಂದಿಟ್ಟ ಮಂದಗಾಮಿ ದೃಷ್ಟಿ ಸುಧಾರಣ ಕಾರ್ಯಕ್ರಮಗಳನ್ನು ಫ್ರೆಂಚ್ ಸರ್ಕಾರ ತಳ್ಳಿ ಹಾಕಿತು. ಫಾಂಚಿನ್ನರು ಟುಂಗ್‌ರೆಂಗೀಸ್ ಪಾರ್ಟಿ (Tongkingese party) ಯ ಮುಖಂಡರಾಗಿದ್ದರು. ಮಂದಗಾಮಿಗಳು ಮನವಿಯನ್ನು ಸಲ್ಲಿಸುವುದರ ಮೂಲಕ, ಹಾಗೂ ಸಹಕಾರ,

ಸೌಹಾರ್ದ, ಕ್ರಿಯಾತ್ಮಕ ವಿಮರ್ಶೆಗಳ ಮೂಲಕ ವಿಯಟ್ನಾಮಿಯರಿಗೆ ಅವರ ಮೂಲಭೂತ ಹಕ್ಕುಗಳನ್ನು ಗಳಿಸಿಕೊಡಲು ಹೋರಾಡಿದರು. ಆದರೆ ಇವರ ಕಾರ್ಯಕ್ರಮಗಳಾವುವು ಫಲಕೊಡಲಿಲ್ಲ. ಮುಂದೆ ಉಗ್ರಗಾಮಿಗಳ ಸ್ವಾತಂತ್ರ್ಯಸಂಗ್ರಾಮದ ಮುಖಂಡರಾಗಿ ಹಿಂಸಾತ್ಮಕ ಹೋರಾಟ ನಡೆಸುವುದು ಅನಿವಾರ್ಯವಾಯಿತು.

ಉಗ್ರಗಾಮಿಗಳು ಒಂದು ಗೂಡಿ ೧೯೨೫ರಲ್ಲಿ ಯುವ ಅನ್ನಾಂ ಕ್ರಾಂತಿಕಾರಿ ಪಕ್ಷವೊಂದನ್ನು (The Revolutionary Party of Young Annam) ಕಟ್ಟಿದರು. ಈ ಪಕ್ಷದಲ್ಲಿ ಪರಸ್ಪರ ದ್ವೇಷಾಸೂಯೆಗಳು ತಲೆದೋರಿ ಅದಕ್ಕೆ ದೊಡ್ಡ ಪೆಟ್ಟು ಬಿದ್ದಿತು. ೧೯೨೯ರಲ್ಲಿ ಕಮ್ಯೂನಿಸ್ಟ್ ಸಿದ್ಧಾಂತಗಳಲ್ಲಿ ನಂಬಿಕೆಯಿರಿಸಿದ್ದ ಸದಸ್ಯರು ಪಕ್ಷದಿಂದ ಹೊರ ಬಂದರು. ಇದರಿಂದ ಈ ಕ್ರಾಂತಿಕಾರಿ ಪಕ್ಷಕ್ಕೆ ತೊಂದರೆಯಾಯಿತು. ಪಕ್ಷದಿಂದ ಹೊರಬಂದ ಕಮ್ಯೂನಿಸ್ಟರು ಫ್ರೆಂಚ್ ಸರ್ಕಾರಕ್ಕೆ ತಮ್ಮ ಹಿಂದಿನ ಪಕ್ಷದ ಸ್ನೇಹಿತರ ಚಟುವಟಿಕೆಗಳ ಬಗ್ಗೆ ದೂರಿತ್ತರು. ಇದರಿಂದ ಸರ್ಕಾರ ಪಕ್ಷವನ್ನು ನಿಷೇಧಿಸುವಂತಾಯಿತು.

ಈ ಸಮಯದಲ್ಲಿ ಟಾಂಗ್-ಕಿಂಗ್ (TongKing) ನಲ್ಲಿ ರಾಷ್ಟ್ರೀಯ ಅನ್ನಮಿಯರ ಪಕ್ಷವೆಂಬುದು (Nationalist Annmaite Party) ಸ್ಥಾಪಿತವಾಯಿತು. ಚೀನಾದೇಶದಲ್ಲಿ ೧೯೧೧-೧೨ರಲ್ಲಿ ಕ್ರಾಂತಿ ನಡೆಸಿ ಮಂಚು ದೊರೆಗಳ ಆಡಳಿತವನ್ನು ಕೊನೆಗಾಣಿಸಿ, ಪ್ರಜಾಸತ್ತಾತ್ಮಕ ತತ್ವಗಳ ಆಧಾರದ ಮೇಲೆ ಗಣರಾಜ್ಯವನ್ನು ಸ್ಥಾಪಿಸಿದ್ದ ಹಾಗೂ ಕುಮಿಂಗ್-ಟಾಂಗ್ (Kuomingtong) ಪಕ್ಷದ ಬೆಂಬಲ ಈ ಪಕ್ಷದ ಅರ್ಧ ಭಾಗದಷ್ಟು ಸದಸ್ಯರು ವಸಾಹತು ಸರ್ಕಾರದ ಬೇರೆ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳಾಗಿದ್ದರು. ಈ ಪಕ್ಷಕ್ಕೆ ಜನಬೆಂಬಲ

ಕಡಿಮೆಯಾಗಿದ್ದಾಗ್ಯೂ, ಪರದೇಶಗಳಿಂದ ಸ್ವಾತಂತ್ರ್ಯಸಂಗ್ರಾಮಕ್ಕೆ ಬೇಕಾದ ಹಣಕಾಸಿನ, ಸಾಮಗ್ರಿಯ ನೆರವನ್ನು ದೊರಕಿಸಿ ಕೊಳ್ಳುವ ಆಸೆಯನ್ನು ಈ ಪಕ್ಷ ಹೊಂದಿತು. ಇಲ್ಲಿ ಚೀನಾದೇಶದ ಕುಮಿಂಗ್-ಟಾಂಗ್ ಪಕ್ಷವು ಅಧಿಕಾರಕ್ಕೆ ಬರಲು ರಷ್ಯನರು ನೀಡಿದ ನೆರವನ್ನು ಜ್ಞಾಪಿಸಕೊಳ್ಳಬಹುದು. ಅದೇ ರೀತಿಯಲ್ಲಿ ಪರಕೀಯರ ಸಹಾಯ ನಿರೀಕ್ಷಣೆ ಈ ಪಕ್ಷದ ಆಸೆಮೂಡಿತ್ತು. ಇದಲ್ಲದೆ ವಸಾಹತು ಸೈನ್ಯದಲ್ಲಿದ್ದ ವಿಯಟ್ನಾಮಿ ಯೋಧರ ನೆರವನ್ನು ಪಡೆ ಯಲು ಪ್ರಯತ್ನ ನಡೆಸಿತು. ಹೀಗೆ ರಾಷ್ಟ್ರೀಯ ಅನ್ನಮಿಯರ ಪಕ್ಷ ಉಗ್ರರೀತಿಯ ತತ್ವಗಳನ್ನು ಪ್ರತಿಪಾದಿಸುವುದರಲ್ಲಿ ಮುಂದಾಗಿತ್ತು. ಜನವರಿ ೧೯೨೮ ರಲ್ಲಿ ಈ ಪಕ್ಷ ಫ್ರೆಂಚ್ ಗೌರ್ನರ್ ಪಾಸ್ಕಿಯಾರ್ (Pasqwer) ನನ್ನು ಕೊಲೆ ಮಾಡಲು ಯತ್ನಿಸಿ ವಿಫಲವಾಯಿತು. ಆದರೆ ೧೯೩೦ರಲ್ಲಿ ಕೂಲಿಕಾರರ ಮಂಡಳಿಯ(Labour Bureau) ಮುಖ್ಯಸ್ಥನಾದ ಬಜೀನ್ (Bazin) ಎಂಬುವನನ್ನು ಕೊಲೆ ಮಾಡಿತು. ಈ ಭಯೋತ್ಪಾದಕ ಹಾಗೂ ವಿಧ್ವಾಂಸಕ ಕೃತ್ಯಗಳು ಫ್ರೆಂಚ್ ಪೋಲಿಸರ ಪಡೆಯ ಗಮನವನ್ನು ಇತ್ತ ಹರಿಸಿತು. ಪೋಲಿಸರ ಕಾಟ ಹೆಚ್ಚಿದಾಗ, ಈ ಪಕ್ಷ ಸಾಕಷ್ಟು ಪೂರ್ವ ಭಾವಿ ಸಿದ್ಧತೆಗಳಿಲ್ಲದೆ ಒಂದು ಸಾಮೂಹಿಕ ದಂಗೆಯನ್ನು ಫ್ರೆಂಚರ ವಿರುದ್ಧ ಪ್ರಚೋದಿಸಿತು. ಫೆಬ್ರವರಿ ೧೯೩೦ರಲ್ಲಿ ಇದು ಯನ್-ಬೆ (Yen-bay) ದಂಗೆಯೊಡನೆ ಪ್ರಾರಂಭವಾಯಿತು. ಯನ್-ಬೆ ದಂಗೆಯ ಪ್ರಭಾವ ದೇಶದ ನಾನಾ-ಭಾಗಗಳಲ್ಲಿ ಹರಡಿ, ಹಿಂಸಾ ಕೃತ್ಯಗಳು ಜರುಗಿದವು. ಫ್ರೆಂಚರು ಇದನ್ನು ಕ್ರೂರವಾಗಿ ಹತ್ತಿಕ್ಕಿ ದ್ದರು. ಎಲ್ಲಾ ರೀತಿಯ ರಾಷ್ಟ್ರೀಯ ಪ್ರದರ್ಶನಗಳನ್ನು, ಕಡೆಗೆ ಶಾಂತಿಯುತ ಚಳುವಳಿಗಳನ್ನು ಸೈನ್ಯ ಬಲದ ನೆರವಿನಿಂದ ಫ್ರೆಂಚರು

ಅಡಗಿಸಲು ಯತ್ನಿಸಿದರು, ಈ ಪಕ್ಷದ ಅನೇಕ ಜನರನ್ನು ಸೆರೆ ಹಿಡಿಯಯಾಯಿತಲ್ಲದೆ, ಪಕ್ಷವನ್ನು ನಿಷೇಧಿಸಲಾಯಿತು.

ಫ್ರೆಂಚರು ಯಾವ ರೀತಿಯಲ್ಲಿ ಉಗ್ರಗಾಮಿಗಳ ಚಳುವಳಿಗಳನ್ನು ೧೯೩೦ರಲ್ಲಿ ಹತ್ತಿಸಿದುದನ್ನು ಮನಗಂಡ ವಿಯಟ್ನಾಮಿ ಕಮ್ಯೂನಿಷ್ಟರು ರಹಸ್ಯ ಚಳುವಳಿ ಆರಂಭಿಸಲು ಯತ್ನಿಸಿದರು. ೧೯೩೧ರಲ್ಲಿ ೧೫೦೦ ಸದಸ್ಯರನ್ನು ಹೊಂದಿದ್ದ ಈ ಪುಟ್ಟ ಪಕ್ಷದ ಮುಖಂಡನೇ ವಿಯಟ್ನಾಂದ ರಾಷ್ಟ್ರೀಯ ಸಂಗ್ರಾಮದ ಇತಿಹಾಸದಲ್ಲಿ ಪ್ರಖ್ಯಾತ ನಾಗಿರುವ ಹೋ-ಚಿ-ಮಿನ್ (Ho-Coi-Minh) ಈತನ ಜೀವನ ಚರಿತ್ರೆಯನ್ನು ಇಲ್ಲಿ ಸ್ವಲ್ಪ ವಿವೇಚಿಸುವುದು ಉಚಿತವೆಂದು ತೋರುತ್ತದೆ.

ಹೋ-ಚಿ-ಮಿನ್‌ನ ಮತ್ತೊಂದು ಹೆಸರು ನುಯಾನ್-ಐ-ಶ್ವಾಕ್ (Nguyan–Ai-Quse) ಎಂದು. ಈತ ೧೮೯೦ರಲ್ಲಿ ಉತ್ತರ ವಿಯಟ್ನಾಂನ ಮಧ್ಯಮ ದರ್ಜೆಯ ಕುಟುಂಬದಲ್ಲಿ ಜನಿಸಿದ. ತಂದೆ ವಸಾಹತು ಸರ್ಕಾರದ ಒಬ್ಬ ಅಧಿಕಾರಿ ಹಾಗೂ ದೇಶಪ್ರೇಮಿ. ರಾಷ್ಟ್ರೀಯ ಚಟುವಟಿಕೆಗಳ ಕಾರಣವಾಗಿ ಅವನ ತಂದೆಯನ್ನು ಕೆಲಸದಿಂದ ತೆಗೆದುಹಾಕಿದರು. ಅವನ ಸಹೋದರರಿಗೆ, ಸರ್ಕಾರಕ್ಕೆ ಸೇರಿದ ಬಂದೂಕಗಳನ್ನು ಕದ್ದುದಕ್ಕಾಗಿ ಒಂಭತ್ತು ವರ್ಷ ಸೆರೆಮನೆ ವಾಸದ ಶಿಕ್ಷೆಯಾಯಿತು. ಅವನ ಸಹೋದರಿಯು ರಾಷ್ಟ್ರೀಯ ಸಂಗ್ರಾಮದ ಚಟುವಟಿಕೆಗಳಲ್ಲಿ ಪಾತ್ರವಹಿಸಿದ್ದಳು. ಅವನ ಒಬ್ಬ ಸಹೋದರನನ್ನು ಇದೇ ಕಾರಣಕ್ಕಾಗಿ ಫ್ರೆಂಚರು ಬಂಧಿಸಿ ಕೊಂಡೊಯಿದ್ದಿದರು. ಹೀಗೆ ಹೇ-ಚೀ-ಮಿನ್ನರು ಕ್ರಾಂತಿಕಾರರ ಕುಟುಂಬದಲ್ಲಿ ಜನಸಿ ವಿಯಟ್ನಾಂನ ರಾಷ್ಟ್ರೀಯ ಕ್ರಾಂತಿಯ ಮಹಾನಾಯಕರಾದರು.

೧೯೧೧ರಲ್ಲಿ ಐದು ದಿಕ್ಕು ತೋಚದೆಯಿದ್ದಾಗ ಫ್ರೆಂಚ್ ವಾಣಿಜ್ಯ ಹಡಗೊಂದರಲ್ಲಿ ಚಿಲ್ಲರೆ ಕೆಲಸ ಮಾಡುವ ಆಳಾಗಿ ಸೇರಿಕೊಂಡರು. ಅಲ್ಲಿಂದಾಚೆಗೆ ೧೯೪೫ರವರೆಗೆ ಅವರ ಅಲೆಮಾರಿ ಜೀವನ ಪ್ರಾರಂಭವಾಯಿತು. ಈ ಕಾಲದಲ್ಲಿ ಅವರು ಪ್ರಪಂಚದ ಅನೇಕ ದೇಶಗಳನ್ನು ನೋಡಿದರು. ಅಮೆರಿಕಾ, ಆಫ್ರಿಕಾ ಪೋರ್ಚುಗಲ್, ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಗಳನ್ನು ಸಂದರ್ಶಿಸಿದರು. ಮೊದಲನೆಯ ಮಹಾಯುದ್ಧ ಪ್ರಾರಂಭವಾದಾಗ ಹೋ-ಚಿ-ಮಿನ್ ಲಂಡನ್ ಪಟ್ಟಣದಲ್ಲಿದ್ದರು. ಅಡಿಗೆ ಭಟ್ಟನಿಗೆ ಹೋಟೆಲೊಂದರಲ್ಲಿ ಸಹಾಯಕನಾಗಿಯೂ ದುಡಿದರು. ಬ್ರಿಟಿಷ್ ಸೇನೆಗೆ ಸೇರುವ ಇವರ ಯತ್ನ ವಿಫಲವಾಯಿತು. ಲಂಡನ್ನಿನಿಂದ ಪ್ಯಾರಿಸ್ ನಗರಕ್ಕೆ ಹೋದರು. ಅಲ್ಲಿ ಸ್ವಲ್ಪಕಾಲ ಚಿತ್ರಗಾರನೊಬ್ಬನಿಗೆ ಸಹಾಯಕನಾಗಿ ಕೆಲಸಮಾಡುತ್ತಾ ಜೀವನ ನಡೆಸಿದರು. ಆಗ ಅಲ್ಲಿದ್ದ ಸ್ವದೇಶಿಯರ ಪರಿಚಯ ಬೆಳೆಸಿಕೊಂಡು ಅವರೊಡನೆ ಅನೇಕ ಸಮಸ್ಯೆಗಳನ್ನು ಚರ್ಚಿಸಿದರು. ಫ್ರಾನ್ಸಿನ ಸಮತಾವಾದಿ ಪಕ್ಷದ ಸದಸ್ಯರಾಗಿ, ಆ ಪಕ್ಷದ ಮುಖ್ಯಸ್ಥ ಲಿಯಾನ್ ಬನ್ಲ್‌ನ ಸ್ನೇಹ ಬೆಳಸಿದರು. ಯುದ್ಧ ಮುಗಿದ ಮೇಲೆ ಮಿತ್ರರಾಷ್ಟ್ರದ ಸದಸ್ಯರು ಫ್ರಾನಿಸ್ಸಿನಲ್ಲಿ ಶಾಂತಿ ಸಭೆ ಸೇರಿದ ಸಮಯದಲ್ಲಿ ಅವರಿಗೆ ಮನವಿಯೊಂದನ್ನು ಅರ್ಪಿಸಿ, ಅವರಿಗೆ ತನ್ನ ದೇಶದ ಸ್ಥಿತಿಗತಿಗಳನ್ನು ತಿಳಿಸಿದರು. ದೇಶಪ್ರೇಮಿ ನುಯಾನ್ (Nguyen-Ai-Quac) ಎಂಬ ಹೆಸರಿನಲ್ಲಿ ಫ್ರಾನ್ಸಿನ ಪ್ರಸಿದ್ಧ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. "ಸಂದಿಗ್ಧ ಸ್ಥಿತಿಯಲ್ಲಿರುವ ಫ್ರೆಂಚರ ವಸಾಹತು ನೀತಿ (French Colonization on Vrail) ಎಂಬ ಪುಸ್ತಕವನ್ನು ಬರೆದರು. ಕಮ್ಯೂನಿಷ್ಟ್ ಪಕ್ಷದ ಸದಸ್ಯರಾಗಿ ೧೯೧೯ರಲ್ಲಿ ಸೇರಿದರು. ೧೯೨೪ರಲ್ಲಿ

ರಷ್ಯಾ ದೇಶಕ್ಕೆ ಹೋಗಿ ಅಲ್ಲಿ ಒಂದು ವರ್ಷವಿದ್ದು ಕ್ರಾಂತಿ ನಡೆಸು ವಲ್ಲಿ ಬಳಸಬೇಕಾದ ತಂತ್ರಗಳೆನ್ನೆಲ್ಲಾ ಅಭ್ಯಾಸ ಮಾಡಿದರು. ಅಲ್ಲಿಂದ ದಕ್ಷಿಣ ಚೀನಾದ ಕ್ಯಾಂಟನ್ ನಗರದಲ್ಲಿ ಸನ್-ಯಾತ್-ಸೆನರು ಸ್ಥಾಪಿಸಿದ್ದ ಸರ್ಕಾರದ ಆಶ್ರಯಕ್ಕೆ ಹೋದರು ಅಲ್ಲಿನ ವಾಂಪೋವಾ (Whampoa) ಮಿಲಿಟರಿ ಶಾಲೆಯಲ್ಲಿ ಸೈನ್ಯಶಿಕ್ಷಣ ಪಡೆದರು. ಕ್ಯಾಂಟನ್ ನಗರದಲ್ಲೇ ಕ್ರಾಂತಿಕಾರಿ ಅನ್ನಮೀಯ ಯುವಕರ ಸಂಘವನ್ನು (Association of Revolutionary Annamite Youth) ಸ್ಥಾಪಿಸಿದ್ದರು. ಈ ಸಂಘದ ಸದಸ್ಯರು ವಾಂಪೋವಾ ಮಿಲಿಟರಿ ಶಾಲೆಯಲ್ಲಿ ಶಿಕ್ಷಣ ಪಡೆದವರಾಗಿದ್ದರು.

ವಿಯಟ್ನಾಂನ್ನು ಫ್ರೆಂಚರ ದಾಸ್ಯದಿಂದ ಮುಕ್ತಿಮಾಡುವುದೇ ಹೋ-ಚಿ-ಮಿನ್ನರ ಉದ್ದೇಶವಾಗಿತ್ತು. ಅವರ ಪ್ರಕಾರ ಈ ಉದ್ದೇಶ ವನ್ನು ಪ್ರಜಾಪ್ರಭುತ್ವದ ತತ್ವದ ಮೂಲಕ ಸಾಧಿಸಬೇಕೆಂಬು ದಾಗಿತ್ತು. ಕಮ್ಯೂನಿಸಂ ತತ್ವಗಳನ್ನು ಅನಂತರ ಅನುಷ್ಠಾನಕ್ಕೆ ತರಬೇಕೆಂದು ಅವರು ಹೇಳುತ್ತಿದ್ದರು. ಹೋ-ಚಿ-ಮಿನ್ನರ ಕಾರ್ಯ ಕ್ರಮ ಉದ್ದೇಶಗಳು ಬುದ್ಧಿಜೀವಿಗಳಿಗೂ ಹಾಗೂ ರೈತಾಪಿ ವರ್ಗ ದವರಿಗೂ ಹಿಡಿಸಿತು. ತೆರಿಗೆಗಳ ಭಾರ ಇಳಿಸುವುದು, ಭೂಮಿ ಯನ್ನು ಬಡರೈತರಿಗೆ ಹಂಚುವುದು, ಕೂಲಿಯಾಳುಗಳನ್ನು ಬಲ ವಂತವಾಗಿ ದುಡಿಸಿಕೊಳ್ಳುವವರ ಮತ್ತು ವಿಯಟ್ನಾಮಿ ಸೈನಿಕ ರನ್ನು ಪರದೇಶಗಳಿಗೆ ಕಳಿಸಿಕೊಡುವುದರ ನಿಷೇಧ—ಇವುಗಳೇ ಹೋ-ಚಿ-ಮಿನ್ನರ ರಾಜಕೀಯ ಉದ್ದೇಶಗಳಾಗಿದ್ದವು. ಸರಳ ಜೀವಿ ಯಾಗಿದ್ದ ಅವರು ಶಿಸ್ತಿನ ಸಿಪಾಯಿಯಾಗಿದ್ದರು. ಉಳಿದ ಮುಖಂಡರು ವಿಫಲವಾದ ಕಡೆ ಹೊ-ಚಿ-ಮಿನ್ನರು ಗೆಲುವನ್ನು ಸಂಪಾದಿಸಿದರು. ಬ್ರಿಟಿಷರು ಇವರನ್ನು ಹಾಂಗ್‌ಕಾಂಗ್‌ನಲ್ಲಿ ಬಂಧಿಸಿ ಮೂರು ವರ್ಷಗಳ ಕಾಲ ಸೆರೆಮನೆಯಲ್ಲಿಟ್ಟಿದ್ದರು. ಅವರು

ಪ್ರಾರಂಭಿಸಿದ ಚಳುವಳಿ ಫ್ರೆಂಚರ ವಿರುದ್ಧವಾಗಿ ಎಲ್ಲಾ ಅಡಚಣೆಗಳನ್ನು ದಾಟಿ ಪ್ರಗತಿ ಹೊಂದಿತು.

ಎರಡನೆಯ ಮಹಾಯುದ್ಧದ ಕಾಲದಲ್ಲಿ ವಿಯಟ್ನಾಂನಲ್ಲಿ ಸ್ವಾತಂತ್ರ್ಯಸಂಗ್ರಾಮದ ಕಾವು ಏರಿತು. ೧೯೪೧ರಲ್ಲಿ ಹೋ-ಚಿ-ಮಿನ್ನರು ವಿಯಟ್-ಮಿನ್ಹ್ (Viet-Minh) ಅಥವಾ ವಿಯಟ್ನಾಂ ಸ್ವಾತಂತ್ರ್ಯ ಸಂಘ (The League for Vietnam Independence)ನ್ನು ಸ್ಥಾಪಿಸಿದರು. ಮಹಾಯುದ್ಧದ ಕಾಲದಲ್ಲಿ ಫ್ರೆಂಚರು ವಿಯಟ್ನಾಂನಲ್ಲಿ ಆಡಳಿತವನ್ನು ಜಪಾನಿಯರಿಗೆ ಒಪ್ಪಿಸಿದರು. ಫ್ರೆಂಚರಿಗೆ ಎರಡು ಮಾರ್ಗಗಳಿದ್ದವು. ಒಂದು ವಿಯಟ್ನಾಮಿಯರ ಜೊತೆಗೂಡಿ ಜಪಾನಿಯರ ವಿರುದ್ಧ ಹೋರಾಡುವುದು; ಎರಡು ಜಪಾನಿಯರಿಗೆ ಶರಣಾಗತವಾಗುವುದು. ಫ್ರೆಂಚರು ಎರಡನೆಯ ಮಾರ್ಗವನ್ನು ಹಿಡಿದರು. ಇದಕ್ಕೆ ಕಾರಣ, ವಿಯಟ್ನಾಮಿ ದೇಶಪ್ರೇಮಿಗಳಲ್ಲಿ ಅನೇಕರು ಕಮ್ಯೂನಿಸ್ಟರಾಗಿದ್ದರು. ಹೋ-ಚಿ-ಮಿನ್ನರು ಫ್ರೆಂಚರ ಹಾಗೂ ಜಪಾನಿಯರ ವಿರುದ್ಧ ೧೯೪೫ರವರೆಗೂ ಹೋರಾಟನಡೆಸಿದರು. ಜಪಾನಿಯರು ಶರಣಾಗತವಾಗುವ ಮುನ್ನ ವಿಯಟ್ನಾಂನ ಸ್ವಾತಂತ್ರವನ್ನು ಘೋಷಿಸಿದರು. ಅನ್ನಾಂನ ಚಕ್ರವರ್ತಿ ನುಯೇನ್ ಮನೆತನದ ಬಾವೋ–ದಾಯ್ (Bao-Dai) ವಿಯಟ್ನಾಂ ಸ್ವಾತಂತ್ರ್ಯ ಘೋಷಣೆಯೊಂದನ್ನು ಹೊರಡಿಸಿದ. ಟಾಂಗ್-ಕಿಂಗ್ ಪ್ರಾಂತ್ಯವನ್ನು ತನ್ನ ವಶದಲ್ಲಿಟ್ಟುಕೊಂಡಿದ್ದ. ಹೋ-ಚಿ-ಮಿನ್ನರು ಬಾವೋ–ದಾಯನ ಘೋಷಣೆಯನ್ನು ಮನ್ನಿಸಲಿಲ್ಲ. ಅವರು ತಾವೇ ಪ್ರತ್ಯೇಕವಾಗಿ ಗಣರಾಜ್ಯವೊಂದನ್ನು ಸ್ಥಾಪಿಸಿದರು.

ಯುದ್ಧ ಮುಗಿದ ಮೇಲೆ ಫ್ರೆಂಚರು ವಿಯಟ್ನಾಂಗೆ ವಾಪಸ್ಸು ಬಂದು ತಮ್ಮ ಅಧಿಕಾರವನ್ನು ವ್ಯವಸ್ಥೆಗೊಳಿಸಲು ಪ್ರಯತ್ನ ನಡೆಸಿ

ದರು. ವಿಯಟ್ನಾಂನನ್ನು ಕಳೆದುಕೊಳ್ಳಲು ಅವರಿಗೆ ಇಷ್ಟವಿರಲಿಲ್ಲ. ಹೋ-ಚಿ-ಮಿನ್ನರಿಗೂ ಫ್ರೆಂಚರಿಗೂ ನಡುವೆ ಅನೇಕ ಮಾತುಕತೆ ಗಳು ನಡೆದರೂ ಯಾವುದೂ ಇತ್ಯರ್ಥವಾಗದೆಯಿದ್ದಾಗ, ಯುದ್ಧ ಪ್ರಾರಂಭವಾಯಿತು. ಹೋ-ಚಿ-ಮಿನ್ನರು ಸಂಪೂರ್ಣ ಸ್ವಾತಂತ್ರ್ಯ ವನ್ನು ಕೇಳಿದರು. ಫ್ರೆಂಚರು ತಮ್ಮ ಅಧೀನದಲ್ಲೇ ಒಂದು ರೀತಿಯ ಸ್ವಾತಂತ್ರ್ಯ ಕೊಡುವುದಾಗಿ ಘೋಷಿಸಿದರು. ಮೊದಲು ಫ್ರೆಂಚರು ಹೋ-ಚಿ-ಮಿನ್ನರು ಉತ್ತರದಲ್ಲಿ ಸ್ಥಾಪಿಸಿದ್ದ 'ವಿಯಟ್ನಾಂ ಗಣ ರಾಜ್ಯ'ಕ್ಕೆ ಮನ್ನಣೆ ನೀಡಿದರು. ಆದರೆ ದಕ್ಷಿಣದಲ್ಲಿ ಕೊಚ್ಚಿನ್-ಚೀನಾದಲ್ಲಿ ಫ್ರೆಂಚರು ಮತ್ತೊಂದು ಸ್ವತಂತ್ರ ರಾಜ್ಯವನ್ನು ಸೃಷ್ಟಿ ಸಲು ಹೊರಟಾಗ, ಹೋ-ಚಿ-ಮಿನ್ನರು ಅದನ್ನು ಒಪ್ಪದೆ ಸಂಪೂರ್ಣ ವಿಯಟ್ನಾಂ ಸ್ವತಂತ್ರವಾಗಿರಬೇಕೆಂದು ಘೋಷಿಸಿದರು. ಇಂತಹ ವಾತಾವರಣದಲ್ಲಿ ಡಿಸೆಂಬರ್ ೧೯೪೬ರಲ್ಲಿ ಹೋ-ಚಿ-ಮಿನ್ನರ ಮತ್ತು ಫ್ರೆಂಚರ ನಡುವೆ ಯುದ್ಧ ಪ್ರಾರಂಭವಾಯಿತು. ಈ ಸ್ವಾತಂತ್ರ್ಯ ಕ್ಕಾಗಿ ನಡೆದ ಉಗ್ರ ರೀತಿಯ ಹೋರಾಟ ೧೯೫೪ರವರೆಗೆ ಸಾಗಿತ್ತು. ಏಳುವರೆ ವರ್ಷಗಳ ಕಾಲ ಫ್ರೆಂಚರ ಸೇನೆ, ಹೋ-ಚಿ-ಮಿನ್ನರ ಸೇನೆಯೊಂದಿಗೆ ಕಾಡುಮೇಡುಗಳಲ್ಲಿ ಯುದ್ಧ ನಡೆಸಿ ಅಪಾರ ನಷ್ಟ ವನ್ನು ಅನುಭವಿಸಬೇಕಾಯಿತು. 'ಗೊರಿಲ್ಲಾ' ಯುದ್ಧದಲ್ಲಿ ಹೋ-ಚಿ-ಮಿನ್ನರ ಸೇನೆಗೆ ಅಪಾರವಾದ ಅನುಭವವಿದ್ದು ಅದರ ಮುಂದೆ ಫ್ರೆಂಚರ ಸೇನೆ ನಿಲ್ಲಲಾಗಲಿಲ್ಲ. ಶತ್ರುವನ್ನು ನೇರ ವಾಗಿ ಎದುರಿಸದೆ, ಅವನ ಮೇಲೆ ಅನಾಮತ್ತಾಗಿ ಎದುರುಬಿದ್ದು ಕೊಲ್ಲುವುದು ಹೋ-ಚಿ-ಮಿನ್ನರ ಸೇನೆಯ ವೈಶಿಷ್ಟ್ಯವಾಗಿತ್ತು. ಮೇ ೧೯೫೪ರಲ್ಲಿ ಕಟ್ಟಕಡೆಗೆ ವಿಯಟ್ ಮಿನ್ ಸೇನೆ ಫ್ರೆಂಚರು ದಿನ್-ಬಿನ್-ಫೂ (Diea-Bien-phu) ಎಂಬಲ್ಲಿ ಮರೆಯಲಾರದ ಪರಾಭವವನ್ನು ಹೊಂದುವಂತೆ ಮಾಡಿತು. ಮಹಾಹತುಷಾಹಿ

ಸಾಮ್ರಾಜ್ಯಕ್ಕೆ ಬಿದ್ದ ದೊಡ್ಡ ಪೆಟ್ಟು ಇದಾಯಿತು. ಈ ಯುದ್ಧದಿಂದ ಅಪಾರ ನಷ್ಟಕಷ್ಟಗಳನ್ನು ಅನುಭವಿಸಿದ ಫ್ರೆಂಚರು ಶಾಂತಿ ಒಪ್ಪಂದಕ್ಕೆ ಬರಲು ಒಪ್ಪಿದರು. ಅದರಂತೆ ಜಿನಿವಾದಲ್ಲಿ ಒಪ್ಪಂದವಾಯಿತು.

ಈ ಯುದ್ಧದಲ್ಲಿ ಫ್ರೆಂಚರು ಅಮೇರಿಕನ್ನರ ನೇರವಾದ ನೆರವನ್ನು ಕೇಳಿದರು. ಅಮೇರಿಕನ್ನರು ನಿರಾಕರಿಸಿದರು. ಫ್ರೆಂಚರೊಬ್ಬರೆ ಹೋರಾಡಬೇಕಾಯಿತು. ಸ್ವಾತಂತ್ರ್ಯ ಸಂಗ್ರಾಮವನ್ನು ನಡೆಸುತ್ತಿದ್ದ ಹೋ-ಚಿ-ಮಿನ್ನರ ಕಡೆಗೆ ಹೆಚ್ಚಿನ ಅಂತರರಾಷ್ಟ್ರೀಯ ಸಹಾನುಭೂತಿಯಿತ್ತು. ಅದಲ್ಲದೆ ೧೯೪೯ರಲ್ಲಿ ಕಮ್ಯೂನಿಸ್ಟರು ಚೀನಾದಲ್ಲಿ ಮಾವೋ-ತ್ಸೆ-ತುಂಗರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಮೇಲೆ, ಅವರು ಹೋ-ಚಿ-ಮಿನ್ನರಿಗೆ ಹೆಚ್ಚಿನ ನೆರವನ್ನು ನೀಡಿ ಫ್ರೆಂಚರ ಸೋಲಿಗೆ ಕಾರಣರಾದರು.

ಹೋ-ಚಿ-ಮಿನ್ನರ ಪ್ರಾಬಲ್ಯವನ್ನು ಅಡಗಿಸಲು, ಹಾಗೂ ಅವರು ಸ್ಥಾಪಿಸಿದ ಉತ್ತರ ವಿಯಟ್ನಾಂನ ಗಣರಾಜ್ಯವನ್ನು ಕೊನೆಗಾಣಿಸಲು ಫ್ರೆಂಚರು ಅನೇಕ ಕುಟಿಲೋಪಾಯಗಳನ್ನು ಮಾಡಿದರು. ಅವುಗಳಲ್ಲಿ ಒಂದು ವಿಯಟ್ನಾಂನ ಪುರಾತನ ರಾಜಮನೆತನದ ಅರಸನಾದ ಬಾವೋ-ದಾಯ್‌ನನ್ನು ಅವನ ಹೆಸರನ್ನು ಉಪಯೋಗಿಸಿಕೊಂಡಿದ್ದು. ೧೯೪೯ರಲ್ಲೆ ಫ್ರೆಂಚರು ಈ ರಾಜನನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ವಿಯಟ್ನಾಂ ಜನತೆಯ ಮೇಲೆ ಮಾನಸಿಕವಾಗಿ ಪ್ರಭಾವ ಬೀರಲು ಯತ್ನಿಸಿದರು. ಬಾವೋ-ದಾಯ್‌ರ ನೇತೃತ್ವದಲ್ಲಿ ದಕ್ಷಿಣ ವಿಯಟ್ನಾಂನಲ್ಲಿ ಸೈಗಾನ್ ನಗರದಲ್ಲಿ ಒಂದು ಸರ್ಕಾರವನ್ನು ಫ್ರೆಂಚರು ಸೃಷ್ಟಿಸಿದರು. ಇದು ನೆಪಮಾತ್ರಕ್ಕೆ ಸ್ವತಂತ್ರವಾಗಿದ್ದರು. ಆಡಳಿತ ಸೂತ್ರಗಳೆಲ್ಲಾ ಫ್ರೆಂಚರ ಕೈಯಲ್ಲಿದ್ದವು. ಬಾವೋ-ದಾಯ್ ಫ್ರೆಂಚರಿಗೂ ಜಪಾನಿಯರಿಗೂ ಈ

ಹಿಂದೆ ಅಧೀನರಾಗಿ ನಡೆದುಕೊಂಡಿದ್ದ ವ್ಯಕ್ತಿ. ಫ್ರೆಂಚರ ನಾಗರಿಕತೆಯನ್ನು ಮೈಗೂಡಿಸಿಕೊಂಡ ಬಾವೋದಾಯ್‌ಗೆ ತನ್ನ ಮಾತೃಭಾಷೆಗಿಂತ ಫ್ರೆಂಚರ ಭಾಷೆಯ ಪರಿಚಯವೇ ಹೆಚ್ಚಾಗಿತ್ತು. ಮಾತು, ನಡೆ, ಸಂಪ್ರದಾಯಗಳಲ್ಲಿ ಫ್ರೆಂಚ್ ಸಂಸ್ಕೃತಿಯ ಪಡಿಯಚ್ಚಿನಂತಿದ್ದ ಈತ ಶ್ರೇಷ್ಠ ದೇಶಪ್ರೇಮಿ, ಹೋರಾಟಗಾರ ಆದರೂ ವಿಯಟ್ನಾಮಿಯರ ಮುಂದೆ ಸಪ್ಪೆಯ ವ್ಯಕ್ತಿಯಾಗಿದ್ದ. ಬಾವೋ-ದಾಯ್ ಹೆಚ್ಚಿನ ವೇಳೆಯನ್ನು ಪ್ಯಾರಿಸ್ಸಿನಲ್ಲೇ ಕಳೆಯುತ್ತಿದ್ದು, ತನ್ನ ದೇಶದ ಆಗುಹೋಗುಗಳಿಗೆ ಉದಾಸೀನನಾಗಿದ್ದನೆಂದೇ ಹೇಳಬಹುದು. ಇದಕ್ಕೆ ವಿರುದ್ಧವಾಗಿ ಹೋ-ಚಿ-ಮಿನ್ನರು ಸರಳ ವ್ಯಕ್ತಿಯಾಗಿದ್ದು, ವಿಯಟ್ನಾಂನ ದೀನದಲಿತರನ್ನು ಚೆನ್ನಾಗಿ ಪ್ರತಿನಿಧಿಸುತ್ತಿದ್ದರು. ಇದರಿಂದ ಅವರೇ ಹೆಚ್ಚು ಜನಪ್ರಿಯರಾಗಿದ್ದರು. ಬಾವೋ–ದಾಯನ್ನು ಉಪಯೋಗಿಸಿಕೊಂಡು ಹೋ-ಚಿ-ಮಿನ್ನರ ಪ್ರಭಾವವನ್ನು ಅಡಗಿಸುವ ಫ್ರೆಂಚರ ಪ್ರಯತ್ನ ವಿಫಲವಾಯಿತು. ಹೀಗೆ ವಿಫಲರಾದ ಫ್ರೆಂಚರು ೧೯೫೪ರಲ್ಲಿ ಜಿನಿವಾ ಒಪ್ಪಂದವನ್ನು ಮಾಡಿಕೊಂಡರು.

ಜಿನಿವಾ ಒಪ್ಪಂದಪ್ರಕಾರ, ವಿಯಟ್ನಾಂನ್ನು ಹದಿನೇಳನೇ ಸಮಾನಾಂತರ ರೇಖೆಯ ಬಳಿ ಎರಡು ಭಾಗಗಳನ್ನಾಗಿ ಮಾಡಲಾಯಿತು. ಈ ರೇಖೆಯ ಉತ್ತರಭಾಗ ಹೋಚಿಮಿನ್ನರ ಸರ್ಕಾರಕ್ಕೂ, ದಕ್ಷಿಣದಭಾಗ ಬಾವೋದಾಯರ ಸರ್ಕಾರಕ್ಕೂ ಹೋಯಿತು. ಹೋಚಿಮಿನ್ನರು ಹನಾಯ್ ನಗರವನ್ನು ರಾಜಧಾನಿ ಮಾಡಿಕೊಂಡು ಡೆಮೋಕ್ರಾಟಿಕ್ ರಿಪಬ್ಲಿಕ್ ಆಫ್ ವಿಯಟ್ನಂ ಸ್ಥಾಪಿಸಿದರು. ದಕ್ಷಿಣ ಡೆಮೋಕ್ರಾಟಿಕ್ ವಿಯಟ್ನಾಂ ಸ್ಥಾಪನೆಯಾಯಿತು. ಎರಡು ವರ್ಷಗಳಲ್ಲೇ ಈ ಎರಡು ಭಾಗಗಳಿಗೆ ಏಕೀಕರಣ ಆಗಬೇಕೆಂದು ಒಪ್ಪಂದವಾಯಿತು. ಅಂತಹ ಏಕೀಕರಣ ಇಂದಿಗೂ

ನಡೆದಿಲ್ಲ. ವಿಯಟ್ನಾಂ ಸ್ವತಂತ್ರವಾದರೂ ಬೇರೊಂದು ದಿಕ್ಕಿಗೆ ಸಾಗಿತ್ತು.

ಹೀಗೆ ಇಪ್ಪತ್ತನೆ ಶತಮಾನದ ಆರಂಭದ ವರ್ಷಗಳಲ್ಲಿ ಪ್ರಾರಂಭವಾದ ವಿಯಟ್ನಾಮಿಯರ ಸ್ವಾತಂತ್ರ್ಯಸಂಗ್ರಾಮ, ಅನೇಕ ರೀತಿಗಳಲ್ಲಿ ವ್ಯಕ್ತವಾಗಿ ಕಡೆಗೆ ಹಿಂಸಾತ್ಮಕ ಹೋರಾಟದಿಂದ ೧೯೫೪ರ ಹೊತ್ತಿಗೆ ಒಂದು ಘಟ್ಟವನ್ನು ಮುಟ್ಟಿತು. ೧೯೫೪ರಲ್ಲಿ ಫ್ರೆಂಚ್‌ರಿಂದ ಸಂಪೂರ್ಣವಾಗಿ ಸ್ವಾತಂತ್ರವನ್ನು ಪಡೆದುಕೊಂಡರೂ ಸಹಾ ವಿಯಟ್ನಾಂ ಇಬ್ಭಾಗವಾಯಿತು. ೧೯೫೫ ರಿಂದೀಚೆಗೆ ವಿಯಟ್ನಾಂ ಅಂತರ ರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸಿತು. ಸ್ವಾತಂತ್ರ್ಯದ, ಆರ್ಥಿಕ ಪ್ರಗತಿ, ಶಾಂತಿ, ಬರಬೇಕೆಂದು ಆಸೆಯಿಂದಿದ್ದ ಜನತೆಗೆ ಮತ್ತೊಂದು ಉಗ್ರ ಹೋರಾಟದಲ್ಲಿ ಭಾಗವಹಿಸುವಂತಾಯಿತು. ವಿಶ್ವದ ಪ್ರಬಲ ರಾಷ್ಟ್ರಗಳು ವಿಯಟ್ನಾಂನಅಂತರಿಕ ವ್ಯವಹಾರಗಳಲ್ಲಿ ಕೈಹಾಕಿ ಸಮಸ್ಯೆಯನ್ನು ಗಡುಸಾಗಿಯು, ಕ್ಲಿಷ್ಟವಾಗಿಯೂ ಮಾಡಿದವು. ೧೯೫೪ರಿಂದ ವಿಯಟ್ನಾಂ ಇತಿಹಾಸದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು.

ಇಂದಿನ ವಿಯಟ್ನಾಂ

೧೯೫೪ ರಲ್ಲಿ ವಿಯಟ್ನಾಂ ಇಭ್ಭಾಗವಾಯಿತು. ಉತ್ತರ ವಿಯಟ್ನಾಂನಲ್ಲಿ ಕಮ್ಯುನಿಸ್ಟರು, ಡಾ. ಹೋಚಿಮಿನ್ನರ ನೇತೃತ್ವದಲ್ಲಿ ಸರ್ಕಾರ ರಚಿಸಿದರು. ದಕ್ಷಿಣದಲ್ಲಿ ಬಾವೋದಾಯರ (Bao-Dai) ನೇತೃತ್ವದಲ್ಲಿ 'ಪ್ರಜಾಪ್ರಭುತ್ವ' ತಳಹದಿಯ ಮೇಲೆ ಸರ್ಕಾರವೊಂದು ರಚಿತವಾಯಿತು. ೧೯೫೫ರಲ್ಲಿ ಬಾವೋದಾಯರನ್ನು ತಳ್ಳಿಹಾಕಿ, ಅವರ ಸರ್ಕಾರದಲ್ಲಿ ಪ್ರಧಾನಮಂತ್ರಿಯಾಗಿದ್ದ ಯನ್‌ಗೋ ಡಯಮ್ (Ngo Diem) ಎಂಬುವರು ಸಂಪೂರ್ಣ ಅಧಿಕಾರ

ವನ್ನು ತಾವೇ ವಹಿಸಿಕೊಂಡು ಗಣರಾಜ್ಯವೊಂದನ್ನು ಸ್ಥಾಪಿಸಿದರು. ಅವರ ಪ್ರಭುತ್ವಕ್ಕೆ ಅಮೆರಿಕಾ ಮೊದಲಾದ ಕಮ್ಯುನಿಸ್ಟೇತರ ಸರ್ಕಾರಗಳ ಮನ್ನಣೆಯೂ ಸಹಾಯವು ದೊರೆಯಿತು. ಎರಡು ವರ್ಷಗಳ ನಂತರ ವಿಯಟ್ನಾಮಿನ ಎರಡೂ ಭಾಗಗಳಲ್ಲಿ ಜನಾಭಿಪ್ರಾಯ ಸಂಗ್ರಹಣೆ ನಡೆದು, ಏಕೀಕರಣ ವಾಗಬೇಕೆಂಬುದು ೧೯೫೪ರ ಜಿನಿವಾ ಒಪ್ಪಂದದ ಷರತ್ತಾಗಿತ್ತು. ಅಭಿಪ್ರಾಯಕ್ಕೆ ಯನ್‌ಗೋ ಡಯೆಮ್ ಒಪ್ಪಿಗೆ ಕೊಡದೆ ದಕ್ಷಿಣದಲ್ಲಿ ತಮ್ಮ ಅಭಿಪ್ರಾಯವನ್ನು ಹೆಚ್ಚಿಸಿಕೊಂಡರು. ಉತ್ತರದಲ್ಲಿ ಕಮ್ಯುನಿಸ್ಟರು, ದಕ್ಷಿಣದ ಸರ್ಕಾರವನ್ನು ಉರುಳಿಸಿ, ಇಡೀ ವಿಯಟ್ನಾಂನಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸುವ ಯತ್ನ ನಡೆಸಿದರು. ಇದರ ಕಾರ್ಯಕ್ಕೆ ದಕ್ಷಿಣವಿಯಟ್ನಾಂನಲ್ಲಿ ಮೊದಲು ಅಡಗಿಕೊಂಡು ಅನಂತರ ಪ್ರಾಬಲ್ಯಕ್ಕೆ ಬಂದ ವಿಯಟ್-ಕಾಂಗ್ (Viet Cong)ಗಳೆಂಬ ಕಮ್ಯೂನಿಸ್ಟರ ಗುಂಪೊಂದು ನೆರವಾಗಲು ಸಿದ್ಧವಾಗಿತ್ತು. ಹೋಚಿಮಿನ್ನರು ಇವರಿಗೆ ಎಲ್ಲಾ ನೆರವನ್ನು ನೀಡಲು ಮುಂದಾದರು. ಮುಖ್ಯವಾಗಿ ಕಮ್ಯುನಿಸ್ಟರೇ ಸೇರಿ ಸಂಘಟಿಸಿದ ದಕ್ಷಿಣವಿಯಟ್ನಾಂನಲ್ಲಿರುವ ವಿಮೋಚನಾ ಕಾಂಗದ ಮತ್ತೊಂದು ಹೆಸರು 'ವಿಯೆಟ್‌ಕಾಂಗ್'(Vietcong) ಇವರ ಜನಪ್ರಿಯ ನಾಮಧೇಯ "ಗೆರಿಲ್ಲಾ". ಹತ್ತು ಅಡಿ ಮುಂದೆ ಸಾಗಬೇಕಾದರೆ, ವಿಮಾನಗಳ ರಕ್ಷಣೆ ಬೇಕೆಂದು ಕೇಳುವ ದಕ್ಷಿಣ ವಿಯಟ್ನಾಂ ಸೈನಿಕರಿಗೂ, ಗುಹೆಮರೆಗಳಲ್ಲಿ ವಾಸಿಸಿ, ಗೆಡ್ಡೆಗೆಣಸುಗಳನ್ನು ತಿಂದು ವೈರಿಯನ್ನು ಕಂಡಲ್ಲಿ ಗುಂಡಿಟ್ಟು ಕೊಂದು ಸ್ಫೂರ್ತಿ ಪಡೆಯುವ ವಿಯೆಟ್‌ಕಾಂಗ್‌ಗೂ ಅಜಗಜಾಂತರ ವ್ಯತ್ಯಾಸ. ಚೀನೀ ನಾಯಕ ಮಾವೋ-ತ್ಸೆ-ತುಂಗರು ಅನುಸರಿಸಿದ ಗೆರಿಲ್ಲಾ ಯುದ್ಧ ತಂತ್ರ ಇವರ ವೇದ ; ಬೆಳಕಿನಲ್ಲಿ ಬೆಳಕಾಗಿ ; ನೆರಳಲ್ಲಿ ನೆರಳಾಗಿ ಸುಳಿಯಬಲ್ಲ ಇವರ ಚಾಕಚಕ್ಯತೆ, ಅಮೆರಿಕಾದ

ಎಲೆಕ್ಟ್ರಾನಿಕ್ ಸಮರ ವಿದ್ಯೆಯನ್ನು ಕುಲಗೆಡಿಸಿರುವುದು ಮುಂದಿನ ಸಮರ ವಿಜ್ಞಾನಿಗಳಿಗೆ ಒಂದು ಅದ್ಭುತ ಅಧ್ಯಯನ ಕ್ಷೇತ್ರವೆನ್ನಬಹುದು. ಹೀಗೆ ಉತ್ತರ ಮತ್ತು ದಕ್ಷಿಣ ವಿಯಟ್ನಾಂಗಳ ನಡುವೆ ದ್ವೇಷ ಬೆಳೆದು ಉಗ್ರಹೋರಾಟಕ್ಕೆ ನಾಂದಿಯಾಯಿತು.

ಇಂತಹ ಹೋರಾಟ ಉತ್ತರ–ವಿಯಟ್ನಾಂ ಮತ್ತು ದಕ್ಷಿಣ ವಿಯಟ್ನಾಂಗಳಿಗೆ ಸೀಮಿತವಾಗಿದ್ದರೆ, ಸಮಸ್ಯೆ ಅಷ್ಟು ಗಡಾತರವಾಗಿ ಕಾಣುತ್ತಿರಲಿಲ್ಲ. ಈ ಆಂತರಿಕ ಜಗಳದಲ್ಲಿ ವಿಶ್ವದ ಪ್ರಬಲ ರಾಷ್ಟ್ರಗಳಾದ ಅಮೆರಿಕಾ, ರಷ್ಯಾ ಮತ್ತು ಚೀನಾಗಳು ಪ್ರವೇಶ ಮಾಡಿ ಸ್ಥಳೀಯ ಸಮಸ್ಯೆಯನ್ನು ಅಂತರ–ರಾಷ್ಟ್ರೀಯ ಮಟ್ಟಕ್ಕೆ ಏರಿಸಲು ಕಾರಣವಾದವು. ಅದರಲ್ಲೂ ಅಮೆರಿಕಾದ ಪಾತ್ರವಂತೂ ಹಿರಿದಾಗಿದೆ. ಫ್ರೆಂಚರು ಕಾಲ್ತೆಗೆದಮೇಲೆ ಅಮೆರಿಕನ್ನರು ಪ್ರವೇಶಿಸಿದರು. ಆಗ್ನೇಯ ಏಷ್ಯಾದಲ್ಲಿ ಹಬ್ಬುತ್ತಿದ್ದ ಕಮ್ಯುನಿಸ್ಟರ ಪ್ರಭಾವವನ್ನು ತಡೆಗಟ್ಟುವುದು ಅಮೆರಿಕಾದ ಉದ್ದೇಶ. ಅವನ್ನು ಬೆಳೆಸುವುದು ರಷ್ಯಾ ಚೀನಾಗಳ ಉದ್ದೇಶ. ಒಟ್ಟಿನಲ್ಲಿ ಈ ಪ್ರಬಲ ರಾಷ್ಟ್ರಗಳ 'ಶೀತಯುದ್ಧ' (Cold war) ಹಾಗೂ 'ಭಾವನೆಗಳ ಯುದ್ಧ'(Idealogical war)ಗಳ ಕಣವಾಯಿತು ವಿಯಟ್ನಾಂ.

ಹೀಗೆ ಪರಕೀಯರ ಪ್ರವೇಶದಿಂದ ವಿಯಟ್ನಾಮಿನ ಸಮಸ್ಯೆ ಮತ್ತಷ್ಟು ಗಡುಸಾಯಿತು. ಮೊದಮೊದಲು ಅಮೆರಿಕನ್ನರು "ಸಲಹೆಗಾರರಾಗಿ" ದಕ್ಷಿಣ ವಿಯಟ್ನಾಂಗೆ ಬಂದರು. ಅನಂತರ ಅಮೆರಿಕಾ ಸರ್ಕಾರ ತನ್ನ ಸೈನಿಕರನ್ನು ಈ ಯುದ್ಧದಲ್ಲಿ ಭಾಗ ವಹಿಸಲು ಕಳುಹಿಸತೊಡಗಿತು. ಕಮ್ಯುನಿಸ್ಟರ ಪ್ರಭಾವವನ್ನು ತಗ್ಗಿಸಲು, ಅಮೆರಿಕಾ ಏನನ್ನು ಮಾಡಲೂ ಹಿಂಜರಿಯಲಿಲ್ಲ. ಅಮೆರಿಕಾದ ಅಧ್ಯಕ್ಷರಾಗಿದ್ದ ಐಸನ್ ಹೋವರ್ ಕಾಲದಿಂದ ಪ್ರಾರಂಭವಾದ ಈ ಅಮೆರಿಕನ್ನರ ಪ್ರವೇಶ, ಕೆನಡಿ ಮತ್ತು

ಜಾನ್ಸನ್ನರ ಕಾಲದಲ್ಲಿ ಬೆಳೆದು, ನಿಕ್ಸನ್‌ರ ಈಗಿನ ಆಡಳಿತದಲ್ಲಿ ಒಂದು ಘಟ್ಟವನ್ನು ತಲುಪಿದೆ. ಪ್ರಜಾಪ್ರಭುತ್ವದ ತತ್ವಗಳಿಗೆ ಪ್ರಾಧಾನ್ಯ ಕೊಡುವ ಅಥವಾ ಕೊಡುತ್ತೇನೆಂದು ಹೇಳಿಕೊಳ್ಳುವ ಅಮೆರಿಕಾ ಸರ್ಕಾರ ಉದ್ದಕ್ಕೂ ಮಿಲಿಟರಿ ವ್ಯಕ್ತಿಗಳನ್ನೇ ಅಧಿಕಾರಕ್ಕೆ ದಕ್ಷಿಣ ವಿಯಟ್ನಾಂನಲ್ಲಿ ತಂದಿತು. ೧೯೬೭ರಲ್ಲಿ ದಕ್ಷಿಣ ವಿಯಟ್ನಾಂನಲ್ಲಿ ಚುನಾವಣೆಗಳು ನಡೆದು, ನುಯೇನ್-ವಾನ್-ಥ್ಯೂ (Nguyen–Van–Theu) ಅಧ್ಯಕ್ಷರಾದರು. ಈ ಎಲ್ಲಾ ಸರ್ಕಾರಗಳು ಅಮೆರಿಕನ್ನರ ನೆರವಿನಿಂದ ಕಮ್ಯುನಿಸ್ಟರ ಚಟುವಟಿಕೆಗಳನ್ನು ದಕ್ಷಿಣದಲ್ಲಿ ಹತ್ತಿಕ್ಕಲು ಅಸಹಾಯಕವಾದವು. ಅಮೆರಿಕನ್ ಸೇನೆ ಉತ್ತರ ವಿಯಟ್ನಾಂನ ಕೈಗಾರಿಕೆಗಳ ಮೇಲೆ, ಸಾರಿಗೆ ಸಂಪರ್ಕಗಳ ಮೇಲೆ ಬಾಂಬು ಹಾಕುವುದು, ಬೆಳೆಗಳನ್ನು ನಾಶಮಾಡುವುದು ಮತ್ತು ವಿಷಪೂರಿತ ರಾಸಾಯನಿಕ ವಸ್ತುಗಳನ್ನು ಉಪಯೋಗಿಸುವುದೇ ಮೊದಲಾದ ವಿಧಾನಗಳಿಂದ ಉತ್ತರ ವಿಯಟ್ನಾಂ ಮತ್ತು ದಕ್ಷಿಣ ವಿಯಟ್ನಾಂನಲ್ಲಿ ಪ್ರಬಲರಾಗುತ್ತಿದ್ದ ವಿಯಟ್-ಕಾಂಗ್ (Viet-kong) ಕಮ್ಯುನಿಸ್ಟರನ್ನು ಹತ್ತಿಕ್ಕಲಾಗಲಿಲ್ಲ. ಈಗ್ಗೆ ಕೆಲವು ತಿಂಗಳುಗಳ ಹಿಂದೆ ಅಮೆರಿಕಾವು ಉತ್ತರ ವಿಯಟ್ನಾಂ ಬಂದರ ಮೇಲೆ ದಿಗ್ಬಂಧವನ್ನು ಹೇರಿತು. ಉತ್ತರ ವಿಯಟ್ನಾಂ ಕಮ್ಯುನಿಸ್ಟರನ್ನು ಸೋಲಿಸಬೇಕೆನ್ನುವ ಅಮೆರಿಕಾದ ಎಲ್ಲಾ ಪ್ರಯತ್ನಗಳು ವಿಫಲವಾದ್ದರಿಂದ, ಈಗ ಅವರಿಗೆ ಸಿಗುತ್ತಿರುವ ರಷ್ಯಾದ ಶಸ್ತ್ರಾಸ್ತ್ರಗಳನ್ನು ತಪ್ಪಿಸುವುದಕ್ಕೆ ಬಂದರುಗಳನ್ನು ನಿರ್ಬಂಧಿಸಲು ಆಜ್ಞೆ ಹೊರಡಿಸಿತು. ಉತ್ತರ ವಿಯಟ್ನಾಂನ ಹೈಫಾಂಗ್ ಬಂದರಿನ ಮೂಲಕವೇ ರಷ್ಯಾದ ಶಸ್ತ್ರಾಸ್ತ್ರಗಳು ಬರುವುದರಿಂದ ಅದನ್ನು ಇಡಿಯಾಗಿ ನಿರ್ಬಂಧಿಸುವ ವಿಚಾರವನ್ನು ಅಮೆರಿಕಾ ಯೋಚಿಸಿತು. ಅದಕ್ಕೆ ಹೋಗುವ ದಾರಿಯಲ್ಲಿ ಮದ್ದು

ಗಳನ್ನು ಸುರಂಗದಲ್ಲಿ ಇಡುವುದು ಇದರ ಉದ್ದೇಶ. ಇಂತಹ ಉಗ್ರ ಕ್ರಮಗಳಿಂದ ಅಮೆರಿಕಾ ಮೂರನೆ ಮಹಾಯುದ್ಧಕ್ಕೆ ನಾಂದಿ ಹಾಕಿದಂತೆಯೇ ಸರಿ. ಅಮೆರಿಕಾದಂತೆ ರಷ್ಯಾವು ಈ ವಿಷಯದಲ್ಲಿ ತಲೆಕೆಡಿಸಿಕೊಂಡಿದ್ದರೆ, ಇಷ್ಟು ಹೊತ್ತಿಗೆ ಯುದ್ಧದ ಕಿಡಿಗಳು ಹಾರಬಹುದಿತ್ತು. ಉತ್ತರ ವಿಯಟ್ನಾಂನ ಬಂದರುಗಳಿಗೆ ಅನ್ಯದೇಶಗಳ ಹಡಗುಗಳು ಹೋಗದಂತೆ ಸುರಂಗ ಹಾಕುವ ಬಗ್ಗೆ ಅಮೆರಿಕಾ ಕೈಗೊಂಡ ೧೯೭೨ರ ಮೇ ತಿಂಗಳಿನ ಈ ಏಕಪಕ್ಷೀಯ ನಿರ್ಣಯ ಅನ್ಯಾಯದಿಂದ ಕೂಡಿದೆಯೆಂದು ರಷ್ಯಾ ವ್ಯಕ್ತಪಡಿಸಿತು. ಅಮೆರಿಕಾಗೆ ಅಂತಹ ಅಧಿಕಾರವಿಲ್ಲ. ಎರಡನೇ ರಾಷ್ಟ್ರಗಳ ಹಡಗುಗಳ ಹಕ್ಕನ್ನು ಅದು ಕಸಿದುಕೊಳ್ಳಲಾರದು. ಅಧಿಕಾರವಿಲ್ಲದೆ ಹಾಗೆ ಮಾಡುವುದು ಸಮುದ್ರಗಳ್ಳತನವೆಂದು ಖಂಡಿಸಲಾಯಿತು. ಹೀಗೆ ನಾನಾ ರೀತಿಗಳಿಂದ ಮಿಲಿಟರಿ ಶಕ್ತಿಯನ್ನು ಬಳಸಿಕೊಂಡು ಸುಮಾರು ಎರಡು ದಶಕಗಳಿಂದಲೂ ಹೋರಾಡುತ್ತಿದ್ದರೂ, ಈ ಯುದ್ಧಗಳಲ್ಲಿ ಯಾರಿಗೂ ಜಯ ಸಿಗದೆ, ಅಮೆರಿಕಾವು ಕೆಸರಿನಲ್ಲಿ ಹೂತುಕೊಂಡ ಆನೆಯಂತಾಗಿದೆ.

೧೯೬೯ರಲ್ಲಿ ದಕ್ಷಿಣವಿಯಟ್ನಾಂನಲ್ಲಿ ೫,೪೦,೦೦೦ ಅಮೆರಿಕನ್ ಸೈನಿಕರು ಹೋರಾಡುತ್ತಿದ್ದರು. ೧೯೭೦ರ ಹೊತ್ತಿಗೆ ಅಮೆರಿಕಾ ೪೦,೦೦೦ ಯೋಧರನ್ನು ಈ ಯುದ್ಧದಲ್ಲಿ ಕಳೆದುಕೊಂಡಿತ್ತು. ಅಲ್ಲಿಯವರೆಗೆ ಅದು ಈ ಯುದ್ಧಕ್ಕಾಗಿ ಮಾಡಿದ ಖರ್ಚು ೭೫,೦೦೦ ಕೋಟಿ ರೂಪಾಯಿಗಳು. ೧೯೬೫ರ ಮೊದಲ ಭಾಗದಿಂದ ಆಗಸ್ಟ್ ೧೯೭೨ರ ವರೆಗೆ ಅಮೆರಿಕಾ ವಿಯಟ್ನಾಂನಲ್ಲಿ ಬಳಸಿದ ಸಿಡಿಮದ್ದುಗಳ ಒಟ್ಟು ತೂಕ ೭,೫೫೦,೦೦೦ ಟನ್ನುಗಳಷ್ಟಾಗುತ್ತದೆ. ಅಂದರೆ ಎರಡನೇ ಮಹಾಯುದ್ಧದಲ್ಲಿ ಮಿತ್ರರಾಷ್ಟ್ರಗಳು ಉಪಯೋಗಿಸಿದ್ದಕ್ಕಿಂತ 3½ ಪಟ್ಟು ಹೆಚ್ಚಿನದು. ಇಷ್ಟೆಲ್ಲಾ ಮಿಲಿಟರಿ

ಬಲವನ್ನು ವೆಚ್ಚಮಾಡಿದರೂ, ಅಮೇರಿಕಾ ತನ್ನ ಧೋರಣೆಯಲ್ಲಿ ಜಯ ಪಡೆಯಲಿಲ್ಲ. ಉತ್ತರ ವಿಯಟ್ನಾಮೀಯರು ವೀರಾವೇಶ ದಿಂದ ಹೋರಾಡುತ್ತಲೇ ಇದ್ದಾರೆ. ತನ್ನ ಸೈನ್ಯಬಲದಿಂದ ಉತ್ತರ ವಿಯಟ್ನಾಮಿಯನ್ನರ ಮನೋಸ್ಥೈರ್ಯ-ಸಾಮರ್ಥ್ಯ ಮುರಿಯು ತ್ತದೆ ಎಂದು ಅಮೆರಿಕನ್ನರು ಭಾವಿಸಿದ್ದರು. ಉತ್ತರ ವಿಯಟ್ನಾಂ ಮೇಲೆ ಬಾಂಬಿನ ಮಾರಕಾಸ್ತ್ರಗಳ ದಾಳಿ ನಡೆಸಿದರು. ಅವರ ಕೈಗಾರಿಕೆಗಳನ್ನು ನಾಶಮಾಡಲು ಯತ್ನಿಸಿದರು. ಇಷ್ಟಾದರೂ ಬಗ್ಗುವವರು ವಿಯಟ್ನಾಂಯರಲ್ಲ. ಅವರ ಮನೋಸ್ಥೈರ್ಯ ಅವರಲ್ಲಿ ರುವ ಬಹು ದೊಡ್ಡ ಅಸ್ತ್ರ. ಪಟ್ಟಣಗಳಲ್ಲಿ ಕೈಗಾರಿಕೆಗಳು ಅಮೆರಿಕ ನ್ನರ ಬಾಂಬಿನ ಧಾಳಿಗೆ ತುತ್ತಾದಾಗ, ಅವುಗಳನ್ನು ಗುಹೆಗಳಿಗೆ ಸಾಗಿಸಿದರು, ಸೈನಿಕರೇ ನಿಂತು ಹೊಲ ಉತ್ತರು, ಸುಲಿದುಬೆಂಡಾ ಗಿದ್ದ ಕಾಡನ್ನು ಸವರಿ ನೆಲ ಮಾಡಿದರು. ಅಲ್ಲಲ್ಲಿ ಗುಡಿಸಲುಗಳನ್ನು ಕಟ್ಟಿ ಸೈನಿಕರ ತರಬೇತಿ ನಡೆಸಿದರು. ಬೆನ್ನಲ್ಲಿ ಒಂದು ಮೂಟೆ ಹೊತ್ತುಕೊಂಡು, ತಿಂಗಳುಗಟ್ಟಲೆ ಅರಣ್ಯದಲ್ಲಿ ಅಲೆದಾಡಿ, ವೈರಿ ಗಳನ್ನು ಸಿಕ್ಕಸಿಕ್ಕಲ್ಲಿ ತಡೆದರು. ಪರ್ವತಗಳ ಗುಹೆಗಳಲ್ಲಿರುವ ಕಾರ್ಖಾನೆಗಳಲ್ಲಿ ಆಗುತ್ತಿರುವ ಉತ್ಪಾದನೆ, ದೇಶವನ್ನು ರಕ್ಷಿಸು ತ್ತಿರುವ ರೀತಿಯನ್ನು ನೋಡಿ ಬೆರಗಾದ ಅಮೆರಿಕಾದ ಪತ್ರಕರ್ತ ರೊಬ್ಬರು ಈ ಸ್ವಧರ್ಮನಿಷ್ಠೆಗೆ ಸಮಾನ ಉದಾಹರಣೆ ಜಗತ್ತಿನಲ್ಲಿ ಇನ್ನೊಂದು ಕಡೆ ಸಿಗದು ಎಂದು ಬರೆದಿದ್ದಾರೆ. ಬಾಂಬ್ ಬಿದ್ದು ಆದ ಹೊಂಡಗಳಿಗೆ ಕೈಯಿಂದ ಮಣ್ಣೆತ್ತಿ ತುಂಬಿ ಸರಿಮಾಡುವ ಉತ್ತರ ವಿಯಟ್ನಾಮಿಯರ ಶ್ರದ್ಧೆಯನ್ನು ಇನ್ನೊಬ್ಬರು ಹೃದಯಂ ಗಮವಾಗಿ ಬರೆದಿದ್ದಾರೆ. ಇದಕ್ಕೆ ತದ್ವಿರುದ್ಧ ದಕ್ಷಿಣ ವಿಯಟ್ನಾಮಿ ಯರ ಸ್ಥೈರ್ಯ. ವಿಮಾನಗಳ ರಕ್ಷಣೆಯಿಲ್ಲದೆ ಮುಂದಡಿಯಿಡಲು ಧೈರ್ಯ ಸಾಲದು ವಿಯಟ್ನಾಮಿಯರ ಕಲ್ಯಾಣಕ್ಕೆಂದು ಅಮೆರಿಕಾ

ಒದಗಿಸುವ ಹಣ ಇಲ್ಲಿನ ನಾಯಕರ ವೈಭವಪೂರ್ಣ ಜೀವನಕ್ಕೆ ಮುಡಿಪಾಗಿರುವಂತಿದೆ. ಈ ಬಗ್ಗೆ ಅಮೆರಿಕಾದ ಪತ್ರಿಕಾವರದಿಗಾರ ಜಾಕ್ ಅಂಡರ್‌ಸನ್ ಸುಂದರವಾಗಿ ಬರೆದಿದ್ದಾರೆ.

೧೯೬೮ ರಿಂದೀಚೆಗೆ ಈ ಯುದ್ಧವನ್ನು ಮುಕ್ತಾಯಗೊಳಿಸಲು ಅಮೆರಿಕಾದ ಅಧ್ಯಕ್ಷರಾಗಿದ್ದ ನಿಕ್ಸನ್ನರು ಅನೇಕ ಯೋಜನೆಗಳನ್ನು ಮುಂದಿಟ್ಟರು. ಪ್ಯಾರಿಸ್ ನಗರದಲ್ಲಿ ಉತ್ತರವಿಯಟ್ನಾಂ, ದಕ್ಷಿಣ ವಿಯಟ್ನಾಮಿನ ಕಮ್ಯುನಿಸ್ಟರು ಮತ್ತು ಅಮೇರಿಕಾ ಸರ್ಕಾರಗಳ ನಡುವೆ ಶಾಂತಿ ಸಂಧಾನದ ಮಾತುಕತೆಗಳು ಆರಂಭವಾದವು. ಕುಂಟುತ್ತಾ ಸಾಗಿದ ಈ ಮಾತುಕತೆಗಳು ಇಲ್ಲಿಯವರೆಗೆ ಏನನ್ನೂ ಸಾಧಿಸಿದಂತೆ ಕಾಣಬರುವುದಿಲ್ಲ. ಅಕ್ಟೋಬರ್ ೧೯೭೦ರಲ್ಲಿ ಪ್ಯಾರಿಸ್‌ನಲ್ಲಿ ೧೬೩ನೇ ಶಾಂತಿ ಸಭೆ ನೆರವೇರಿತು. ದಕ್ಷಿಣ ವಿಯಟ್ನಾಂನ ಹಂಗಾಮಿ ಕ್ರಾಂತಿಕಾರಿ ಸರ್ಕಾರ (ಕಮ್ಯೂನಿಸ್ಟರ ವಶದಲ್ಲಿರುವ)ದ ಪ್ರತಿನಿಧಿ ಶ್ರೀಮತಿ ನುಯೇನ್-ಥಿ-ಬಿನ್‌ರು, ಅಮೆರಿಕಾವು ದಕ್ಷಿಣವಿಯಟ್ನಾಂನಲ್ಲಿ ಹೊಸ ಸರ್ಕಾರ ರಚಿಸಿ, ಅಲ್ಲಿ ಕಮ್ಯುನಿಸ್ಟರಿಗೆ ಮಾನ್ಯತೆಕೊಡುವ ಪಕ್ಷಕ್ಕೆ ತಮ್ಮ ಸರ್ಕಾರ ದಕ್ಷಿಣ ವಿಯಟ್ನಾಂನಲ್ಲಿ ಅಧಿಕಾರಕ್ಕೆ ಬರಲು ನಡೆಸುತ್ತಿರುವ ಹೋರಾಟವನ್ನು ಮುಕ್ತಾಯಮಾಡುವುದಾಗಿ ಹೇಳಿದರು. ಆದರೆ ದಕ್ಷಿಣ ವಿಯಟ್ನಾಂ ಮತ್ತು ಅಮೆರಿಕಾಗಳು, ಕಮ್ಯುನಿಸ್ಟರು ಅಧಿಕಾರಕ್ಕೆ ಬರಲು ಯೋಚಿಸಿರುವ ಉಪಾಯವೆಂದು ಈ ಸಲಹೆಯನ್ನು ತಳ್ಳಿ ಹಾಕಿದವು. ಯುದ್ಧ ತಕ್ಷಣ ನಿಲ್ಲಿಸಿ, ಕಮ್ಯುನಿಸ್ಟರ ಮತ್ತು ಸೈಗಾನ್ ಸರ್ಕಾರಗಳ ನಡುವೆ ನೇರವಾದ ಮಾತುಕತೆ ಜರುಗಬೇಕೆಂದು ಅವರ ಅಭಿಪ್ರಾಯ. ನುಯೇನ್-ವಾನ್-ಥ್ಯೂ ಸರ್ಕಾರವನ್ನು ದಕ್ಷಿಣವಿಯಟ್ನಾಂನಲ್ಲಿ ಕಿತ್ತುಹಾಕಿ, ಸಂಯುಕ್ತ

ರಂಗದ ಮಂತ್ರಿಮಂಡಳವನ್ನು ರಚಿಸುವುದೇ ಉಳಿದಿರುವ ದಾರಿ ಎಂದು ಕಮ್ಯುನಿಸ್ಟರು ಸ್ಪಷ್ಟಪಡಿಸಿದರು.

ಪ್ಯಾರಿಸ್ಸಿನ ಈ ಮಾತುಕತೆಗಳ ಜೊತೆ ಅಮೆರಿಕಾದ ಅಧ್ಯಕ್ಷ ನಿಕ್ಸನ್ನರು ದಕ್ಷಿಣ ವಿಯಟ್ನಾಂನಿಂದ ಅಮೆರಿಕನ್ ಸೈನ್ಯವನ್ನು ಸ್ವದೇಶಕ್ಕೆ ಹಂತ ಹಂತವಾಗಿ ವಾಪಸ್ಸು ಕರೆಸಿಕೊಳ್ಳುತ್ತಿದ್ದಾರೆ. ಮೇ ೧೯೭೨ರ ಹೊತ್ತಿಗೆ ಶೇಕಡ ೮೭%ರಷ್ಟು ಸೇನೆ ಹಿಂತಿರುಗಿತ್ತು. ಆದರೂ ಉತ್ತರವಿಯಟ್ನಾಂನ ಮೇಲಿನ ಬಾಂಬ್ ಧಾಳಿ ಸಂಪೂರ್ಣವಾಗಿ ನಿಂತಿಲ್ಲ. ಇದರ ಜೊತೆಗೆ ನಿಕ್ಸನ್ನರು ವಿಯಟ್ನಾಮೀಕರಣದ (Vietnamization) ಯೋಜನೆಯೊಂದನ್ನು ಜಾರಿಗೆ ತಂದರು. ಇದರ ಪ್ರಕಾರ ಹೋರಾಟದ ಜವಾಬ್ದಾರಿಯನ್ನು ಸಂಪೂರ್ಣವಾಗಿ ದಕ್ಷಿಣವಿಯಟ್ನಾಮಿಯರಿಗೆ ವಹಿಸುವುದು. ಈ ನೀತಿಯು ಅಷ್ಟು ಫಲಪ್ರದವಾಗಿ ಕಂಡುಬರಲಿಲ್ಲ. ಈ ಯುದ್ಧವನ್ನು ಕೊನೆಗಾಣಿಸಲು ಹೆಚ್ಚಿನ ಅಮೆರಿಕನ್ ಜನತೆ ತನ್ನ ಸರ್ಕಾರವನ್ನು ಕೇಳಿಕೊಳ್ಳುತ್ತಲೆ ಇದೆ. ಇತ್ತೀಚಿಗೆ ನಿಕ್ಸನ್ನರು ಚೀನಾ ಮತ್ತು ರಷ್ಯಾಗಳಿಗೆ ಭೇಟಿಕೊಟ್ಟು ಸೌಹಾರ್ದತೆ ಪ್ರಕಟಮಾಡಿದರು. ಇದು ಯುದ್ಧವನ್ನು ಕೊನೆಗಾಣಿಸಲು ಸಹಾಯವಾದೀತು.

ಹಾಗಾದರೆ ಇಂದಿನ ಪರಿಸ್ಥಿತಿಯನ್ನು ಅದರಿಂದ ಪಾರಾಗುವ ಬಗೆ–ಹೇಗೆ? ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಮಾತುಕತೆ ಮುಂದುವರಿಸಬೇಕು. ರಷ್ಯಾ ಸಹ ಇದಕ್ಕೆ ಬೆಂಬಲ ನೀಡಿದೆ. ವಿಯಟ್ನಾಮಿಯರಿಗೆ ಅವರ ಭವಿಷ್ಯ ನಿರ್ಧರಿಸಿಕೊಳ್ಳುವ ಹಕ್ಕನ್ನು ಮೊದಲು ಕೊಟ್ಟರೆ ಸಮಸ್ಯೆ ತಾನಾಗಿಯೇ ಪರಿಹಾರವಾಗುತ್ತದೆ. ಅದನ್ನು ಮರೆತು ಅಮೆರಿಕಾವು ಒಣಪ್ರತಿಷ್ಠತೆಗೆ ಒಳಗಾಗಿ ಯುದ್ಧ ವಿಸ್ತರಣೆ ಮಾಡುವುದು ಬೆಂಕಿಯೊಡನೆ ಚೆಲ್ಲಾಟವಾಡಿದಂತೆಯೇ ಸರಿ. ಇಂತಹ ನಿರ್ಣಯಕ್ಕೆ ಭಾರತವೂ ಸಹಾಯಮಾಡಬಲ್ಲದು.

ಅಂತರರಾಷ್ಟ್ರೀಯ ನಿಯಂತ್ರಣ ಮಂಡಳಿಯ ಅಧ್ಯಕ್ಷಸ್ಥಾನದಲ್ಲಿರುವ ಭಾರತ, ರಷ್ಯಾ ಮತ್ತು ಬ್ರಿಟನ್ ಈ ಬಗ್ಗೆ ಆಸ್ತೆ ವಹಿಸಿ ಸಂಭವನೀಯ ಮಹಾವಿಪ್ಲವವನ್ನಿಲ್ಲಿ ತಪ್ಪಿಸಬಹುದೆಂದು ನಂಬಬಹುದು. ಎರಡನೆ ಮಹಾಯುದ್ಧ ಮುಗಿದನಂತರ ಮೂರನೆಯ ಸಂಭವಿಸದಂತೆ, ಜಾಗೃತಿಕ ರಾಷ್ಟ್ರಗಳು ಇದುವರೆಗೆ ಅನೇಕ ಉಪಾಯಗಳನ್ನು ಯೋಜಿಸುತ್ತಿದೆ. ಆದರೆ ಇಂದಿನ ಕಠಿಣ ಪರಿಸ್ಥಿತಿಯಲ್ಲಿ ದಿಟ್ಟತನದ ನಿರ್ಣಯದ ಅಗತ್ಯವಿದೆ. ಸಾಧ್ಯವಾದರೆ ತಕ್ಕಮಟ್ಟಿಗೆ ಅಮೆರಿಕಾದ ಗೌರವವನ್ನು ಉಳಿಸಬೇಕು. ಇಂತಹ ಪರಿಹಾರ ಸೂತ್ರ ಕಂಡುಹಿಡಿಯುವುದು ಜಾಗೃತಿಕ ರಾಷ್ಟ್ರಗಳಿಗೆ ಕಷ್ಟವೇನಲ್ಲ.

ಜಗತ್ತಿನಲ್ಲಿಯೇ ಬಲಾಢ್ಯವಾಗಿರುವ ಅಮೆರಿಕೆಯಾ ಸೈನ್ಯ ತನ್ನ ಬಲವನ್ನೆಲ್ಲಾ ಒಂದುಗೂಡಿ ಪ್ರಯತ್ನಿಸಿದರೂ ಉತ್ತರವಿಯಟ್ನಾಂನ ಸಾಹಸ ಸೇನೆಯನ್ನು ಸೋಲಿಸುವುದು ಸಾಧ್ಯವಾಗಿಲ್ಲ. ವಿಯಟ್ನಾಂ ಸಮಸ್ಯೆಯನ್ನು ಶಾಂತಿಯಿಂದ ಪರಿಹರಿಸಬಹುದಲ್ಲದೆ, ಯುದ್ಧದಿಂದಲ್ಲ. ಅಮೆರಿಕಾ ಅಲ್ಲಿಂದ ಕಾಲ್ತೆಗೆಯುವುದೇ ಮೇಲೆಂದು ವಿಶ್ವದ ಅನೇಕ ರಾಷ್ಟ್ರಗಳು ಅಭಿಪ್ರಾಯ ಪಟ್ಟಿವೆ. ಅಮೆರಿಕಾ ರಷ್ಯಾ ಮತ್ತು ಚೀನಾ ದೇಶಗಳೊಡನೆ ಇತ್ತೀಚಿಗೆ ಗಳಿಸಿಕೊಂಡ ಸ್ನೇಹ ಸೌಹಾರ್ದತೆಯ ಸಂಕೇತವಾದ ಸಂಪರ್ಕಗಳನ್ನು ಈ ಸಮಸ್ಯೆ ಬಗೆಹರಿಸುವ ದಿಶೆಯಲ್ಲಿ ಬಳಸಿಕೊಳ್ಳಬಹುದು. ರಷ್ಯಾ, ಚೀನಾಗಳ ಬೆಂಬಲವಿಲ್ಲದೆಯೇ ಏಕಪಕ್ಷೀಯವಾಗಿ ವಿಯಟ್ನಾಂ ಸಮಸ್ಯೆ ಬಗೆಹರಿಯದು. ಪರದೇಶಗಳ ಪ್ರಭಾವಗಳಿಗೆ ಒಳಗಾದ ವಿಯಟ್ನಾಂ ಇಂದು ಈ ರೀತಿಯಾಗಿ ಅಂತರರಾಷ್ಟ್ರೀಯ ರಾಜಕೀಯ ಚದುರಂಗದಲ್ಲಿ ನಡೆದಾಡುತ್ತಿರುವ ಆಟದ ಕಾಯಾಗಿದೆ ಎಂದು ಹೇಳಬಹುದು.

ಇಲ್ಲಿಯವರೆವಿಗೆ ವಿಯಟ್ನಾಂನ ಅಂತರರಾಷ್ಟ್ರೀಯ ಸಮಸ್ಯೆಯನ್ನು ಚರ್ಚಿಸಿದ್ದಾಯಿತು. ಈಗ ಗಾಜಿಳರಿಂದ ಈಚೆಗೆ ನಡೆದ

ಆಂತರಿಕ ಬದಲಾವಣೆಗಳ ವಿಷಯವನ್ನು ಸ್ವಲ್ಪ ವಿವೇಚಿಸೋಣ. ೧೯೫೪ರಲ್ಲಿ ವಿಯಟ್ನಾಂ ಜಿನಿವಾ ಒಪ್ಪಂದದ ಪ್ರಕಾರ ಇಬ್ಭಾಗವಾಯಿತು. ಉತ್ತರ ವಿಯಟ್ನಾಂ ಹೋ-ಚಿ-ಮಿನ್ನರೇ ಮೊದಲಾದ ಕಮ್ಯುನಿಸ್ಟರ ಕೈಸೇರಿತು. ದಕ್ಷಿಣವಿಯಟ್ನಾಂನಲ್ಲಿ ಬಾವೋದಾಯ್ (Bao-Dai)ರ ನೇತೃತ್ವದಲ್ಲಿ ಕಮ್ಯುನಿಸ್ಟರ ಸರ್ಕಾರವೊಂದು ರಚಿಸಲಾಯಿತು,

ಟಾಂಗ್-ಕಿಂಗ್ ಪ್ರದೇಶ ಹಾಗೂ ಉತ್ತರ ಅನ್ನಾಂ ಪ್ರದೇಶಗಳನ್ನು ಒಂದುಗೂಡಿಸಿ ೧೭ನೇ ಸಮಾನಾಂತರ ನಿಸ್ಸೇನಿಕೃತ ರೇಖೆಗೆ ಉತ್ತರದಲ್ಲಿ ಉತ್ತರವಿಯಟ್ನಾಮನ್ನು ಸೃಷ್ಟಿಸಲಾಯಿತು. ಈ ಪ್ರದೇಶದಲ್ಲಿ ಮೊದಲಿನಿಂದ ಕಮ್ಯೂನಿಸ್ಟ್ ಸಿದ್ಧಾಂತಗಳ ಆಧಾರದ ಮೇಲೆ, ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಬೆಳವಣಿಗೆಗಳು ನಡೆಯುತ್ತಾ ಸಾಗಿವೆ. ಉತ್ತರವಿಯಟ್ನಾಂನಲ್ಲಿ ಖಾಸಗೀ ಆಸ್ತಿ ಹೊಂದಲು ಅವಕಾಶವಿಲ್ಲ. ಸಾಮೂಹಿಕ ಕೃಷಿ ಕ್ಷೇತ್ರಗಳನ್ನು ಸೃಷ್ಟಿಸಲಾಯಿತು. ಅದರ ವಿರುದ್ಧ ರೈತರು ನಡೆಸಿದ ಚಳುವಳಿಯಲ್ಲಿ ಲಕ್ಷಾಂತರ ಜನ ಮಡಿದರು. ಹಾಗೆಯೇ ಮುಖ್ಯವಾದ ಎಲ್ಲಾ ಕೈಗಾರಿಕೆಗಳು ಸರ್ಕಾರದ ಕೈಯಲ್ಲಿವೆ.

ಕಮ್ಯೂನಿಸ್ಟ್ ಪಾರ್ಟಿಯದೇ ಉತ್ತರವಿಯಟ್ನಾಂನಲ್ಲಿ ಸರ್ವಾಧಿಕಾರ. ಈ ಪಕ್ಷದ ಪಾಲಿಟ್‌ಬ್ಯೂರೋ ಎಂಬ ಸಮಿತಿ ಎಲ್ಲಾ ಸಮಸ್ಯೆಗಳ ನೀತಿಗಳ ಬಗ್ಗೆ ಅಂತಿಮ ತೀರ್ಮಾನಗಳನ್ನು ಕೈಗೊಳ್ಳುತ್ತದೆ. ಈ ತೀರ್ಮಾನಗಳಿಗೆ ಪಕ್ಷದ ಕೇಂದ್ರ ಸಮಿತಿ ಒಪ್ಪಿಗೆ ನೀಡಬೇಕು. ಪ್ಯಾಲಿಟ್‌ಬ್ಯೂರೋದಲ್ಲಿ ಹನ್ನೊಂದು ಮಂದಿ ಸದಸ್ಯರಿದ್ದಾರೆ. ಹೋ-ಚಿ-ಮಿನ್ನರು ಈ ಸಮಿತಿಯ ಅಧ್ಯಕ್ಷರಾಗಿದ್ದರು. ಅವರ ಮರಣಾನಂತರ ಪಕ್ಷದ ಸೂತ್ರಗಳು ಒಬ್ಬರ

ಕೈಯಲ್ಲಿರದೆ, ಎಲ್ಲರ ಕೈಯಲ್ಲೂ ಅಂದರೆ ಪ್ಯಾಲಿಟ್‌ಬ್ಯೂರೋ ಸದಸ್ಯರ ಕೈಯಲ್ಲಿದೆ.

ಆರ್ಥಿಕ ಪ್ರಗತಿಗೆ ಹಾಗೂ ಯುದ್ಧ ನಡೆಸಲು ಉತ್ತರವಿಯಟ್ನಾಂ ರಷ್ಯಾ, ಚೀನಾ ಮತ್ತು ಪೂರ್ವ ಯೂರೋಪಿಯನ್ ರಾಷ್ಟ್ರಗಳಿಂದ ಸಹಾಯ ಪಡೆಯುತ್ತಿದೆ. ಆದರೂ ಚೀನಾ–ರಷ್ಯಾಗಳ ನಡುವೆ ಬೆಳೆದಿರುವ ವೈಮನಸ್ಯದಲ್ಲಿ, ಜಗಳದಲ್ಲಿ ಉತ್ತರವಿಯಟ್ನಾಂ ತಟಸ್ಥ ನೀತಿಯನ್ನು ಅನುಸರಿಸುತ್ತಿದೆ.

ಉತ್ತರವಿಯಟ್ನಾಂನ ಆರ್ಥಿಕ ರಂಗದಲ್ಲಿ ಕೃಷಿಯೇ ಪ್ರಾಧಾನ್ಯ. ಬತ್ತವೇ ಮುಖ್ಯ ಬೆಳೆ. ದೇಶಕ್ಕೆ ಸಾಕಾಗುವಷ್ಟು ಭತ್ತವನ್ನು ಬೆಳೆಯದೆ ಇರುವುದರಿಂದ ಪರದೇಶಗಳಿಂದ ಆಹಾರವನ್ನು ತರಿಸಿ ಕೊಳ್ಳುತ್ತಿದೆ. ಉತ್ತರವಿಯಟ್ನಾಂನಲ್ಲಿ ಟಿನ್, ಕಬ್ಬಿಣ, ಚಿನ್ನ, ಜಿಂಕ್, ಸಟ್ಲುಪ್ಪು, ಗಂಧಕ, ಮ್ಯಾಂಗನೀಸ್, ಕ್ರೋಮಿಯಂ ಮೊದಲಾದ ಖನಿಜವಸ್ತುಗಳು ದೊರೆಯುತ್ತವೆ. ಪರದೇಶಗಳು ಪ್ರಮುಖವಾಗಿ ಕಮ್ಯುನಿಸ್ಟ್ ದೇಶಗಳ ನೆರವಿನಿಂದ ಉಕ್ಕು ಕಬ್ಬಿಣ ಕಾರ್ಖಾನೆ, ಹತ್ತಿ ಗಿರಣಿಗಳು, ಯಂತ್ರತಯಾರಿಸಲು ಬೇಕಾದ ಸಲಕರಣೆಗಳ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ- ಯುದ್ಧದ ಕಾರಣದಿಂದ ಬಾಂಬಿನ ಧಾಳಿಯಿಂದ ಆರ್ಥಿಕ ಪ್ರಗತಿ ಕುಂಟುತ್ತಾ ಸಾಗಿದೆ.

ದಕ್ಷಿಣವಿಯಟ್ನಾಂ ೧೯೫೪ರಿಂದ ಅನೇಕ ರೀತಿಯ ರಾಜಕೀಯ ಆಂದೋಳನಗಳಿಗೆ ಗುರಿಯಾಗಿದೆ. ೧೯೫೫ರಲ್ಲಿ ಬಾವೋದಾಯ್‌ನನ್ನು ಅಧಿಕಾರದಿಂದ ತಳ್ಳಿ, ಪ್ರಧಾನಿಯಾಗಿದ್ದ ಡೀಂ ಡಯಂ (Diem-Diem) ತಾನೇ ಅಧಿಕಾರದ ಸೂತ್ರಗಳನ್ನೆಲ್ಲಾ ಹಿಡಿದ. ಇವನು ಅಧ್ಯಕ್ಷನಾಗಿ ೧೯೬೩ರ ವರೆಗೆ ಅಧಿಕಾರ ನಡೆಸಿದ. ಆ ವರ್ಷ ಅವನ ಕೊಲೆಯಾಯಿತು. ಇದಕ್ಕೆ ಕಾರಣ ಡಯಂನ ದಬ್ಬಾಳಿಕೆ

ಹಾಗೂ ನಿರಂಕುಶ ಆಡಳಿತ. ೧೯೬೩ ರಿಂದ ೧೯೬೭ ರವರೆಗೆ ದಕ್ಷಿಣವಿಯಟ್ನಾಂನಲ್ಲಿ ರಾಜಕೀಯ ಅಸ್ಥಿರತೆ ನೆಲಸಿತು. ಹೆಚ್ಚಿನ ಜನಾಭಿಪ್ರಾಯ ಪಡೆಯಲು ಅಸಹಾಯಕವಾದ ಮಿಲಿಟರಿ ಸಹಾಯಕರು ಅಧಿಕಾರವನ್ನು ನಡೆಸಿದರು. ಜನಾದರಣೆ ಗಳಿಸಿಕೊಳ್ಳಲು, ೧೯೬೬ರಲ್ಲಿ ಮಿಲಿಟರಿ ಸರ್ಕಾರದ ಮುಖ್ಯಸ್ಥರಾದ ಜನರಲ್ ಥ್ಯೂ (General Thieu) ಮತ್ತು ಏರ್‌ವೈಸ್ ಮಾರ್ಷಲ್ ಕಾವೋ-ಕಿ (Kao-Ky) ಎಂಬುವವರು ಚುನಾವಣೆಗಳನ್ನು ನಡೆಸಿ, ಸಂವಿಧಾನ ಸಭೆ (Constitutional Assembly) ಯನ್ನು ಕರೆದರು. ಈ ಸಭೆ ಪ್ರಜಾಪ್ರಭುತ್ವದ ಸೂತ್ರಗಳ ಆಧಾರದ ಮೇಲೆ ರಚಿತವಾದ ನವೀನ ಸಂವಿಧಾನವನ್ನು ಅಂಗೀಕರಿಸಿತು. ಗ್ರಾಮ ಪಂಚಾಯಿತಿಗಳಿಗೆ, ಜಿಲ್ಲಾ ಸಭೆಗಳಿಗೆ ಚುನಾವಣೆಗಳು ನಡೆದವು. ಸೆಪ್ಟೆಂಬರ್ ಮತ್ತು ಅಕ್ಟೋಬರ್ ೧೯೬೭ರಲ್ಲಿ ರಾಷ್ಟ್ರೀಯ ಚುನಾವಣೆಗಳು ನಡೆದು, ಎರಡೂ ಸಭೆಗಳನ್ನು ಒಳಗೊಂಡ ಪಾರ್ಲಿಮೆಂಟಿಗೆ ಸದಸ್ಯರು ಚುನಾಯಿತರಾದರು. ನುಯೇನ್-ವಾನ್-ಥ್ಯೂ (Nguyen-van-Thieu)ಅಧ್ಯಕ್ಷರಾಗಿಯೂ, ನುಯೇನ್ ಕಾವೋ-ಕಿ (Nguyen-Kao-Ky) ಉಪಾಧ್ಯಕ್ಷರಾಗಿಯೂ, ಚುನಾಯಿತರಾದರು. ಅಂದಿನಿಂದ ಇಲ್ಲಿಯವರೆಗೆ ಥ್ಯೂ ಅವರೇ ಅಧಿಕಾರದಲ್ಲಿದ್ದಾರೆ. ಉತ್ತರವಿಯಟ್ನಾಮಿಯರು, ವಿಯಟ್‌ಕಾಂಗ್ ಕಮ್ಯೂನಿಸ್ಟರು, ಈಗ ಥ್ಯೂ ಅಧಿಕಾರದಿಂದ ಇಳಿಯಬೇಕೆಂದು ಮತ್ತು ಕಮ್ಯೂನಿಸ್ಟರನ್ನು ಒಳಗೊಂಡಂತೆ ಸರ್ಕಾರದ ರಚನೆ ದಕ್ಷಿಣವಿಯಟ್ನಾಂನಲ್ಲಿ ಆಗಬೇಕೆಂದು ಪ್ಯಾರಿಸ್ ನಗರದಲ್ಲಿ ನಡೆಯುತ್ತಿರುವ ಶಾಂತಿಮಾತುಗಳ ಸಭೆಯಲ್ಲಿ ಕೇಳುತ್ತಿದ್ದಾರೆ.

ದಕ್ಷಿಣವಿಯಟ್ನಾಂನ ಆರ್ಥಿಕ ಪ್ರಗತಿ ಅಮೆರಿಕಾ ಕೊಡುತ್ತಿರುವ ನೆರವಿನ ಮೇಲೆ ನಿಂತಿದೆ. ಅಮೆರಿಕಾ ಕೋಟ್ಯಾಂತರ ಡಾಲರ್

ಗಳನ್ನು ದಕ್ಷಿಣವಿಯಟ್ನಾಂನಲ್ಲಿ ತಂದು ಸುರಿಯುತ್ತಿದೆ. ಇಷ್ಟಾದರೂ ಯುದ್ಧದ ದೆಸೆಯಿಂದ ಆರ್ಥಿಕ ಪ್ರಗತಿ ಅಷ್ಟು ಸಮರ್ಪಕವಾಗಿ ಸಾಗುತ್ತಿಲ್ಲ. ಉತ್ತರ ವಿಯಟ್ನಾಂನಂತೆ ಇಲ್ಲೂ ಬತ್ತವೇ ಮುಖ್ಯ ಬೆಳೆ. ಜೊತೆಗೆ ರಬ್ಬರ್ ಬೆಳೆಯುತ್ತಾರೆ. ಮೀನುಗಾರಿಕೆ ಒಂದು ಮುಖ್ಯ ಕಸುಬಾಗಿದೆ. ಸಣ್ಣ ಪುಟ್ಟ ಕೈಗಾರಿಕೆಗಳು ದಕ್ಷಿಣ ವಿಯಟ್ನಾಂನಲ್ಲಿವೆ.

ಒಟ್ಟಿನಲ್ಲಿ ಆಗ್ನೇಯ ಏಷ್ಯಾದ ಶಾಂತಿಯನ್ನು ಕೆಡಿಸಿರುವ ಸಮಸ್ಯೆ ಯೆಂದರೆ ವಿಯಟ್ನಾಂ ಸಮಸ್ಯೆ. ಈ ಸಮಸ್ಯೆ ಬಗೆಹರಿದರೆ ಆಗ್ನೇಯ ಏಷ್ಯಾದಲ್ಲಿ ಶಾಂತಿ ಸ್ಥಾಪನೆಯಾದೀತು. ಇತ್ತೀಚಿನ ಪರಿಸ್ಥಿತಿಗಳು ಅಂತಹ ಶಾಂತಿ ಏರ್ಪಾಡಿಗೆ ಅನುಕೂಲಕರವಾಗಿ ಕಂಡುಬಂದಿವೆ. ವಿಯಟ್ನಾಂನ ಏಕೀಕರಣವಾಗಿ, ಎಲ್ಲಾ ಪಕ್ಷಗಳೂ ಒಪ್ಪುವ ಸರ್ಕಾರ ಅಸ್ತಿತ್ವಕ್ಕೆ ಬಂದು, ಯಾವ ಶಕ್ತಿಬಲಕ್ಕೂ ಸೇರದೆ, ಅಮೆರಿಕಾ ಮತ್ತು ರಷ್ಯಾಗಳಿಂದ ನೆರವುಪಡೆದು ಆರ್ಥಿಕ ಪ್ರಗತಿಯನ್ನು ವಿಯಟ್ನಾಂ ಗಳಿಸಿಕೊಳ್ಳುವ ಕಾಲ ಸನ್ನಿಹಿತವಾಗಿದೆ ಎಂದು ಇಂದಿನ ಅಂತರರಾಷ್ಟ್ರೀಯ ವಿದ್ಯಮಾನಗಳಿಂದ ಊಹಿಸಬಹುದಾಗಿದೆ.

ವಿಯಟ್ನಾಂ ಶಾಂತಿ ಒಪ್ಪಂದ

ವಿಯಟ್ನಾಂನಲ್ಲಿ ಶಾಂತಿ ಸ್ಥಾಪನೆ ಅನೇಕ ಬಾರಿ ಕೈತಪ್ಪಿ ಹೋಗಿತ್ತು. ಈ ಶಾಂತಿ ಸ್ಥಾಪನೆಯ ಬಗ್ಗೆ ಪ್ಯಾರಿಸ್‌ನಲ್ಲಿ ನಡೆಯುತ್ತಿದ್ದ ಮಾತುಕತೆಗಳು ಕೊನೆಗೂ ಫಲಪ್ರದವಾಗಿ ಜನವರಿ ೨೭, ೧೯೭೩ ರಂದು ಅಮೆರಿಕಾ, ಉತ್ತರ ಮತ್ತು ದಕ್ಷಿಣ ವಿಯಟ್ನಾಂ ಹಾಗೂ ದಕ್ಷಿಣ ವಿಯಟ್ನಾಂನ ತಾತ್ಕಾಲಿಕ ಕ್ರಾಂತಿ ಕಾರಿ ಸರ್ಕಾರಗಳು (ಪಿ.ಆರ್.ಜಿ) ವಿದೇಶಾಂಗ ಸಚಿವರುಗಳು ಪ್ಯಾರಿಸ್ ನಗರದಲ್ಲಿ ವಿಯಟ್ನಾಂ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿ

ದರು. ಅಮೆರಿಕಾದ ಸ್ಟೇಟ್ ಇಲಾಖೆ ಕಾರ್ಯದರ್ಶಿ ವಿಲಿಯಂ ರೋಜರ್ಸ್, ಉತ್ತರವಿಯಟ್ನಾಂನ ವಿದೇಶಾಂಗ ಸಚಿವ ನ್ಗುಯೆ-ಡಿ-ಟ್ರಿನ್ಹ್, ದಕ್ಷಿಣ ವಿಯಟ್ನಾಂನ ವಿದೇಶಾಂಗ ಕಾರ್ಯದರ್ಶಿ ಟ್ರಾನ್‌ವಾಲ್ ಲಾಂ ಮತ್ತು ಪಿ.ಆರ್.ಜಿ.ಯ ಶ್ರೀಮತಿ ನ್ಗುಯೆ-ಥಿ-ಬ್ರಿನ್ಹ್ ಅವರು ಈ ಸಭೆಯಲ್ಲಿ ಭಾಗವಹಿಸಿದ್ದರು. ಈ ಒಪ್ಪಂದದ ಫಲವಾಗಿ ಅದೇ ದಿನಸ ಮಧ್ಯರಾತ್ರಿಯಿಂದ ಸಿಡಿಗುಂಡುಗಳ ಮಾರ್ದನಿಗಳು ಅಂತ್ಯಗೊಂಡಿತು. ಕದನವಿರಾಮ ಜಾರಿಗೆ ಬಂದ ನಂತರ ೬೦ ದಿವಸಗಳೊಳಗೆ ಅಮೆರಿಕಾ ತನ್ನ ಎಲ್ಲಾ ಪಡೆಗಳನ್ನು ವಿಯಟ್ನಾಮಿನಿಂದ ಹಿಂದಕ್ಕೆ ಕರಿಸಿಕೊಳ್ಳಲು ಒಪ್ಪಿತು. ಇದಕ್ಕೆ ಪೂರಕವಾಗಿ ಸೆರೆಯಲ್ಲಿರುವ ಎಲ್ಲ ಅಮೆರಿಕನ್ ಯುದ್ಧಬಂದಿಗಳ ಬಿಡುಗಡೆ ಆಗಲಿದೆ. ಅಂತರರಾಷ್ಟ್ರೀಯ ಉಸ್ತುವಾರಿಯ ಮೇಲ್ವಿಚಾರಣೆಯಲ್ಲಿ ಸಮಗ್ರ ವಿಯಟ್ನಾಂನಲ್ಲಿ ಯುದ್ಧ ಸ್ತಂಭನ ಜಾರಿಗೆ ಬಂದ ಮೇಲೆ, ದಕ್ಷಿಣವಿಯಟ್ನಾಂನ ಜನತೆಗೆ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಅವಕಾಶ ಮತ್ತೆ ದೊರೆಯುವುದೆಂದು ಆಶಿಸಲಾಗಿದೆ.

ಈ ಒಪ್ಪಂದದಿಂದ ದಕ್ಷಿಣ ವಿಯಟ್ನಾಂನಲ್ಲಿ ಸಮ್ಮಿಶ್ರ ಸರಕಾರ ಒಂದನ್ನು ಅಧಿಕಾರಕ್ಕೆ ತರುವ ಕಮ್ಯುನಿಸ್ಟರ ಪ್ರಯತ್ನ ವಿಫಲಗೊಂಡಿದೆಯೆಂದು ದಕ್ಷಿಣ ವಿಯಟ್ನಾಂನ ಅಧ್ಯಕ್ಷರಾದ ಥಿಯೂ (Thieu) ಅವರು ಹೇಳಿರುವುದು ಗಮನಾರ್ಹ. ಏಕೆಂದರೆ ಇದು ಒಪ್ಪಂದವು ಪ್ರಸ್ತುತ ಅಧಿಕಾರದಲ್ಲಿರುವ ಸೈಗಾನ್ ಆಡಳಿತವೆ (ಅಂದರೆ ಥಿಯೂ ಆಡಳಿತ) ಕ್ರಮಬದ್ಧವೆಂದು ಅದರ ಪರಮಾಧಿಕಾರವನ್ನು ಮಾನ್ಯಮಾಡಿದಂತಾಯಿತು. ಅಮೆರಿಕನ್ ಪಡೆಗಳು ವಿಯಟ್ನಾಂನಿಂದ ಹಿಂದಿರುಗಿದರೂ ನೆರೆಯ ನಾಡುಗಳಲ್ಲಿ ಅಮೆರಿಕಾದ ಸೇನೆ ಎಂದಿನಂತೆ ಮುಂದುವರೆಯುವುದರಿಂದ ಅವಕಾಶ ದೊರೆತಾಗಲೆಲ್ಲಾ

ಕ್ಷಿಪ್ರ ಹಸ್ತಕ್ಷೇಪದ ಆತಂಕವೂ ಮುಂದುವರೆದೀತು. ಅಮೆರಿಕಾದ ಸೇನೆ ವಾಪಸಾತಿಗೆ ಬೆಂಬಲ ಕೊಡುತ್ತಿದ್ದ ಕಮ್ಯುನಿಸ್ಟ್ ಚೀನಾದ ನಾಯಕರು ಈಗ ಏಷ್ಯಾದಲ್ಲಿನ ಅಮೆರಿಕ ಸೈನ್ಯವನ್ನು ಆತರಾತುರ ದಿಂದ ಕುಗ್ಗಿಸುವುದರ ವಿರುದ್ಧ ಎಚ್ಚರಿಕೆ ನೀಡಿರುವುದನ್ನು ಇಲ್ಲಿ ಗಮನಿಸಬೇಕು. ಏಷ್ಯಾದಿಂದ ಅಮೆರಿಕಾ ಸೇನೆ ಕಾಲ್ತೆಗೆದಲ್ಲಿ, ಅವರಿಂದ ನಾಳೆ ಬೇರೆಯವರಿಗೆ "ದುಷ್ಪ್ರೇರಣೆ" ಉಂಟಾಗಬಹು ದೆಂದು ಚೀನಾ ಅಮೆರಿಕಾಕ್ಕೆ ತಿಳಿಸಿದೆ. ಅಮೆರಿಕಾ ಸೇನೆ ಕಾಲ್ತೆಗೆ ದಲ್ಲಿ ಜಪಾನಿ ಮಿಲಿಟರಿ ಪ್ರಾಬಲ್ಯ ಹೆಚ್ಚಬಹುದೆಂಬ ಭೀತಿ ಹಾಗೂ ರಷ್ಯಾ ವಿರೋಧಿ ನಿಲುವೇ ಚೀನದ ಈ ಶಂಕೆಗೆ ಕಾರಣವೆಂದು ತೋರುತ್ತದೆ.

ವಿಯಟ್ನಾಂ ಒಪ್ಪಂದಕ್ಕೆ ಜನವರಿ ೨೭, ೧೯೭೩ರಂದು ಸಹಿ ಹಾಕಿದ ಮುವತ್ತು ದಿವಸಗಳೊಳಗೆ ಅಂತರರಾಷ್ಟ್ರೀಯ ಸಮ್ಮೇಳನವು ಪ್ಯಾರಿಸಿನಲ್ಲಿ ಜರುಗುತ್ತದೆ. ಹತ್ತು ದೇಶಗಳು ಭಾಗವಹಿಸುವ ಈ ಸಮ್ಮೇಳನಕ್ಕೆ ಏಷ್ಯಾದ ಮುಖ್ಯದೇಶವಾದ ಭಾರತಕ್ಕೆ ಆಹ್ವಾನ ವಿಲ್ಲದಿರುವುದು ಆಶ್ಚರ್ಯವೇ ಸರಿ. ರಷ್ಯಾ, ಚೀನಾಗಳು ಭಾಗ ವಹಿಸುವ ಈ ಸಮ್ಮೇಳನದಲ್ಲಿ, ಅಮೆರಿಕಾ ಮತ್ತು ಉತ್ತರ ವಿಯಟ್ನಾಂಗಳು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕುರ್ಟ್– ವಾಲ್ಡ್‌ಹೀಂ ಅವರನ್ನು ಆಹ್ವಾನಿಸಿರುವುದು ಮತ್ತೊಂದು ವಿಶೇಷ. ಪ್ಯಾರಿಸ್ಸಿನಲ್ಲಿ ನಡೆಯುವ ಈ ಅಂತರರಾಷ್ಟ್ರೀಯ ಶಾಂತಿ ಸಮ್ಮೇಳನವು ಮೇಲೆ ತಿಳಿಸಿದ ಹಲಕೆಲವು ನ್ಯೂನತೆಗಳನ್ನು ಸಮಸ್ಯೆಗಳನ್ನು ಗಳನ್ನು ಎದುರಿಸಬೇಕಾಯಿತು. ಶಾಂತಿ ಒಪ್ಪಂದದ ಫಲವಾಗಿ ಹನ್ನೆರಡುವರ್ಷಗಳ ಯುದ್ಧವನ್ನು ಪರಸಮಾಪ್ತಿಗೊಳಿಸುವುದು ಕೇವಲ ಮೊದಲ ಹೆಜ್ಜೆಯೆನ್ನಬಹುದು. ಈಗ ನಿರೀಕ್ಷಿಸಲಾಗುತ್ತಿ ರುವ ಶಾಂತಿ ಸಮಗ್ರ ವಿಯಟ್ನಾಂನಲ್ಲಿ ನೆಮ್ಮದಿಯ ವಾತಾವರಣ

ವನ್ನು ಮೂಡಿಸುವಂತೆ, ಹಾಗೂ ಆ ಶಾಂತಿ ನೆಮ್ಮದಿಗಳೂ ಇಡೀ ಆಗ್ನೇಯ ಏಷ್ಯೆಕ್ಕೂ ಸದೃಢಶಾಂತಿಯನ್ನು ನೀಡುವಂತೆ ಎಲ್ಲಾ ಪಕ್ಷಗಳೂ ಶ್ರದ್ಧಾಪೂರ್ವಕ ಪ್ರಯತ್ನಗಳನ್ನು ಪ್ಯಾರಿಸ್ ಶಾಂತಿ ಸಮ್ಮೇಳನದ ಸಂದರ್ಭದಲ್ಲಿ ಮಾಡುವುದು ಅಗತ್ಯವೆಂದು ಕಾಣು ತ್ತದೆ. ಹಾಗಾದಲ್ಲಿ ಮಾತ್ರ ಹನ್ನೆರಡು ವರ್ಷಗಳ ಈ ಸಮರದಲ್ಲಿ ಮುವತ್ತು ಲಕ್ಷಕ್ಕೂ ಹೆಚ್ಚು ಜನರು ಪ್ರಾಣತೆತ್ತದ್ದು ಸಾರ್ಥಕ ವಾಗುತ್ತದೆ.

ವಿಯಟ್ನಾಂ ಯುದ್ಧದ ಅಂಕಿಅಂಶಗಳು

೧೨ ವರ್ಷದ ಯುದ್ಧದಲ್ಲಿ (೧೯೬೧-೭೩) ಸತ್ತವರ ಸಂಖ್ಯೆ:
೩೦ ಲಕ್ಷಕ್ಕೂ ಹೆಚ್ಚು

ಸಮರದಲ್ಲಿ ಸತ್ತ ಅಮೆರಿಕನ್ನರು: ೪೫,೯೪೧

ಗಾಯಗೊಂಡ ಅಮೆರಿಕನ್ನರು: ೩,೦೦,೬೩೫

ನಾಪತ್ತೆಯಾದ ಅಮೆರಿಕನ್ನರು: ೧೮೧೧

ವಿಮಾನ ಅಪಘಾತ, ಕಾಹಿಲೆ, ಆತ್ಮಹತ್ಯೆಗಳಿಂದ
ಮರಣಹೊಂದಿದರು: ೧೦೩೦೩

ಪ್ರಾಣನೀಗಿದ ದಕ್ಷಿಣ ವಿಯಟ್ನಾಮಿ ಸೈನಿಕರು: ೧,೮೧,೯೦೬

ಪ್ರಾಣ ನೀಗಿದ ಉತ್ತರ ವಿಯಟ್ನಾಮಿಯರು
(ಅಮೆರಿಕನ್ನರ ಪ್ರಕಾರ): ೯,೦೦,೯೦೯

ಅಮೆರಿಕಾ ೧೯ ೧–೧೯೭೨ರ ನಡುವೆ ಕಳೆದುಕೊಂಡ
ಯುದ್ಧ ವಿಮಾನಗಳು: ೩೬೦೦
ಹೆಲಿಕಾಪ್ಟರುಗಳು: ೫೧೩೪

ಅಮೆರಿಕಾ ೧೯೬೧–೭೨ರ ನಡುವೆ ಸುರಿದ ಬಾಂಬುಗಳ
ಪ್ರಮಾಣ: ೧,೦೦,೦೦,೦೦೦ ಟನ್ನುಗಳು

(ಈ ಪ್ರಮಾಣ ದ್ವಿತೀಯ ಮಹಾಯುದ್ಧದಲ್ಲಿ ಮೈತ್ರಿ ಕೂಟದ ಸೇನೆಗಳು ಉಪಯೋಗಿಸಿದ ಬಾಂಬಿನ ಎರಡ ರಷ್ಟಾಗುತ್ತದೆ.)

ನಿರಾಶ್ರಿತರ ಸಂಖ್ಯೆ: ಶೇ. ೮%

ನಿರಾಶ್ರಿತ ಶಿಬಿರದಲ್ಲಿರುವ ೧೬ಕ್ಕೂ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ: ೭,೫೦,೦೦೦

೧೯೫೦-೧೯೫೪ರ ನಡುವೆ ಅಮೆರಿಕಾ ದಕ್ಷಿಣ ವಿಯಟ್ನಾಂಗೆ ಕೊಟ್ಟ ನೆರವು: ೧೫೩.೫೨ ಕೋಟಿ ಡಾಲರುಗಳು

(೧ ಡಾಲರ್ = ರೂ. ೭-೫೦ ಪೈ.)

೧೯೫೪-೧೯೬೫ ರ ನಡುವೆ ಅಮೆರಿಕಾ ಕೊಟ್ಟ ನೆರವು: ೨೩೯.೭ ಕೋಟಿ ಡಾಲರ್‌ಗಳು

೧೯೬೧ರಲ್ಲಿ ಅಮೆರಿಕಾ ಅಧ್ಯಕ್ಷ ಕೆನಡಿಯವರ ಕಾಲದ ಪ್ರಾರಂಭದಲ್ಲಿ ಅಮೆರಿಕಾ ಸೈನಿಕರ ಸಂಖ್ಯೆ: ೧೦೦

೧೯೬೩ರಲ್ಲಿ ಕೆನಡಿಯವರ ಹತ್ಯೆಯಾಗುವ ಹೊತ್ತಿಗೆ ಇದ್ದ ಸೈನಿಕರ ಸಂಖ್ಯೆ: ೧೬.೭೩೨

ಅಧ್ಯಕ್ಷ ಜಾನ್‌ಸನ್ನರ ಕಾಲದಲ್ಲಿದ್ದ ಅಮೆರಿಕಾ ಸೈನಿಕರ ಸಂಖ್ಯೆ: ೫,೪೩,೦೦೦

ಅಧ್ಯಕ್ಷ ನಿಕ್ಸನ್ನರ ಕಾಲದಲ್ಲ ಸೈನ್ಯದ ಇಳಿಮುಖ (೧-೫-೧೯೭೨ರಲ್ಲಿ): ೬೯,೦೦೦

ಉಪಯುಕ್ತ ಗ್ರಂಥಗಳ ಪಟ್ಟಿ

Buttinger, Joseph : *The Smaller Dragon, A Political History of Vietnam.* New-York, 1958.

Fall, Bernard B. : *The Viet Min's Regime Government and Administration in the Democratic Republic of Vietnam.* 2nd edition, New York, 1956.
Two Vietnams. Paul Mall, 1963.

Hammer, Ellen : *The Struggle for Indo-China.* Stanford, 1954.
The Strugg'e for Indochina Continues Stanford, 1955.

Hall, D. G. E. : *A History of Southeast Asia.* London, 1964.

Lindholm. Richard W (editor) : *Vietnam The First Five Years.* East Lansing, 1959.

ವಿಯಟ್ನಾಂ—ಅಂಕಿಅಂಶಗಳು

	ಉತ್ತರ ವಿಯಟ್ನಾಂ	ದಕ್ಷಿಣ ವಿಯಟ್ನಾಂ
ವಿಸ್ತೀರ್ಣ (ಚ. ಮೈಲಿಗಳಲ್ಲಿ)	೬೨,೦೦೦	೬೫,೦೦೦
ಮುಖ್ಯ ರಫ್ತುಗಳು	ಬತ್ತ, ಕಲ್ಲಿದ್ದಲು	ಬತ್ತ, ರಬ್ಬರ್
ಜನಸಂಖ್ಯೆ (೧೯೬೮ರಲ್ಲಿ)	೧೫,೯೦೩,೦೦೦	೧೩,೯೬೦,೦೦೦
ಮುಖ್ಯ ಅಲ್ಪಸಂಖ್ಯಾತರು	ಥಾಯ್, ಮಿವೋ-ಥೊ-ನುಂಗ್	ಮೂಲ ನಿವಾಸಿಗಳು, ಚೀನಿಯರು
ಧರ್ಮ	ಕನ್‌ಫ್ಯೂಷಿಯಸ್ ಟಾವೊ	ಕನ್‌ಫ್ಯೂಷಿಯಸ್ ಟಾವೊ, ಕ್ರೈಸ್ತಮತ
ಅಕ್ಷರಸ್ಥರು	೨೦ %	೨೫ %
ಗ್ರಾಮಸ್ಥರು	೯೦ %	೮೮ %
ಆಡಳಿತ ಪಕ್ಷ	ಕಮ್ಯೂನಿಸ್ಟ್ ಪಾರ್ಟಿ	ನ್ಯಾಷನಲ್ ರೆವಲೂಷನರಿ ಪಾರ್ಟಿ
ರಾಜಕೀಯ ಪದ್ಧತಿಯ ಲಕ್ಷಣ	ಕಮ್ಯುನಿಸ್ಟ್ ಪಾರ್ಟಿಯ ನಿರಂಕುಶಾಧಿಕಾರ	ಏಕವ್ಯಕ್ತಿಯ ನಿರಂಕುಶಾಧಿಕಾರ
ದೇಶದ ಅಧಿಕೃತ ಹೆಸರು	ವಿಯಟ್ನಾಂ ಗಣರಾಜ್ಯ (Republic of Vietnam)	ವಿಯಟ್ನಾಂ ಪ್ರಜಾಸತ್ತಾತ್ಮಕ ಗಣರಾಜ್ಯ (Democratic Republic of Vietnam)
ಮುಖ್ಯ ಪಟ್ಟಣಗಳು—ಅವುಗಳ ಜನಸಂಖ್ಯೆ (೧೯೬೮ಕ್ಕೆ ಹಿಂದೆ)	ಹನಾಯ್ (ರಾಜಧಾನಿ) ೫,೦೦,೦೦೦ ಹೈಫಾಂಗ್ ೧,೮೫,೦೦೦	ಸೈಗಾನ್ (ರಾಜಧಾನಿ) ೧,೩೩೬,೦೦೦ ದನಾಂಗ್ ೧,೨೧,೪೦೦ ಹೂವೆ ೧,೦೩,೦೦೦
ರಾಷ್ಟ್ರಧ್ವಜ	ಚಿನ್ನದ ಬಣ್ಣದ ನಕ್ಷತ್ರದಿಂದ ಒಡಗೂಡಿದ ಕೆಂಪು ಧ್ವಜ	ಉದ್ದನೆಯ ಮೂರು ಕೆಂಪು ಗೆರೆಗಳುಳ್ಳ ಹಳದಿ ಧ್ವಜ
ನಾಣ್ಯ	ಡಾಂಗ್, ಹಾವೊ	ಡಾಂಗ್
ರಾಷ್ಟ್ರದ ನಿವ್ವಳ ಆದಾಯ (೧೯೬೮ರಲ್ಲಿ)	ಗೊತ್ತಿಲ್ಲ	೧,೧೬೧,೦೦೦,೦೦೦ ಅಮೆರಿಕನ್ ಡಾಲರ್‌ಗಳು
ಒಬ್ಬ ವ್ಯಕ್ತಿಯ ಸರಾಸರಿ ವಾರ್ಷಿಕ ವರಮಾನ	ಗೊತ್ತಿಲ್ಲ	೬೦ ಅಮೆರಿಕನ್ ಡಾಲರ್‌ಗಳು (೧ ಡಾಲರ್ = ೭.೫೦ ರೂಪಾಯಿಗಳು)